# ಭಗವದ್ಗೀತಾಪ್ರಸ್ಥಾನ





ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು



ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು- ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು 'ಪುರುಷ ಸರಸ್ವತೀ' ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರಕರಾದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಕಾಲಟಿಯಲ್ಲಿಯೇ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ. ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ. ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹೀ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥
'' ಓಂ ನಮೋ ಭಗವತೇ ಸಚ್ಚಿದಾನಂದಾಯ ''

ಅಧ್ಯಾತ್ಮ ಗ್ರಂಥಾವಳಿ

# ಭಗವದ್ಗೀತಾಪ್ರಸ್ಥಾನ

ಬರೆದವರು :
ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ : 300
Price List Catalog Sl.No.: 17

ಅಧ್ಯಾತ್ಮ ಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ
ದೂರವಾಣಿ: 08175-273820, ಮೊಬೈಲ್ : 9535790641
www.adhyatmaprakasha.org.
e-mail: secretary@adhyatmaprakasha.org
ಬೆಂಗಳೂರು ಶಾಖೆ :
ನಂ. 68 (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 560 070.
ದೂರವಾಣಿ : 080-2676 5548, ಮೊಬೈಲ್ : 9606691002
e-mail: shankara.bhaskara@gmail.com
2025

**BHGAVADGETAPRASTHANA -**
Written by Sri Sri Sachidanandendra Saraswathi Swamiji,
Published by Adhyatma Prakasha Karyalaya, Holenarasipura-573211,
Hassan District, Karnataka State, INDIA.
**Phone: 08175-273820 Mobile : 9535790641**
website : www.adhyatmaprakasha.org
e-mail : secretary@adhyatmaprakasha.org

1ನೆಯ ಮುದ್ರಣ : 2025 ಪ್ರತಿಗಳು: 2000

ಮುದ್ರಣ ಕಾಗದ : 70 GSM NS Maplitho

ಪುಟಗಳು : 88

ಬೆಲೆ : ರೂ. 50/-

© ಅಧ್ಯಾತ್ಮಪ್ರಕಾಶಕಾರ್ಯಾಲಯದವು

*ಪ್ರತಿಗಳು ದೊರೆಯುವ ಸ್ಥಳ :*
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211,
ದೂರವಾಣಿ: 08175-273820, ಮೊಬೈಲ್ : 9535790641
e-mail: secretary@adhyatmaprakasha.org

ಬೆಂಗಳೂರು ಶಾಖೆ :
ಅಧ್ಯಾತ್ಮಪ್ರಕಾಶಕಾರ್ಯಾಲಯ
ನಂ. 68 (ಹೊಸ ನಂ. 6), 6ನೇ ಮುಖ್ಯರಸ್ತೆ (APK ರಸ್ತೆ), 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 560 070
ದೂ:080-26765548, ಮೊಬೈಲ್:9606691002
e-mail: shankara.bhaskara@gmail.com

ಮುದ್ರಣ :
ಶ್ರೀರಾಮ ಪ್ರಿಂಟರ್ಸ್, ನಂ. 36/ಸಿ, ಗಣಪತಿಪುರ, ಎಲಚೇನಹಳಿ,
(ಮೆಟ್ರೊ ಪಿಲ್ಲರ್ ನಂ. 114 ಎದುರು) ಕನಕಪುರ ಮುಖ್ಯರಸ್ತೆ,
ಬೆಂಗಳೂರು - 560 078. ಮೊಬೈಲ್: 98453 46197

# ಪ್ರಕಾಶಕರ ಬಿನ್ನಹ

ಭಗವದ್ಗೀತೆ ಮಹಾಭಾರತದ ಒಂದು ಭಾಗವಾಗಿದೆ. ಆದರೆ ಶೋಕ-ಮೋಹಗಳಿಗೆ ಒಳಗಾದ ಅರ್ಜುನನಿಗೆ ಕೃಷ್ಣರೂಪಿಯಾದ ಸಾಕ್ಷಾತ್ ಭಗವಂತನೇ ಉಪದೇಶಿಸಿದ್ದು ಎಂಬುದು ಇದರ ಹೆಚ್ಚುಗಾರಿಕೆ. ಇದಕ್ಕೆ ಅನೇಕರು ಅನೇಕ ಬಗೆಯಾಗಿ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಆದರೆ ಶ್ರೀಶಂಕರಾಚಾರ್ಯರ ವಿವರಣೆಯು ಹೃದಯಂಗಮವಾಗಿದೆ. ಅದು ಸಂಸ್ಕೃತದಲ್ಲಿರುವದರಿಂದ ಕನ್ನಡ ಜನತೆಗೆ ತಿಳಿಯುವಂತೆ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು ಭಗವದ್ಗೀತೆಯಲ್ಲಿಯ ಸರ್ವಸಮ್ಮತೋಪದೇಶಗಳನ್ನು ತಿಳಿಸಲು 'ಭಗವದ್ಗೀತಾಪ್ರಸ್ಥಾನ' ಎಂಬ ಉಪನ್ಯಾಸಮಾಲಿಕೆಯನ್ನು ಅನುಗ್ರಹಿಸಿರುತ್ತಾರೆ. ಈ ಉಪನ್ಯಾಸಗಳು ಹಿಂದೆ (1953) ಹುಬ್ಬಳ್ಳಿಯಲ್ಲಿ ನೀಡಿದ ಶ್ರೀಶಂಕರಭಗವತ್ಪಾದರ ಸರ್ವಸಮ್ಮತೋಪದೇಶಗಳು ಎಂಬ ಉಪನ್ಯಾಸಮಾಲಿಕೆಯಲ್ಲಿ ಬಂದವೇ ಆಗಿವೆ. ಗೀತೋಪದೇಶಗಳು ಬೇರೆಯಾಗಿ ಇದ್ದರೆ ಗೀತಾಸಾರಗ್ರಾಹಿಗಳಿಗೆ ಉಪಯೋಗವಾಗುವದೆಂದು ಆ ಹನ್ನೆರಡು ಉಪದೇಶಗಳನ್ನು ಸಂಗ್ರಹಿಸಿ ವಾಚಕರಿಗೆ ಈ ಗ್ರಂಥದಲಿಲ್ಲ ನೀಡಲಾಗಿದೆ.

ಈ ಸಂಗ್ರಹಗ್ರಂಥವು ಮುದ್ರಣವಾಗಬೇಕೆಂದು ಬಯಸಿ ಕಾರ್ಯಾಲಯದ ವಿಶ್ವಸ್ತಸಮಿತಿಯ ಅಧ್ಯಕ್ಷರಾದ ಶ್ರೀಯುತ ರವಿಯವರು ಮುದ್ರಣದ ಸಂಪೂರ್ಣ ವೆಚ್ಚವನ್ನು ಭರಿಸಿರುತ್ತಾರೆ. ಅವರಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ವಾಚಕರು ಎಂದಿನಂತೆ ಆದರದಿಂದ ಈ ಗ್ರಂಥವನ್ನು ಬರಮಾಡಿ ಕೊಳ್ಳುವರೆಂದು ಅಶಿಸಲಾಗಿದೆ. ಕಾರ್ಯಾಲಯದಲ್ಲಿ ನಿರಂತರವಾಗಿ ನಡೆಯುತ್ತಿರುವ ಗ್ರಂಥಪ್ರಕಟಣೆಗೆ ಸಹಾಯನೀಡಬೇಕೆಂದು ಪ್ರಾರ್ಥಿಸುತೇವೆ.

ಗೀತಾಜಯಂತಿ ಪ್ರಕಾಶಕರು

**1-12-2025**

# ವಿಷಯಾನುಕ್ರಮಣಿಕೆ


| | ವಿಷಯಗಳು | ಪುಟ |
|---|---|---|
| 1. | ಅವತರಣಿಕೆ | 1 |
| 2. | ಭಗವದ್ಗೀತೆಯ ಪ್ರತಿಪಾದ್ಯವಿಷಯ | 8 |
| 3. | ಶೋಕಮೋಹನಿವೃತ್ತಿಯೇ ಗೀತೆಗೆ ಗುರಿ | 14 |
| 4. | ಪ್ರವೃತ್ತಿನಿವೃತ್ತಿಧರ್ಮಗಳು | 19 |
| 5. | ಗೀತೋಕ್ತ ಜ್ಞಾನವೂ ಸಂನ್ಯಾಸವೂ | 24 |
| 6. | ಆಶ್ರಮಸಂನ್ಯಾಸವೂ ಕರ್ಮಯೋಗವೂ | 33 |
| 7. | ಲೋಕಸಂಗ್ರಹಾರ್ಥಕರ್ಮ | 39 |
| 8. | ಕರ್ಮಯೋಗದ ಗುರಿ | 48 |
| 9. | ಧ್ಯಾನಯೋಗ | 54 |
| 10. | ಧ್ಯಾನಯೋಗದ ಅಸಾಧಾರಣಸ್ವರೂಪ | 63 |
| 11. | ಭಕ್ತಿಯೋಗ | 73 |
| 12. | ಉಪಸಂಹಾರ | 78 |


* * * * *

## ಶ್ರೀಕೃಷ್ಣಸ್ತುತಿ

ಕೃಷ್ಣೋ ರಕ್ಷತು ನೋ ಜಗತ್ತ್ರಯಗುರುಃ ಕೃಷ್ಣಂ ನಮಸ್ಯಾಮ್ಯಹಂ
ಕೃಷ್ಣೇನಾಮರಶತ್ರವೋ ವಿನಿಹತಾಃ ಕೃಷ್ಣಾಯ ತುಭ್ಯಂ ನಮಃ ।
ಕೃಷ್ಣಾದೇವ ಸಮುತ್ಥಿತಂ ಜಗದಿದಂ ಕೃಷ್ಣಸ್ಯ ದಾಸೋಽಸ್ಮ್ಯಹಂ
ಕೃಷ್ಣೇ ಭಕ್ತಿರತೀವ ಮೇಽಸ್ತುವಿಮಲಾ ಹೇ ಕೃಷ್ಣ ರಕ್ಷಸ್ವ ಮಾಮ್ ॥

# ಗೀತಾಮಾಹತ್ಮ್ಯೆ

ಸರ್ವಶಾಸ್ತ್ರಮಯೀಗೀತಾ ಸರ್ವವೇದಮಯೋ ಹರಿಃ ।
ಸರ್ವತೀರ್ಥಮಯೀ ಗಂಗಾ ಸರ್ವವೇದಮಯೋ ಮನುಃ ॥

ಗೀತಾ ಗಂಗಾ ಚ ಗಾಯತ್ರೀ ಗೋವಿಂದೇತಿ ಹೃದಿಸ್ಥಿತೇ ।
ಚತುರ್ಗಕಾರಸಂಯುಕ್ತೇ ಪುನರ್ಜನ್ಮ ನ ವಿದ್ಯತೇ ॥

ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈಃ ಶಾಸ್ತ್ರವಿಸ್ತರೈಃ ।
ಯಾ ಸ್ವಯಂ ಪದ್ಮನಾಭಸ್ಯ ಮುಖಪದ್ಮಾದ್ವಿನಿಃಸೃತಾ ॥

ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ ।
ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥

॥ ಓಂ ॥

# ಭಗವದ್ಗೀತಾಪ್ರಸ್ಥಾನ

## 1. ಅವತರಣಿಕೆ

ಶ್ರೀ ಭಗವದ್ಗೀತೆಯು ಲೋಕದಲ್ಲಿ ಅತ್ಯಂತ ಪ್ರಸಿದ್ಧವಾದ ಗ್ರಂಥವಾಗಿದೆ. ಎಲ್ಲಾ ಮತದವರೂ, ದಾರ್ಶನಿಕರೂ ತಮ್ಮ ಸಿದ್ಧಾಂತಕ್ಕೆ ಪ್ರಮಾಣವಾಗಿ ಭಗವದ್ಗೀತೆಯನ್ನು ಉದಾಹರಿಸುತ್ತಾರೆ. ಸಾಮಾನ್ಯವಾಗಿ ಪ್ರಪಂಚದ ಎಲ್ಲಾ ಭಾಷೆಗಳಿಗೂ ಭಗವದ್ಗೀತೆಯು ಅನುವಾದವಾಗಿರುತ್ತದೆ. ಪ್ರಪಂಚದ ಹೆಚ್ಚಿನ ಜನರು ತಮ್ಮ ಜೀವನದ ಬೆಳಕಾಗಿ ಗೀತೆಯ ಒಂದೊಂದು ವಾಕ್ಯವನ್ನೇ ಆದರ್ಶವಾಗಿಟ್ಟುಕೊಂಡು ಜೀವನವನ್ನು ತ್ಯಾಗಮಯವಾಗಿ ಕಳೆಯುತ್ತಿದಾರೆ. ಗೀತೆಯ ಸಾರವನ್ನು ತಿಳಿದುಕೊಂಡರೆ ಸಕಲ ಪುರುಷಾರ್ಥ ಗಳೂ ಕೈವಶವಾದಂತೆ ಎಂದು ಭಾವಿಸುವವರೇ ಈ ಗ್ರಂಥಪಠಣಕ್ಕೆ ಮುಖ್ಯಾಧಿಕಾರಿಗಳು. ಅವರಿಗೋಸ್ಕರವೇ ಈ ಗ್ರಂಥವು ಹುಟ್ಟಿರುವದು.

ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರ – ಇವು ಮೂರೂ ವೇದಾಂತದ ಒಂದೇ ತತ್ತ್ವವನ್ನು ಮೂರು ಬೇರೆಬೇರೆಯ ದೃಷ್ಟಿಕೋನದಿಂದ ಪ್ರತಿಪದಿಸುತ್ತಿವೆ. ಈ ಮೂರೂ ಗ್ರಂಥಗಳೂ ತತ್ತ್ವಗಳನ್ನು ಹೇಳುವದಕ್ಕೆ ಹೊರಟಿರುವವು. ಹೀಗೆ ಮೂರು ಬೇರೆಬೇರೆಯ ದಿಕ್ಕಿನಿಂದಾಗಿರುವದರಿಂದ ಇವನ್ನು ಪ್ರಸ್ಥಾನಗಳು ಎನ್ನುತ್ತಾರೆ. ಪ್ರಸ್ಥಾನ ಎಂಬ ಮಾತಿಗೆ 'ಹೊರಡುವದು' ಎಂದು ಅರ್ಥವಾಗುವದು. ಉಪನಿಷತ್ತುಗಳನ್ನು ಶ್ರುತಿಪ್ರಸ್ಥಾನ ಅಥವಾ ಸಿದ್ಧಾಂತಪ್ರಸ್ಥಾನವೆಂದೂ, ಗೀತೆಯನ್ನು ಸ್ಮೃತಿಪ್ರಸ್ಥಾನ ಅಥವಾ ಸಾಧನ ಪ್ರಸ್ಥಾನವೆಂದೂ, ಬ್ರಹ್ಮಸೂತ್ರವನ್ನು ನ್ಯಾಯಪ್ರಸ್ಥಾನವೆಂದೂ ಕರೆಯುವ ಪದ್ಧತಿಯು ವೇದಾಂತಿಗಳಲ್ಲಿರುತ್ತದೆ. ಅವುಗಳಲ್ಲಿಯ ಗೀತಾಪ್ರಸ್ಥಾನವನ್ನು ಕುರಿತು ವಿಚಾರವನ್ನು ಮಾಡೋಣ.

ಭಗವದ್ಗೀತೆಗೆ ನೂರಾರು ವ್ಯಾಖ್ಯಾನಗಳು ಆಗಿರುತ್ತವೆ. ಅವುಗಳಲ್ಲಿ ನಮಗೆ ಪ್ರಕೃತವಾಗಿರುವದು ಶಂಕರಾಚಾರ್ಯರ ಭಾಷ್ಯವೇ. ಈ ಆಚಾರ್ಯರ ಮತದಂತೆ ಗೀತೆಯಲ್ಲಿ ಹೇಳಿರುವದೆಲ್ಲ ಪ್ರವೃತ್ತಿಧರ್ಮ,

ನಿವೃತ್ತಿಧರ್ಮ– ಎಂಬ ಎರಡರಲ್ಲಿ ಅಡಕವಾಗಿರುತ್ತದೆ. ಉಪನಿಷತ್ತುಗಳಲ್ಲಿ ಹೇಳಿರುವದರ ಸಾರವನ್ನೇ ಇಲ್ಲಿ ಹೇಳಿರುವದರಿಂದ ಇದೂ ವೇದಾಂತಕ್ಕೆ ಪ್ರಮಾಣವಾಗಿರುತ್ತದೆ. ಉಪನಿಷದ್ರೂಪವಾಗಿರುವ ಗ್ರಂಥರಾಶಿಯು ಬಲು ದೊಡ್ಡದು; ಅದನ್ನು ಅರ್ಥಮಾಡಿಕೊಳ್ಳುವದು ಸಾಮಾನ್ಯರಿಗೆ ದಕ್ಕುವಂತೆ ಇರುವದಿಲ್ಲ. ಆದರೆ ಗೀತೆಯ ವಿಷಯದಲ್ಲಿ ಹಾಗಿಲ್ಲ. ಇದರಲ್ಲಿ ಏಳುನೂರೇ ಶ್ಲೋಕಗಳಲ್ಲಿ ವೇದಾಂತದ ಸಾರವನ್ನೆಲ್ಲ ಹಿಂಡಿಟ್ಟಿದೆ. ಭಾಷೆಯು ಬಹಳ ಸರಳವಾಗಿದೆ. ವಿಷಯವಿಭಾಗವೂ ನಿಸ್ಸಂದಿಗ್ಧವಾಗಿದೆ. ಉಪನಿಷತ್ತು ಸಿದ್ಧಾಂತ ಪ್ರಧಾನವಾಗಿರುತ್ತದೆಯಾದ್ದರಿಂದ ಅದರಲ್ಲಿ ಸಾಧನಗಳನ್ನು ಸಂಗ್ರಹವಾಗಿ ಎಲ್ಲಿಯೋ ಒಂದು ಕಡೆಯಲ್ಲಿ ತಿಳಿಸಿರುತ್ತದೆ; ಆದರೆ ಇಲ್ಲಿ ಸಿದ್ಧಾಂತಕ್ಕೆ ಅನುಗುಣ ವಾದ ಸಾಧನವನ್ನು ತಿಳಿಸುವದರಲ್ಲಿಯೇ ಹೆಚ್ಚಿನ ತಾತ್ಪರ್ಯವಿರುತ್ತದೆ. ವೇದದಲ್ಲಿ ಹೇಳಿರುವ ಕರ್ಮಗಳಿಗೂ ಉಪಾಸನೆಗಳಿಗೂ ಸಂಬಂಧವು ಹೇಗೆ? ಅವು ಜ್ಞಾನಕ್ಕೆ ಯಾವ ದ್ವಾರದಿಂದ ಉಪಾಯವಾಗಿವೆ? – ಎಂಬುದನ್ನು ಸ್ಪಷ್ಟವಾಗಿ ವಿವರಿಸಿ ಸಿದ್ಧಾಂತಕ್ಕೆ ಸಂಬಂಧಪಡಿಸಿರುವದು ಗೀತೆಯ ವಿಶೇಷವು. ಸಾಂಖ್ಯಯೋಗಾದಿದರ್ಶನಗಳಲ್ಲಿರುವ ವೇದಾವಿರುದ್ಧವಾಗಿರುವ ಪ್ರಕ್ರಿಯೆ ಗಳನ್ನು ತೆಗೆದುಕೊಂಡು ವೇದಾಂತಕ್ಕೆ ಹೊಂದಿಸಿಕೊಂಡಿರುವದೂ ಇದರಲ್ಲಿ ರುವ ಒಂದು ಕೌಶಲ್ಯವು. ಈ ಪ್ರಸ್ಥಾನದಲ್ಲಿ ಇಂಥಿಂಥ ಸಾಧನಗಳನ್ನು ಅಭ್ಯಾಸ ಮಾಡಿದರೆ ಜ್ಞಾನವುಂಟಾಗುತ್ತದೆ ಎಂಬುದನ್ನು ಪ್ರತಿಪಾದಿಸುವದರಿಂದ ಅವುಗಳನ್ನು ಅನುಸರಿಸಿ ಎಲ್ಲರೂ ಅನುಭವಕ್ಕೆ ತಂದುಕೊಳ್ಳುವದಕ್ಕೆ ಆಗು ವಂತಿದೆ. ಆದ್ದರಿಂದ ಈ ಅರ್ಥದಲ್ಲಿ ಗೀತಾಪ್ರಸ್ಥಾನವು ಸರ್ವಸಮ್ಮತ ವಾಗಿರುತ್ತದೆ.

ಗೀತಾಪ್ರಸ್ಥಾನವನ್ನು ಚರ್ಚಿಸುವದಕ್ಕೆ ಮೊದಲು ತಿಳಿದಿರಬೇಕಾದ ಒಂದು ವಿಷಯವಿದೆ. ಭಗವದ್ಗೀತೆಗೆ ಭಾಷ್ಯವನ್ನು ಶಂಕರಾಚಾರ್ಯರೊಬ್ಬರೇ ಬರೆದಿಲ್ಲ. ಅವರಿಗಿಂತ ಮೊದಲು ಎಷ್ಟೋ ವ್ಯಾಖ್ಯಾನಗಳನ್ನು ಹಿಂದಿನವರು ಬೇರೆಬೇರೆಯ ದೃಷ್ಟಿಯಿಂದ ಬರೆದಿದ್ದರು.

ತದಿದಂ ಗೀತಾಶಾಸ್ತ್ರಂ ಸಮಸ್ತ ವೇದಾರ್ಥಸಾರಸಙ್ಗ್ರಹಭೂತಂ ದುರ್ವಿಜ್ಞೇಯಾರ್ಥಮ್ । ತದರ್ಥಾವಿಷ್ಕರಣಾಯ ಅನೇಕೈರ್ವಿವೃತಪದ ಪದಾರ್ಥವಾಕ್ಯವಾಕ್ಯಾರ್ಥನ್ಯಾಯಮಪಿ ಅತ್ಯನ್ತ ವಿರುದ್ಧಾನೇಕಾರ್ಥತ್ವೇನ

ಲೌಕಿಕೈರ್ಗೃಹ್ಯಮಾಣಮುಪಲಭ್ಯ ಅಹಂ ವಿವೇಕತೋಽರ್ಥನಿರ್ಧಾರಣಾರ್ಥಂ ಸಂಕ್ಷೇಪತೋ ವಿವರಣಂ ಕರಿಷ್ಯಾಮಿ ॥

ವೇದಾರ್ಥಸಾರವನ್ನೆಲ್ಲ ಸಂಗ್ರಹಿಸಿರುವ ಈ ಗೀತಾಶಾಸ್ತ್ರದ ಅರ್ಥವನ್ನು ಬಿಡಿಸಿ ತಿಳಿಸುವದಕ್ಕಾಗಿ ಅನೇಕರು ಪದಪದಾರ್ಥವಾಕ್ಯವಾಕ್ಯಾರ್ಥನ್ಯಾಯ–ಇವುಗಳನ್ನು ಬಿಡಿಸಿ ತಿಳಿಸಿದ್ದರೂ ಅತ್ಯಂತ ವಿರುದ್ಧವಾದ ಅನೇಕಾರ್ಥಗಳನ್ನು ಇದರ ಅಭಿಪ್ರಾಯವೆಂತ ಬೇರೆಬೇರೆಯ ಜನರು ಗ್ರಹಿಸುತ್ತಿರುವದನ್ನು ಕಂಡು ನಾನು ಇದಕ್ಕೆ ಸ್ವಲ್ಪದರಲ್ಲಿ ಅರ್ಥವಿವರಣವನ್ನು ಕೊಡುವೆನು – ಎಂದು ಆಚಾರ್ಯರು ಬರೆದಿರುವದರಿಂದಲೂ ಅವರು ಅಂಥ ಕೆಲವರ ಮತಗಳನ್ನು ಗೀತಾಭಾಷ್ಯದಲ್ಲಿಯೇ ಖಂಡಿಸಿರುವದರಿಂದಲೂ ಹೀಗೆಂದು ತಿಳಿದುಬರುತ್ತದೆ. ಅಷ್ಟೇ ಅಲ್ಲ! ಆಚಾರ್ಯರಿಂದೀಚೆಗೆ ಆಗಿರುವ ಪ್ರಸ್ಥಾನಭಾಷ್ಯಗಳಿಗೇನೂ ಕಡಿಮೆಯಿಲ್ಲ; ವ್ಯಾಖ್ಯಾನೋಪವ್ಯಾಖ್ಯಾನಗಳೂ ಪ್ರಬಂಧಗಳೂ ಲೆಕ್ಕವಿಲ್ಲ ದಷ್ಟು ಆಗಿವೆ, ಆಗುತ್ತಲೂ ಇವೆ. ಒಬ್ಬೊಬ್ಬರೂ ಇದೇ ಗೀತಾರ್ಥವೆಂದು ಸಾರುತ್ತಲೂ ಇದ್ದಾರೆ. "ಕಲ್ಪತರುವಿನ ತೋಟವನ್ನು ಬೆಳೆದರೂ ಬೆಳೆಯ ಬಹುದು, ಗೀತಾರ್ಥವನ್ನು ಪೂರ ವಿಚಾರಿಸುವದಕ್ಕೆ ಆಗಲಾರದು" ಎಂದು ಒಬ್ಬ ಸಾಧುಗಳು ಹೇಳಿದ್ದಾರಂತೆ; ಸದ್ಯಕ್ಕೆ ಗೀತಾವ್ಯಾಖ್ಯಾನಗಳೆಷ್ಟು?– ಎಂಬುದನ್ನು ನಿರ್ಧರಿಸುವದಕ್ಕೂ ಆಗಲಾರದು ಎಂದರೂ ತಪ್ಪಾಗಲಾರದು!

ಈ ವಿಷಯವನ್ನೇಕೆ ಇಲ್ಲಿ ಪ್ರಸ್ತಾಪಿಸಿದೇನೆಂದರೆ ಗೀತೆಗೆ ವಿರುದ್ಧಾರ್ಥ ಗಳನ್ನು ಈಗಲೂ ಜನರು ತಿಳಿದುಕೊಂಡಿರುತ್ತಾರೆ; ಆದ್ದರಿಂದ ಈಗಲೂ ವಿವೇಚನಾಪೂರ್ವಕವಾಗಿ ಅರ್ಥನಿರ್ಧಾರಣೆ ಮಾಡಿಕೊಳ್ಳುವದು ತತ್ತ್ವ ಜಿಜ್ಞಾಸುಗಳಿಗೆ ಅವಶ್ಯವೇ ಆಗಿರುತ್ತದೆ. ಗೀತೆಯು ಕರ್ಮವನ್ನು ಹೇಳುತ್ತದೆ, ಭಕ್ತಿಯನ್ನು ಹೇಳುತ್ತದೆ, ಜ್ಞಾನವನ್ನು ಹೇಳುತ್ತದೆ, ಜ್ಞಾನಕರ್ಮಸಮುಚ್ಚಯ ವನ್ನು ಹೇಳುತ್ತದೆ, ಯೋಗವನ್ನು ಹೇಳುತ್ತದೆ, ಸಂಪೂರ್ಣಯೋಗವೆಂಬ ಸರ್ವಯೋಗಸಾಮರಸ್ಯವನ್ನು ಹೇಳುತ್ತದೆ – ಎಂದು ವಿಧವಿಧವಾಗಿ ಅಭಿಪ್ರಾಯಪಡುವ ವ್ಯಾಖ್ಯಾತೃಗಳು ಈಗಲೂ ಇರುತ್ತಾರೆ. ಹೀಗಿರುವಲ್ಲಿ ಗೀತೆಗೆ ಇದೇ ಅರ್ಥವೆಂಬುದನ್ನು ಹೇಗೆ ನಿರ್ಧರಿಸುವದು? ಶ್ರೀಶಂಕರ ಭಗವತ್ಪಾದರವರ ವ್ಯಾಖ್ಯಾನವು ಸರ್ವಸಮ್ಮತವೆಂದಾದರೂ ಹೇಗೆ ಗೊತ್ತು ಮಾಡುವದು?– ಎಂಬ ಶಂಕಾಪಿಶಾಚಿಯು ಎದ್ದುಕೊಳ್ಳುವದಕ್ಕೆ ಈ ವ್ಯಾಖ್ಯಾನ

ವೃಕ್ಷಗಳ ಕಾಡಿನ ನೆರವಿರುತ್ತದೆ ಎಂಬುದು ಸ್ಪಷ್ಟವಾಗಿರುತ್ತದೆ. ಆದ್ದರಿಂದ ಗೀತಾಪ್ರಸ್ಥಾನದ ವಿಚಾರವನ್ನು ಹೇಗೆ ಮಾಡುವದು?- ಎಂಬ ಪ್ರಶ್ನೆಗೆ ಉತ್ತರವನ್ನು ಹೇಳಿ ಆಮೇಲೆ ಈ ವಿಚಾರವನ್ನು ಮುಂದುವರಿಸಬೇಕಾಗಿದೆ.

ಆಚಾರ್ಯರ ಮತದಂತೆ ಗೀತೆಯಲ್ಲಿ ವೇದಾಂತದ ಅಭಿಪ್ರಾಯವನ್ನೇ ಸಂಗ್ರಹಿಸಿ ಸಮಂಜಸವಾಗಿ ತಿಳಿಸಿರುತ್ತದೆ. ಈ ಕಾರಣದಿಂದಲೇ ಅವರು ಗೀತೆಗೆ ಅರ್ಥವನ್ನು ಬರೆದಿರುತ್ತಾರೆ. ಈಗಿನ ಕಾಲಕ್ಕೆ, ಭಗವದ್ಗೀತೆಯು ಉಪನಿಷತ್ತುಗಳ ಅಭಿಪ್ರಾಯವನ್ನೇ ತಿಳಿಸುತ್ತದೆ ಎಂಬ ಮತದ ಭಾಷ್ಯಕಾರರ ಅನುಯಾಯಿಗಳೂ ಇರುತ್ತಾರೆ: ಅದರಲ್ಲಿ ಸ್ವತಂತ್ರವಾಗಿಯೇ ಒಂದು ಮೋಕ್ಷಮಾರ್ಗವು ಉಪದಿಷ್ಟವಾಗಿರುತ್ತದೆ ಎನ್ನುವ ಅಭಿಪ್ರಾಯದವರೂ ಇರುತ್ತಾರೆ. ಆದರೆ ಉಪನಿಷತ್ತುಗಳಿಗೆ ಬೇರೆಬೇರೆ ಅರ್ಥವೆನ್ನುವವರಿಗಿಂತ ಅವಕ್ಕೆಲ್ಲ ಏಕವಾಕ್ಯತೆಯನ್ನುಂಟುಮಾಡಿ ವೇದಾಂತಾರ್ಥವನ್ನು ತಿಳಿಯಿಸುವ ಭಾಷ್ಯಕಾರರುಗಳ ಮತಕ್ಕೆ ಹೇಗೆ ನಾವು ಮೊದಲು ಗೌರವವನ್ನು ಸಲ್ಲಿಸುವೆವೋ ಹಾಗೆಯೇ ಪ್ರಸ್ಥಾನತ್ರಯಕ್ಕೂ ಏಕವಾಕ್ಯತೆಯನ್ನು ಕಲ್ಪಿಸಿರುವ ಆಚಾರ್ಯರುಗಳ ಹೇಳಿಕೆಯನ್ನು ನಾವು ಮೊದಲು ಕೇಳುವದು ಯುಕ್ತವಾಗಿರುತ್ತದೆ. ಅದರಲ್ಲಿಯೂ ವೇದಾಂತವು ಅನುಭವಾನುಸಾರಿಯಾದ ಅರ್ಥವನ್ನು ಹೇಳುವದೆಂದು ಅಭಿಪ್ರಾಯಪಟ್ಟು ಅದನ್ನೇ ಗೀತೆಯಲ್ಲಿಯೂ ತಿಳಿಸಿದೆ ಎನ್ನುವ ಆಚಾರ್ಯರ ಮಾತಿಗೆ ಮೊದಲು ಕಿವಿಗೊಡಬೇಕಾದದ್ದು ವಿಚಾರಪರರೆಲ್ಲರ ಕರ್ತವ್ಯವಾಗಿರುತ್ತದೆ. ಗೀತೆಯ ತಾತ್ಪರ್ಯದ ವಿಷಯದ ನನ್ನ ಅಭಿಪ್ರಾಯವೇನೆಂಬ ಬಗ್ಗೆ ಹೊಳೆನರಸೀಪುರದ ಅಧ್ಯಾತ್ಮಪ್ರಕಾಶ ಕಾರ್ಯಾಲಯದಲ್ಲಿ 'ಭಗವದ್ಗೀತೆಯ ಉಪನ್ಯಾಸಗಳು' ಎಂಬ ಹೆಸರಿನಿಂದ ಒಂದು ದೊಡ್ಡ ಗ್ರಂಥವನ್ನೇ ಪ್ರಕಟಿಸಲಾಗಿರುತ್ತದೆ. ಆದ್ದರಿಂದ ಈಗ ಮತ್ತೆ ಅಷ್ಟು ವಿಸ್ತಾರವಾದ ಗೀತಾವಿಮರ್ಶೆಯು ಅವಶ್ಯವಿರುವದಿಲ್ಲ; ಆದರೂ ಗೀತಾಪ್ರಸ್ಥಾನವನ್ನು ಕುರಿತು ಸ್ವಲ್ಪ ಹೇಳುವೆನು.

ಭಗವದ್ಗೀತೆಯ ಅರ್ಥವನ್ನು ವಿವರಿಸುವದಕ್ಕೆ ಆಚಾರ್ಯರು ಬರೆದುಕೊಂಡಿರುವ ಅವತರಣಿಕೆಯ ಪ್ರಾರಂಭದಲ್ಲಿ ಈ ಶ್ಲೋಕವಿದೆ:

ನಾರಾಯಣಃ ಪರೋಽವ್ಯಕ್ತಾದಣ್ಡಮವ್ಯಕ್ತಸಂಭವಮ್ ।
ಅಣ್ಡಸ್ಯಾನ್ತಸ್ತ್ವಿಮೇ ಲೋಕಾಃ ಸಪ್ತದ್ವೀಪಾ ಚ ಮೇದಿನೀ ॥

ಈ ಶ್ಲೋಕವು ಯಾವ ಪುರಾಣದ್ದೆಂಬುದು ಸ್ಪಷ್ಟವಾಗಿ ತಿಳಿದಿಲ್ಲ. ಇದು ವ್ಯಾಸವಚನವೆಂದು ಬೃಹದಾರಣ್ಯಕವಾರ್ತಿಕದಲ್ಲಿದೆ. ಅದೇನೇ ಆಗಲಿ, ಶ್ಲೋಕದ ಅಭಿಪ್ರಾಯವು ಇಷ್ಟು: 'ನಾರಾಯಣನೆಂಬ ಭಗವಂತನು ವ್ಯಕ್ತಾವ್ಯಕ್ತ ಪ್ರಪಂಚಗಳೆರಡನ್ನೂ ಮೀರಿರುತ್ತಾನೆ. ಆದರೆ ಅವನಿಗೆ ಅಧೀನವಾಗಿದ್ದು ಕೊಂಡಿರುವ ಅವ್ಯಕ್ತದಿಂದ ಬ್ರಹ್ಮಾಂಡವೂ, ಅದರಲ್ಲಿ ವಿರಾಟ್ಪುರುಷನೂ ಆಗಿರುತ್ತಾರೆ. ಹದಿನಾಲ್ಕು ಲೋಕಗಳೂ ಈ ಅಂಡದೊಳಗೇ ಇವೆ; ಸಪ್ತದ್ವೀಪದ ನಮ್ಮ ಭೂಲೋಕವೂ ಅದರೊಳಗೇ ಇದೆ. ನಾವುಗಳು ಯಾವ ಲೋಕದಲ್ಲಿಯೇ ಇದ್ದರೂ ಆ ಭಗವಂತನೊಳಗೇ ಆತನನ್ನು ಅವಲಂಬಿಸಿಯೇ ಜೀವಿಸಿಕೊಂಡಿರುವೆವು' ಎಂಬುದು ಇದರ ಅರ್ಥ.

ಆ ಭಗವಂತನಾದ ನಾರಾಯಣನು ಈ ಜಗತ್ತೆಲ್ಲವನ್ನೂ ಸೃಷ್ಟಿಸಿ ಅದರ ಸ್ಥಿತಿಗಾಗಿ ಪ್ರವೃತ್ತಿ, ನಿವೃತ್ತಿ– ಎಂಬ ಎರಡು ಧರ್ಮಗಳನ್ನು ಬೇರೆಬೇರೆಯ ಪ್ರಜಾಪತಿಗಳಿಗೆ ಉಪದೇಶಿಸಿರುತ್ತಾನೆ; ಅವರ ಮೂಲಕವಾಗಿ ಗುರುಶಿಷ್ಯ ಪರಂಪರೆಯಿಂದ ಈ ವೈದಿಕಧರ್ಮಗಳೆರಡೂ ಜನರಿಗೆ ಬಂದಿರುತ್ತವೆ. ಪ್ರವೃತ್ತಿಧರ್ಮವು ಅಭ್ಯುದಯಕ್ಕೂ, ನಿವೃತ್ತಿಧರ್ಮವು ನಿಃಶ್ರೇಯಸಕ್ಕೂ ಕಾರಣವಾಗಿವೆ. ಜನರಿಗೆ ಕಾಮವು ಹೆಚ್ಚಾದ್ದರಿಂದ ಈ ಧರ್ಮವು ಅಧರ್ಮದಿಂದ ತಿರಸ್ಕೃತವಾಗಲು ಮತ್ತೆ ಅದನ್ನು ಉದ್ಧಾರಮಾಡುವದಕ್ಕಾಗಿ ಭಗವಂತನು ವಸುದೇವನಿಂದ ದೇವಕಿಯಲ್ಲಿ ಅಂಶದಿಂದ ' ಕೃಷ್ಣನಾಗಿ ಜನಿಸಿದನು. ಬ್ರಾಹ್ಮಣ್ಯವನ್ನು ಕಾಪಾಡಿದರೆ ಅದರ ಮೂಲಕ ವೈದಿಕಧರ್ಮ ವನ್ನೇ ಕಾಪಾಡಿದಂತಾಗುವದರಿಂದ ಈ ಕಾರ್ಯಕ್ಕಾಗಿ ಭಗವಂತನು ಮನುಷ್ಯನಾಗಿ ಕಾಣಿಸಿಕೊಂಡನು. ಬೆಂಕಿಗೆ ಬಿಸಿಯು ಸಹಜವಾಗಿರುವಂತೆ ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ, ತೇಜಸ್ಸು– ಎಂಬ ಷಡ್ಗುಣಗಳು ಯಾವಾಗಲೂ ಸ್ವಭಾವದಿಂದಿದ್ದುಕೊಂಡಿರುವದರಿಂದ ಅವನಿಗೆ ಭಗವಂತ ನೆಂದು ಹೆಸರು. ಅವನು ಜನ್ಮರಹಿತನೂ ನಿತ್ಯಶುದ್ಧಬುದ್ಧಮುಕ್ತಸ್ವಭಾವನೂ ಆದರೂ ತನ್ನ ಮಾಯೆಯಿಂದ ದೇಹಿಯಾಗಿ ಹುಟ್ಟಿದಂತೆ ತೋರಿಸಿಕೊಂಡು ಲೋಕಾನುಗ್ರಹವನ್ನು ಮಾಡಿದಂತೆ ತೋರಿಸಿಕೊಂಡಿರುತ್ತಾನೆ. ಇದೊಂದು ಅದ್ಭುತಲೀಲೆಯು. ಶ್ರೀರಾಮಕೃಷ್ಣಪರಮಹಂಸರು ಒಂದು ಕಡೆ ಹೀಗೆಂದ ರೆಂದು ಹೇಳುತ್ತಾರೆ: ನಾರಾಯಣನು ವೈಕುಂಠದಲ್ಲಿ ಏನು ಮಾಡುತ್ತಿದ್ದನು –

ಎಂದು ನಾರದರನ್ನು ಕೇಳಲು ಸೂಜಿಯ ಕಣ್ಣಿನಲ್ಲಿ ಆನೆಯನ್ನು ಈ ಕಡೆಯಲ್ಲಿ ತುರುಕಿಸಿ ಆ ಕಡೆಯಿಂದ ತೆಗೆಯುತ್ತಿದ್ದನು ಎಂದರಂತೆ! ನಿಜವಾಗಿ ಜನ್ಮರಹಿತ ನಾದ ಪರಮಾತ್ಮನು ಮನುಷ್ಯನಾಗಿ ಹುಟ್ಟಿದಂತೆ ತೋರಿಸಿಕೊಂಡದ್ದು ಆದಕ್ಕಿಂತಲೂ ಅದ್ಭುತವಾದ ಲೀಲೆಯೆಂದು ನನಗೆ ಅನ್ನಿಸುತ್ತಿದೆ. ಅರ್ಜುನನು ಸದ್ಗುಣಶಾಲಿಯಾದ್ದರಿಂದ ಅವನ ಮೂಲಕ ಮಿಕ್ಕವರೂ ಧರ್ಮವನ್ನು ಅನುಸರಿಸಲಿ ಎಂದು ಭಗವಂತನು ಈ ಧರ್ಮ ದ್ವಯವನ್ನು ಅವನಿಗೆ ಉಪದೇಶಿಸಿದನು. ಅದನ್ನೇ ಭಾರತದಲ್ಲಿ ವ್ಯಾಸರು ಏಳುನೂರು ಶ್ಲೋಕಗಳಿಂದ ಗ್ರಂಥವಾಗಿ ನಿರ್ಮಿಸಿದರು. ಅದಕ್ಕೆ ನಾನು ಅರ್ಥನಿರ್ಧಾರಣಮಾಡುವ ದಕ್ಕೆಂದು ಈ ವಿವರಣವನ್ನು ಬರೆದಿರುತ್ತೇನೆ – ಎಂಬಿದು ಗ್ರಂಥಾವತರಣಿಕೆಯ ಸಾರ.

ಇಲ್ಲಿ ಗೀತಾಪ್ರಸ್ಥಾನದ ಉದ್ದೇಶವು ಸ್ಪಷ್ಟವಾಗುತ್ತಿದೆ. ವೇದಾರ್ಥವು ಎರಡು ಬಗೆಯಾಗಿರುವದೆಂದೂ ಆದನ್ನೇ ಗೀತೆಯಲ್ಲಿ ಹೇಳಿ ಅವುಗಳಿಗಿರುವ ಸಂಬಂಧವನ್ನು ಸ್ಪಷ್ಟವಾಗಿ ತಿಳಿಸುವದೆಂದೂ ಆಚಾರ್ಯರ ಅಭಿಪ್ರಾಯ ವಾಗಿರುತ್ತದೆ. ಗೀತೆಗೆ ಅನೇಕರು ವ್ಯಾಖ್ಯಾನವನ್ನು ಬರೆದಿರುತ್ತಾರೆ ಎಂಬುದನ್ನು ಆಗಲೆ ತಿಳಿಸಿರುತ್ತೇನೆ. ಆಚಾರ್ಯರು ಹೇಳುವದು ಎಷ್ಟರಮಟ್ಟಿಗೆ ಸಾರ್ವತ್ರಿಕಾ ನುಭವಕ್ಕೆ ಸಮ್ಮತವಾಗಿದೆ – ಎಂಬುದನ್ನು ನಾವು ಅನುಭವದ ಮೂಲಕ ವಾಗಿಯೇ ನಿರ್ಧಾರಣೆಮಾಡಬೇಕಾಗಿರುತ್ತದೆ. ಪ್ರವೃತ್ತಿಧರ್ಮಕ್ಕೆ ದೇವಾದಿಸ್ಥಾನಪ್ರಾಪ್ತಿಯು ಫಲವಾದರೂ ಫಲಾಸಕ್ತಿಯಿಲ್ಲದೆ ಈಶ್ವರಾರ್ಪಣ ಬುದ್ಧಿಯಿಂದ ಅದನ್ನು ಮಾಡಿದರೆ ಚಿತ್ತಶುದ್ಧಿಯೂ ಜ್ಞಾನಕ್ಕೆ ತಕ್ಕ ಯೋಗ್ಯತೆಯೂ ಮುಂದೆ ಜ್ಞಾನನಿಷ್ಠೆಯನ್ನು ಹೊಂದಿದ ಮೇಲೆ ಮೋಕ್ಷವೂ ದೊರಕುವದೆಂದು ಗೀತಾರ್ಥವನ್ನು ಆಚಾರ್ಯರು ಬರೆದಿರುತ್ತಾರೆ. ಇಲ್ಲಿ ಈ ಅಭಿಪ್ರಾಯವು ಗೀತೆಯ ಶ್ಲೋಕಗಳಿಂದ ಸಿದ್ಧವಾಗುತ್ತದೆಯೆ? ಸಿದ್ಧವಾದರೂ ಇದು ವೇದೋಪದೇಶಕ್ಕೆ ಅನುಗುಣವಾಗಿದೆಯೆ? ಮತ್ತು ಇದು ಅನುಭವಕ್ಕೂ ಹೊಂದುತ್ತದೆಯೆ? – ಎಂಬೀ ಮೂರು ಪ್ರಶ್ನೆಗಳು ಎದ್ದುಕೊಳ್ಳುತ್ತವೆ. ಇವುಗಳಿ ಗೆಲ್ಲ ಸರಿಯಾದ ಉತ್ತರವನ್ನು ಕಂಡುಕೊಳ್ಳಬೇಕೆನ್ನುವವರು ಸಾಧನ ವನ್ನು ಮಾಡುವದರಿಂದ ಅಂತಃಕರಣದಲ್ಲಾಗುವ ಉತ್ತಮಸಂಸ್ಕಾರ ವನ್ನೂ ಅದರಿಂದ ಜ್ಞಾನೋತ್ಪತ್ತಿಯಾಗುವದನ್ನೂ ಅದರಿಂದ ಸರ್ವಾನುಭವ ಸಿದ್ಧವಾದ ತತ್ತ್ವದ ಜ್ಞಾನದಲ್ಲಿ ನಿಷ್ಠೆಯೊದಗುವದನ್ನೂ ತಾವು ತಾವೇ ಕಂಡು

ಕೊಳ್ಳಬೇಕಾಗಿದೆ ಎಂಬುದು ಸ್ಪಷ್ಟವಾಗಿದೆ. ಇದಕ್ಕೆ ಸಾಧನದಲ್ಲಿ ಆದರವೂ ತತ್ತ್ವಾನುಭವದಲ್ಲಿ ಅಭಿಲಾಷೆಯೂ ಇರುವವರಾಗಬೇಕು. ಭೌತಿಕ ವಿಜ್ಞಾನಕ್ಕೆ ಎಲ್ಲರೂ ಅಧಿಕಾರಿಗಳಾಗಲಾರರು; ವಿಜ್ಞಾನಶಾಸ್ತ್ರಕ್ಕೆ ಅನುಗುಣವಾದ ಮನೋವೃತ್ತಿಯವರೇ ಬೇಕು. ಆದರೂ ಆ ಶಾಸ್ತ್ರದ ರೂಪರೇಖೆಯನ್ನು ಸಾಮಾನ್ಯಬುದ್ಧಿಯವರೂ ತಿಳಿದುಕೊಳ್ಳುವದಕ್ಕೆ ಯತ್ನಿಸಬಹುದಾಗಿದೆ; ಅದರ ಪ್ರಯೋಜನಗಳನ್ನು ಜೀವನದಲ್ಲಿ ಎಲ್ಲರೂ ತಮ್ಮ ತಮ್ಮ ಯೋಗ್ಯತೆಗೆ ತಕ್ಕಷ್ಟು ಮಟ್ಟಿಗೆ ಅನುಭವಿಸಬಹುದು. ಅಲ್ಲವೆ? ಹೀಗೆಯೇ ಸಾಧನಪ್ರಧಾನವಾಗಿರುವ ಈ ಗೀತಾಪ್ರಸ್ಥಾನದ ಉಪದೇಶಗಳನ್ನು ನಾವುಗಳೂ ಉಪಯೋಗಿಸಿಕೊಳ್ಳಬಹುದಾಗಿದೆ.

ಭಗವದ್ಗೀತೆಯಲ್ಲಿ ಆಗಾಗ್ಗೆ 'ಶ್ರೀಭಗವಾನುವಾಚ' – (ಶ್ರೀಭಗವಂತನು ಇಂತೆಂದನು) ಎಂಬ ವಾಕ್ಯವು ಬರುತ್ತದೆ. ಇದು ಭಗವಂತನ ನುಡಿ, ಇದು ಎಲ್ಲರ ಹಿತಕ್ಕಾಗಿ ಹೇಳಿದ್ದು – ಎಂಬುದನ್ನು ನೆನಪಿಗೆ ತಂದುಕೊಳ್ಳುವದಕ್ಕೆ ಈ ವಾಕ್ಯವು ಸೂಚಕವಾಗಿರುತ್ತದೆ. ಗೀತೆಯು ಭಾರತದ ನಡುವೆಯಿದೆ. ಭಾರತವು ಬರಿಯ ಯುದ್ಧವರ್ಣನೆಯೇನೂ ಅಲ್ಲ; ಅದು ಧರ್ಮವನ್ನು ಬೋಧಿಸುವದಕ್ಕೇ ಬಂದದ್ದೆಂದು ಆದಿಯಲ್ಲಿಯೂ ಅಂತ್ಯದಲ್ಲಿಯೂ ವ್ಯಾಸರೇ ಹೇಳಿರುತ್ತಾರೆ. ಮೊದಲು ನಾರಾಯಣನನ್ನೂ ನರನನ್ನೂ ನಮಸ್ಕರಿಸಿ ಆಮೇಲೆ ''ಜಯ''ವೆಂಬ ಹೆಸರಿನ ಭಾರತವನ್ನು ಓದಬೇಕು ಎಂದು ಅವರ ಮತ. ಜಯವೆಂದರೆ ಧರ್ಮಕ್ಕೆ ಗೆಲುವು ಎಂಬುದನ್ನು ತಿಳಿಸುವ ಗ್ರಂಥ. ಧರ್ಮಧ್ವಯದ ತಿರುಳನ್ನು ಪುರುಷೋತ್ತಮನಾದ ನಾರಾಯಣನೇ ತಿಳಿಸುತ್ತಾನೆ ಎಂಬುದನ್ನು ನೆನಪಿಗೆ ತರುವ ''ಶ್ರೀಭಗವಾನುವಾಚ'' ಎಂಬ ವಾಕ್ಯವನ್ನು ನಾವು ಎಚ್ಚರದಿಂದ ಮನಸ್ಸಿಗೆ ತಂದುಕೊಂಡರೆ ಭಗವದ್ಗೀತೆಯ ಪಾರಾಯಣದ ಫಲವು ಬರುವದು. ಗೀತೆಯ ಪಾರಾಣಯಣವೆಂದರೆ ಅಂತಃಕರಣವನ್ನು ಭಗವನ್ಮಯವಾಗಿ ಮಾಡಿಕೊಳ್ಳುವದು. ಅರ್ಜುನನು ಶೋಕಮೋಹನಿಮಗ್ನನಾಗಿದ್ದಾಗ ಭಗವಂತನು ಉಪದೇಶಮಾಡಿದ್ದಿದು ಎಂಬುದನ್ನು ಮನದಂದರೆ ನಾವೆಲ್ಲರೂ ಶೋಕಮೋಹಗಳಿಂದ ಸಂಕಟಪಡುತ್ತಿರುವದರಿಂದ ನಮಗೆಲ್ಲ ಇಲ್ಲಿ ಉಪದೇಶವಿದೆ ಎಂಬುದು ಮನಸ್ಸಿಗೆ ತಾಕುತ್ತದೆ. ಈ ದೃಷ್ಟಿಯಿಂದಲೇ ಗೀತೆಯ ವಿಚಾರವನ್ನು ಮಾಡೋಣ.

*****

## 2. ಭಗವದ್ಗೀತೆಯ ಪ್ರತಿಪಾದ್ಯವಿಷಯ

ಇಮಂ ದ್ವಿಪ್ರಕಾರಂ ಧರ್ಮಂ ನಿಃಶ್ರೇಯಸಪ್ರಯೋಜನಂ ಪರಮಾರ್ಥತತ್ತ್ವಂ ಚ ವಾಸುದೇವಾಖ್ಯಂ ಪರಂ ಬ್ರಹ್ಮಾಭಿಧೇಯಭೂತಂ ವಿಶೇಷತೋಽಭಿವ್ಯಞ್ಜಯದ್ ವಿಶಿಷ್ಟಪ್ರಯೋಜನಸಮ್ಬನ್ಧಾಭಿಧೇಯವದ್ ಗೀತಾಶಾಸ್ತ್ರಮ್ ॥

ನಾರಾಯಣ, ವಾಸುದೇವ– ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಪರಬ್ರಹ್ಮವನ್ನೂ ಮೋಕ್ಷಕ್ಕೆ ಸಾಧನವಾಗಿರುವ ಧರ್ಮದ್ವಯವನ್ನೂ ಹೇಳುವದರಿಂದ ಈ ಶಾಸ್ತ್ರಕ್ಕೆ ಅನುಬಂಧಗಳಿವೆಯೆಂದಾಯಿತು – ಎಂಬ ಈ ವಾಕ್ಯದಲ್ಲಿ ಆಚಾರ್ಯರು ಗೀತಾಸಾರವನ್ನೆಲ್ಲ ಹಿಂಡಿಟ್ಟಿರುತ್ತಾರೆ. ವೇದಾಂತ ಪ್ರಸ್ಥಾನಕ್ಕೂ ಗೀತಾಪ್ರಸ್ಥಾನಕ್ಕೂ ಈ ವಿಷಯದಲ್ಲಿ ಯಾವ ತಾರತಮ್ಯವೂ ಇಲ್ಲವೆಂಬುದನ್ನು ಅವರು ಬಾಯಿಬಿಟ್ಟು ಇಲ್ಲಿ ಹೇಳಿರುತ್ತಾರೆನ್ನಬಹುದು.

ವೇದಾಂತಪ್ರಸ್ಥಾನದಲ್ಲಿ ಪರಬ್ರಹ್ಮತತ್ತ್ವವನ್ನು ತಿಳಿಸುವದೇ ಹೆಗ್ಗುರಿಯಾಗಿರುತ್ತದೆ. ಆದರೆ ಇಲ್ಲಿ ಅದಕ್ಕೆ ಸಾಧನವಾಗಿರುವ ಪ್ರವೃತ್ತಿನಿವೃತ್ತಿ ಧರ್ಮಗಳನ್ನು ವಿವರವಾಗಿ ಹೇಳಿದೆ ಎಂಬುದೊಂದು ವಿಶೇಷವು. ಹೇಗೇ ಆಗಲಿ, ಗೀತೆಯು ವೇದಾರ್ಥವನ್ನೇ ತಿಳಿಸುತ್ತದೆ ಎಂಬುದನ್ನು ನಾವು ನೆನಪಿನಲ್ಲಿಡಬೇಕು. ಈಗ ಅನೇಕರು ಗೀತೆಗೆ ಸ್ವತಂತ್ರವಾಗಿಯೇ ಬೇರೊಂದು ಅರ್ಥವನ್ನು ಬರೆಯುವದಕ್ಕೆ ಹೊರಟಿರುತ್ತಾರೆ. ಇದೇಕೆ ಹೀಗೆ?– ಎಂದರೆ ನಮ್ಮ ಅನುಭವವು ಹೀಗಿದೆ ಎನ್ನುತ್ತಾರೆ. ಆದರೆ ಅದು ಗೀತಾರ್ಥವೂ ಆಗಿದೆಯೆ?– ಎಂಬುದನ್ನು ಅವರು ಯೋಚಿಸುವದಿಲ್ಲ. "ಝಷಾಣಾಂ ಮಕರಶ್ಚಾಸ್ಮಿ" ಎಂಬ ಶ್ಲೋಕಪಾದವನ್ನು ಹಿಡಿದು ಗೀತೆಯಲ್ಲಿ ಮೀನಿನ ವಿಚಾರವಾಗಿ ಬರೆದಿದೆ ಎನ್ನಬಹುದೆ? ನಮಗೆ ಇಷ್ಟವಾದ ಅರ್ಥವನ್ನು ಹೀಗೆ ಯಾವ ಗ್ರಂಥದಲ್ಲಾದರೂ ತೆಗೆಯುವದಕ್ಕೆ ಬರುತ್ತದೆ.

"ಸ್ತ್ರೀಶೂದ್ರದ್ವಿಜಬಂಧುಗಳಿಗೆ ವೇದವು ಕಿವಿಗೆ ಬೀಳುವಂತಿಲ್ಲವೆಂಬ ಕಾರಣದಿಂದ ವ್ಯಾಸರು ಮಹಾಭಾರತವನ್ನು ಬರೆದರು" ಎಂಬ ಸೂಕ್ತಿಯು ಸುಪ್ರಸಿದ್ಧವಷ್ಟೆ? ಇಲ್ಲಿ ಯಾರುಯಾರಿಗೆ ವೇದಾಧ್ಯಯನದಲ್ಲಿ ಅಧಿಕಾರ ವಿಲ್ಲವೋ ಅವರಿಗೆ ವೇದಾರ್ಥದ ಸ್ಮರಣೆಯೇ ಅಧ್ಯಯನವಾಗಿರುತ್ತದೆ,

ಅದಕ್ಕಾಗಿಯೇ ಭಾರತವನ್ನು ರಚಿಸಲಾಗಿದೆ ಎಂಬುದು ಆ ಸೂಕ್ತಿಯ ಅರ್ಥ. ಅಧಿಕಾರಿಗಳಾದ ದ್ವಿಜರಿಗೆ ಕೂಡ ವೇದವನ್ನೆಲ್ಲ ಅಧ್ಯಯನಮಾಡುವದು ಕಡುಕಷ್ಟವಾದ ಕಾಲವು ಬಂದಾಗ ವೇದವ್ಯಾಸರು ಅದನ್ನು ಶಾಖೆಗಳಾಗಿ ಒಡೆದು ತಮ್ಮ ಶಿಷ್ಯರಿಗೆ ಅಧ್ಯಯನವನ್ನು ಮಾಡಿಸಿದರು. ಅದನ್ನು ಕೂಡ ಮಾಡಲಾರದವರಿಗಾಗಿ ಅನುಕಂಪೆಯಿಂದ ಭಾರತವನ್ನು ರಚಿಸಿದರು. ಭಾರತವು ಐದನೆಯ ವೇದವು, ಎಂದರೆ ವೇದಕ್ಕಿರುವ ಬೆಲೆಯೇ ಅದಕ್ಕೂ ಇರುತ್ತದೆ; ಏಕೆಂದರೆ ವೇದಾರ್ಥವೆಲ್ಲವನ್ನೂ ಅದರಲ್ಲಿ ಉಪದೇಶಿಸಿರುತ್ತದೆ. ಹಿಂದಕ್ಕೆ ಸ್ತ್ರೀಶೂದ್ರರಿಗೆ ಕೂಡ ಸಂಸ್ಕೃತವು ಬರುತ್ತಿತ್ತು. ಆದ್ದರಿಂದಲೇ ''ಶ್ರಾವಯೇಚ್ಚತುರೋ ವರ್ಣಾನ್ ಕೃತ್ವಾ ಬ್ರಾಹ್ಮಣಮಗ್ರತಃ'' ಬ್ರಾಹ್ಮಣನನ್ನು ಮುಂದಿಟ್ಟುಕೊಂಡು ನಾಲ್ಕು ವರ್ಣದವರಿಗೂ ಭಾರತಶ್ರವಣವನ್ನು ಮಾಡಿಸಬೇಕು ಎಂದು ವ್ಯಾಸರು ಹೇಳಿಟ್ಟಿರುತ್ತಾರೆ. ಆದರೆ ಕಲಿಮಹಿಮೆಯಿಂದ ಈಗ ಬ್ರಾಹ್ಮಣರಿಗೂ ಅನೇಕರಿಗೆ ಸಂಸ್ಕೃತದ ಅರಿವಿಲ್ಲವಾಗಿದೆ. 'ಯಾರಿಗೆ ಸಂಸ್ಕೃತ ಗ್ರಂಥದ ಶ್ರವಣವಿಲ್ಲವೋ, ಅಂಥವರು ಭಾಷಾಂತರದಿಂದಲಾದರೂ ಧರ್ಮವನ್ನು ತಿಳಿದುಕೊಳ್ಳಬೇಕು' – ಎಂದು ಸೂತಸಂಹಿತೆಯಲ್ಲಿ ಹೇಳಿರುತ್ತದೆ. ಈಗ್ಗೆ ನಮ್ಮಲ್ಲನೇಕರು ಸ್ಥಾನದಿಂದ ಕೆಳಕ್ಕೆ ಇಳಿದುಬಿಟ್ಟಿರುತ್ತೇವೆ. ನಲವತ್ತು ಸಂಸ್ಕಾರಗಳೂ ಎಂಟು ಆತ್ಮಗುಣಗಳೂ ಇರಬೇಕೆಂದು ಗೌತಮಾದಿಗಳು ಹೇಳಿರುವದು ಅನೇಕರ ಕಿವಿಗೆಕೂಡ ಬಿದ್ದಿರುವದಿಲ್ಲ; ಎಷ್ಟೋ ಜನರಿಗೆ ಅಂತ್ಯ ಸಂಸ್ಕಾರವು ಕೂಡ ಸರಿಯಾಗಿ ನಡೆಯುತ್ತಲಿಲ್ಲ! ಹೀಗಿರುವಲ್ಲಿ ನಮಗೆ ವೇದಾರ್ಥವು ಹೇಗೆದಕ್ಕಬೇಕು? ನೇರಾಗಿ ವೇದವನ್ನು ಕಲಿತು ವಿಚಾರ ಮಾಡುವ ಯೋಗ್ಯತೆಯನ್ನು ಕಳೆದುಕೊಂಡಿದ್ದರೂ ಇನ್ನೂ ಭಾರತಶ್ರವಣವನ್ನು – ಅದರಲ್ಲಿಯೂ ಗೀತಾರ್ಥಶ್ರವಣವನ್ನು – ಮಾಡುವದಕ್ಕೆ ನಮಗೆ ಅವಕಾಶವಿರುತ್ತದೆ. ಇಷ್ಟನ್ನಾದರೂ ಮಾಡಿದರೆ ನಾವು ವೇದೋಕ್ತಧರ್ಮವನ್ನು ಮಾಡುವದಕ್ಕೆ ಅಧಿಕಾರಿಗಳಾದೇವು. ವೇದಕ್ಕೆ ಅಧಿಕಾರವಿಲ್ಲವೆಂದರೆ ಧರ್ಮಕ್ಕೂ ಅಧಿಕಾರವಿಲ್ಲವೆಂದೇನೂ ಅಲ್ಲ. ಒಂದೂರಿನಲ್ಲಿ ಒಬ್ಬನು ತನ್ನ ಹೆಂಡತಿಗೆ ವೇದದಲ್ಲಿ 'ಸತ್ಯಂ ವದ'– ಸತ್ಯವನ್ನು ಹೇಳು– ಎಂಬ ಆಜ್ಞೆಯಿದೆ ಎಂದು ಬೋಧಿಸುತ್ತಿರಲು ಆಕೆಯು 'ಇದು ವೇದಾಧಿಕಾರವಿರುವ ನಿಮಗೆ ಅನ್ವಯಿಸತಕ್ಕದ್ದು; ವೇದಾಧಿಕಾರವಿಲ್ಲದ ನಾವು ಸತ್ಯವನ್ನೇ ಹೇಳಬೇಕಾದ

ದ್ದೇನೂ ಇಲ್ಲ' ಎಂದು ವಾದಿಸಿದಳೆಂದು ಕುಚೋದ್ಯಕ್ಕೆ ಒಬ್ಬರು ಹೇಳಿದ್ದರು. ವೇದಾರ್ಥವನ್ನು ಪಾಲಿಸುವದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ; ಅಷ್ಟರಿಂದಲೇ ನಾವು ವೈದಿಕರೆನಿಸಿಕೊಳ್ಳಬಹುದಾಗಿದೆ- ಎಂಬುದನ್ನು ಈ ಕಥೆಯಿಂದ ತಿಳಿದುಕೊಳ್ಳಬೇಕು.

ಭಗವದ್ಗೀತೆಯು ಸರ್ವೋಪನಿಷತ್ತುಗಳ ಸಾರವೆಂಬುದನ್ನು ಒಂದು ಶ್ಲೋಕದಲ್ಲಿ ಹೇಳಿದೆ.

ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲ ನನ್ದನಃ ।
ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥

ಉಪನಿಷತ್ತುಗಳೆಲ್ಲ ಗೋವುಗಳು; ಶ್ರೀಕೃಷ್ಣನು ಹಾಲುಕರೆಯುವವನು; ಅರ್ಜುನನೇ ಕರು; ವಿವೇಕಿಯಾದವನೇ ಆ ಹಾಲನ್ನು ಅನುಭವಿಸುವವನು; ಭಗವದ್ಗೀತೆಯೇ ಕರೆದಿರುವ ಹಾಲು - ಎಂಬುದು ಶ್ಲೋಕದ ಅರ್ಥ. ಭಗವದ್ಗೀತೆಯ ಅರ್ಥವನ್ನು ಉಪನಿಷತ್ತಿನ ಅರ್ಥಕ್ಕೆ ಹೊಂದಿಸಿಯೇ ನೋಡಬೇಕು ಎಂಬ ಆಚಾರ್ಯರ ಮತಕ್ಕೆ ಇದು ಬೆಂಬಲವನ್ನು ಕೊಡುತ್ತದೆ. ನೇರಾಗಿ ಉಪನಿಷತ್ತನ್ನು ವಿಚಾರಮಾಡಲಾರದವರು ಗೀತಾರ್ಥವನ್ನು ವಿಚಾರ ಮಾಡಿ ಅರಿತುಕೊಂಡರೂ ವೇದಾಂತದ ಜ್ಞಾನವೇ ಅಳವಡುವದೆಂಬುದಕ್ಕೆ ಇದನ್ನು ಆಧಾರವಾಗಿ ಹಿಡಿಯಬಹುದು.

ಭಗವದ್ಗೀತೆಯಲ್ಲಿ ಹದಿನೆಂಟು ಅಧ್ಯಾಯಗಳಿವೆ. ಅದರ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿಯೂ - ''ಇತಿ ಶ್ರೀಮದ್ಭಗವದ್ಗೀತಾ ಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ ಶ್ರೀಕೃಷ್ಣಾರ್ಜುನಸಂವಾದೇ ಅರ್ಜುನವಿಷಾದ ಯೋಗೋ ನಾಮ ಪ್ರಥಮೋಽಧ್ಯಾಯಃ'' - ಎಂಬ ರೂಪದ ಸಮಾಪ್ತಿಸೂಚಕವಚನವೊಂದು ಈಗಿನ ಪುಸ್ತಕಗಳಲ್ಲಿ ಕಂಡುಬರುತ್ತದೆ. ಈ ವಚನದಲ್ಲಿ ಒಂದೊಂದು ಅಧ್ಯಾಯದಲ್ಲಿ ಒಂದೊಂದು ಯೋಗವನ್ನು ಹೇಳಿದೆಯೆಂಬ ಸೂಚನೆಯಿದೆ; ಆದರೆ ಎಲ್ಲಾ ಪುಸ್ತಕಗಳಲ್ಲಿಯೂ ಈ ಯೋಗಗಳ ಹೆಸರು ಒಂದೇ ಆಗಿರುವದಿಲ್ಲ. ಇದರಿಂದ ಅವರವರು ಅನುಸರಿಸುವ ಯೋಗನಾಮವನ್ನು ಆಯಾ ಗೀತಾವ್ಯಾಖ್ಯಾನವು ಅವಲಂಬಿಸ ಬೇಕಾಗಿಬರುತ್ತದೆ. 'ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ'' ಎಂಬುದಕ್ಕೆ

ಬ್ರಹ್ಮವಿದ್ಯೆಯೂ ಯೋಗಶಾಸ್ತ್ರವೂ ಆಗಿರುವ ಗೀತೆಯೆಂದು ಅನೇಕರು ಅರ್ಥಮಾಡಿರುತ್ತಾರೆ; ಆದರೆ ಬಾಲಗಂಗಾಧರತಿಲಕರವರು ''ಬ್ರಹ್ಮವಿದ್ಯಾಂತ ರ್ಗತವಾದ ಯೋಗಶಾಸ್ತ್ರವಿದು'' ಎಂದು ಅರ್ಥಮಾಡಿಕೊಂಡು ಗೀತೆಯಲ್ಲಿ ಹೇಳಿರುವದು 'ಕರ್ಮಯೋಗ'ವೇ ಎಂಬ ತಮ್ಮ ಸಿದ್ಧಾಂತಕ್ಕೆ ಹೊಂದುಗಡೆ ಮಾಡಿಕೊಳ್ಳುವದಕ್ಕೆ ಪ್ರಯತ್ನಿಸಿರುತ್ತಾರೆ. ಇಲ್ಲಿ ಲಕ್ಷ್ಯದಲ್ಲಿಡತಕ್ಕ ವಿಷಯ ವೊಂದಿದೆ. ಸುಪ್ರಸಿದ್ಧರಾದ ಮೂವರು ಭಾಷ್ಯಕಾರರಲ್ಲಿ ಒಬ್ಬರೂ ಈ ಸಮಾಪ್ತಿ ವಾಕ್ಯಕ್ಕೆ ವ್ಯಾಖ್ಯಾನವನ್ನು ಬರೆದಿಲ್ಲವಾದ್ದರಿಂದಲೂ ಇದು ಭಾರತದಲ್ಲಿಯೂ ಕಾಣಬರುವದಿಲ್ಲವಾದ್ದರಿಂದಲೂ ಈ ವಾಕ್ಯವು ಮೂಲಗೀತೆಗೆ ಸೇರಿದ್ದೆಂದು ನಂಬುವದೇ ಕಷ್ಟವಾಗಿರುತ್ತದೆ. ಆದ್ದರಿಂದ ಗೀತೆಯ ವಿಷಯವನ್ನು ನಿರ್ಧರಿಸು ವದಕ್ಕೆ ಈ ವಾಕ್ಯವು ಅಷ್ಟು ಸಹಾಯಕವಾಗಲಾರದು.

ಹೀಗೆಯೇ ಗೀತೆಯ ಧ್ಯಾನಶ್ಲೋಕಗಳೆಂದು ಅಚ್ಚಾಗಿರುವ ಕೆಲವು ಶ್ಲೋಕಗಳನ್ನು ಆಧಾರವಾಗಿಟ್ಟುಕೊಂಡು ಗೀತಾರ್ಥವನ್ನು ನಿರ್ಣಯಿಸುವದಕ್ಕೆ ಹೋಗುವವರ ಪದ್ಧತಿಯೂ ನಿರ್ದುಷ್ಟವೆಂದು ಹೇಳುವದಕ್ಕಾಗುವದಿಲ್ಲ. ಒಮ್ಮೆ ಕೆಲವರು ಶ್ರೋತೃಗಳು ಗೀತಾರ್ಥವನ್ನು ವಿವರಿಸುವದಕ್ಕೆಂದು ಒಬ್ಬ ಪಂಡಿತರನ್ನು ಕೇಳಿ ಕೊಂಡರು. ಅವರು ಧ್ಯಾನಶ್ಲೋಕಗಳಲ್ಲಿ ಒಂದಾದ

ಪಾರ್ಥಾಯ ಪ್ರತಿಬೋಧಿತಾಂ ಭಗವತಾ ನಾರಾಯಣೇನ ಸ್ವಯಂ
ವ್ಯಾಸೇನ ಗ್ರಥಿತಾಂ ಪುರಾಣಮುನಿನಾ ಮಧ್ಯೇ ಮಹಾಭಾರತಮ್ ।
ಅದ್ವೈತಾಮೃತವರ್ಷಿಣೀಂ ಭಗವತೀಮಷ್ಟಾದಶಾ ಧ್ಯಾಯಿನೀಮ್
ಅಮ್ಬಾಮನುಸಂದಧಾಮಿ ಭಗವದ್ಗೀತೇ ಭವದ್ವೇಷಿಣೀಮ್ ॥

ಎಂಬ ಶ್ಲೋಕದ ಅಭಿಪ್ರಾಯವನ್ನು ವಿವರಿಸುವದಕ್ಕೆ ಹೊರಡಲು, ಬಂದವರಲ್ಲಿ ಕೆಲವರು 'ತಮ್ಮನ್ನು ಅದ್ವೈತವನ್ನು ಹೇಳಿರೆಂದು ನಾವು ಕರೆಯಿಸಿಲ್ಲ; ಈ ಶ್ಲೋಕವು ಎಲ್ಲಿಯದು?' ಎಂದು ಆಕ್ಷೇಪಿಸಿದರು. ಆಗ ಪಂಡಿತರು ಆ ಪದ್ಧತಿಯನ್ನು ನಿಲ್ಲಿಸಿ ಮೂಲಗೀತೆಯನ್ನೇ ಪ್ರಾರಂಭಿಸಬೇಕಾಯಿತು! ಈ ಧ್ಯಾನಶ್ಲೋಕಗಳೆಂಬವನ್ನು ಬೇರೆಬೇರೆಯವರು ಬರೆದಿರುತ್ತಾರೆ; ಇವನ್ನು ಗೀತಾಪ್ರೇಮಿಗಳೆಲ್ಲರೂ ಹೇಳಿಕೊಳ್ಳುತ್ತಲೂ ಇಲ್ಲ. ಆದ್ದರಿಂದ ಗೀತಾವಿಷಯ ನಿರ್ಣಯಕ್ಕೆ ಇವೂ ಸಹಾಯಕವಲ್ಲ.

ಒಬ್ಬರು 'ಗೀತೆಯು ವೇದಕ್ಕಿಂತ ಹೆಚ್ಚಿನದು. ಏಕೆಂದರೆ ವೇದದಲ್ಲಿ ದ್ವಿಜರಿಗೆ ಮಾತ್ರ ಅಧಿಕಾರವಿದೆ; 'ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಃ' ಎಂಬ ಗೀತೆಗೆ ಇರುವ ಕೃಪೆಯು ವೇದಕ್ಕಿರಲಿಲ್ಲ. ಆದ್ದರಿಂದ ತಾನು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತವಾಗಿ ವೇದವು ಗೀತೆಯರೂಪವನ್ನು ಪಡೆಯಿತು'' ಎಂದು ಮುಂತಾಗಿ ಗೀತೆಯ ಮಹಿಮೆಯನ್ನು ಹೊಗಳಿದರು. ಇನ್ನೂ ಅನೇಕರು ಹೀಗೆಯೇ ಗೀತೆಯು ವೇದಕ್ಕಿಂತ ಹೆಚ್ಚಿನದೆಂದು ತಿಳಿಸುವದಕ್ಕೆ ಬೇರೆಬೇರೆಯ ಯುಕ್ತಿಗಳನ್ನು ಕೊಡುತ್ತಾರೆ. ಆದರೆ ಗೀತೆಯು ವೇದವಿರುದ್ಧವಾದ ಉಪದೇಶ ವನ್ನು ಮಾಡುತ್ತದೆ ಎಂಬುದು ನಮ್ಮ ದೇಶದವರಿಗೆ ಯಾರಿಗೂ ಒಪ್ಪಿಲ್ಲ. ಆದ್ದರಿಂದ ಈ ಅಭಿಪ್ರಾಯವೂ ಸರ್ವಸಮ್ಮತವಲ್ಲ. ವೇದದಲ್ಲಿ ಹೇಳಿರುವ ದನ್ನೇ ಗೀತೆಯಲ್ಲಿ ಸುಲಭವಾಗಿ ತಿಳಿಯುವಂತೆ ವೇದಾರ್ಥವನ್ನು ಹೇಳಿರು ವದು ಗೀತೆಯ ವಿಶೇಷವೇ ಹೊರತು ವೇದಕ್ಕೆ ಗೀತೆಯ ಕ್ರಮವು ಇಷ್ಟವಲ್ಲ ವೆಂದೇನೂ ಅಲ್ಲ. ನಿಜವೇನೆಂದರೆ ಹಿಂದಿನ ಕಾಲಕ್ಕಿಂತ ಈಚೆಗೆ ಬರುಬರುತ್ತಾ ಜನರಿಗೆ ಯೋಗ್ಯತೆಯು ಕಡಿಮೆಯಾಗಿದೆ. ಎಲ್ಲರೂ ಮೊದಲು ಬ್ರಾಹ್ಮಣ್ಯಕ್ಕೆ ತಕ್ಕ ಯೋಗ್ಯತೆಯುಳ್ಳವರೇ ಆಗಿದ್ದರೂ ಅವರವರ ಕರ್ಮದಿಂದ ಬೇರೆಬೇರೆಯ ವರ್ಣದವರಾದರು ಎಂದು ಭಾರತದಲ್ಲಿ 'ಭೃಗುಭಾರದ್ವಾಜಸಂವಾದ'ದಲ್ಲಿ ಹೇಳಿದೆ. ಮನುಷ್ಯನಿಗೆ ಕಾಮವು ಹೆಚ್ಚಾದಂತೆ ಬಹಿರ್ಮುಖನಾಗಿ ಕಾಮಕ್ಕೆ ತಕ್ಕ ಕರ್ಮವನ್ನು ಮಾಡುವದಕ್ಕೆ ಹೊರಡುತ್ತಾನೆ. ಅವನಿಗೆ ಉತ್ತಮಾಧಿಕಾರಿಗಳಿಗೆ ತಿಳಿಯುವ ವೇದಾರ್ಥವು ನೇರಾಗಿ ಎಂದಿಗೂ ತಿಳಿಯಲಾರದು. ಆದರೆ ಋಷಿಗಳು ಕೃಪೆಯಿಂದ ಅದೇ ಅರ್ಥವನ್ನು ಮಂದಾಧಿಕಾರಿಗಳಿಗೂ ತಿಳಿಯುವಂತೆ ಪ್ರಕಾರಾಂತರದಿಂದ ತಿಳಿಸಿಕೊಟ್ಟಿರುತ್ತಾರೆ. 'ಕೃತಯುಗದಲ್ಲಿ ಧ್ಯಾನ, ತ್ರೇತೆಯಲ್ಲಿ ಯಜ್ಞ, ದ್ವಾಪರದಲ್ಲಿ ಅರ್ಚನೆ – ಇವುಗಳನ್ನು ಮಾಡಿದ್ದ ರಿಂದಾಗುವ ಫಲವೇ ಕಲಿಯುಗದಲ್ಲಿ ಕೇಶವಸಂಕೀರ್ತನಮಾತ್ರದಿಂದ ಸಿಕ್ಕುತ್ತದೆ' ಎಂದು ಪುರಾಣ ಶ್ಲೋಕವೊಂದರಲ್ಲಿ ಹೇಳಿರುತ್ತದೆ. ಕಲಿಯುಗ ದಲ್ಲಿರುವವರನ್ನು ನಾಮಸ್ಮರಣೆಗೆ ಮನವೊಲಿಸುವದು ಹಿಂದಿನವರಿಗೆ ಧ್ಯಾನಯಜ್ಞಾರ್ಚನಗಳಿಗೆ ಅದು ಒಲಿಯುವದಕ್ಕೆ ಆಗಿದ್ದಷ್ಟೇ ಕಷ್ಟವಾಗಿರುತ್ತದೆ ಎಂದು ಶ್ಲೋಕದಲ್ಲಿ ಅಡಗಿರುವ ಭಾವ. ನಾಮಕೀರ್ತನೆಯಲ್ಲಿ ಕೂಡ ಭೇದಬುದ್ಧಿಯನ್ನು ಮಾಡಿಕೊಂಡು ಬಡಿದಾಡುವಷ್ಟು ಕೀಳುಮಟ್ಟಕ್ಕೆ

ಇಳಿದಿರುತ್ತೇವೆ, ನಾವುಗಳು! ಈ ಕಲಿಯುಗವನ್ನು ಕೂಡ ಕೃತಯುಗವನ್ನಾಗಿ ಮಾಡಿಕೊಳ್ಳುವ ಮಹನೀಯರೂ ಕೆಲವರು ಇರುತ್ತಾರೆ. ಹಾಗಿಲ್ಲದಿದ್ದರೆ ವೇದಶಾಸ್ತ್ರಗಳು ವ್ಯರ್ಥವೆಂದಾಗಿಬಿಡುತ್ತಿತ್ತು. ಆದರೆ ತೀರಕಡಿಮೆಯ ಮಟ್ಟದ ಅಧಿಕಾರಿಗಳಿಗೂ ಅನುಕೂಲಿಸುವಂತೆ ಸಾಧನಗಳನ್ನು ಕಲ್ಪಿಸಿಕೊಟ್ಟಿರುವದು ಭಗವಂತನ ಮತ್ತು ಭಗವದ್ಭಕ್ತರ ಅನುಗ್ರಹ.

ಈ ಪ್ರಾಸಂಗಿಕವಿಚಾರವಂತಿರಲಿ. ಉಪನಿಷತ್ತಿನಲ್ಲಿರುವ ಅರ್ಥವೇ ಗೀತೆಯಲ್ಲಿರುತ್ತದೆ ಎಂಬುದು ಆಚಾರ್ಯರಿಗೆ ಸಮ್ಮತವೆಂದು ಆಗಲೆ ಹೇಳಿರುತ್ತೇನೆ. ಉದಾಹರಣೆಗೆ 'ಈಶಾವಾಸ್ಯಮಿದಂ ಸರ್ವಮ್', 'ಕುರ್ವನ್ನೇವೇಹ ಕರ್ಮಾಣಿ' ಎಂಬ ಈಶಾವಾಸ್ಯೋಪನಿಷತ್ತಿನ ಎರಡು ಮಂತ್ರಗಳನ್ನು ಸೂತ್ರವಾಗಿಟ್ಟುಕೊಂಡು ಭಗವದ್ಗೀತೆಯು ಹೊರಟಿದೆ ಎಂದು ಹೇಳಬಹುದಾದಷ್ಟು ನಿಕಟವಾದ ಹೋಲಿಕೆಯಿದೆ, ಉಪನಿಷತ್ತಿನ ಮೊದಲನೆಯ ಮಂತ್ರದಲ್ಲಿ ಇದೆಲ್ಲವೂ ಪರಮೇಶ್ವರನೇ ಎಂಬುದು ಪರಮಾರ್ಥವು, ತ್ಯಾಗದಿಂದ ಸಾಧಕನು ತನ್ನನ್ನು ತಾನು ಕಾಪಾಡಿ ಕೊಳ್ಳಬೇಕು – ಎಂದು ಹೇಳಿದೆ. ಗೀತೆಯಲ್ಲಿಯೂ ''ವಾಸುದೇವಃ ಸರ್ವಮಿತಿ'' ಎಂದು ಭಗವಂತನ ಸರ್ವಾತ್ಮತ್ವವನ್ನೂ ''ಸರ್ವಧರ್ಮಾನ್ ಪರಿತ್ಯಜ್ಯ'' ಎಂದು ತ್ಯಾಗವನ್ನೂ ಹೇಳಿರುತ್ತದೆ. ಇದರಂತೆ ಜ್ಞಾನಯೋಗಕ್ಕೆ ಉಪಾಯವಾಗಿ ಕರ್ಮಯೋಗವನ್ನೂ ಇಲ್ಲಿ ಹೇಳಿರುತ್ತದೆ. ಉಪನಿಷತ್ತಿನಲ್ಲಿ ವ್ಯಾಖ್ಯಾನದ ಸಹಾಯವಿಲ್ಲದೆ ಇದೇ ವೇದಾರ್ಥವೆಂದು ನಿರ್ಣಯಿಸುವದು ಕಷ್ಟ; ಗೀತೆಯಲ್ಲಿ ಅದೇ ವೇದಾರ್ಥವನ್ನೇ ಗ್ರಹಿಸುವದಕ್ಕೆ ಅತ್ಯಂತ ಸುಲಭವಾಗುವಂತೆ ಸ್ಪಷ್ಟೋಕ್ತಿಯಿಂದ ತಿಳಿಸಿರುತ್ತದೆ, ಭಗವದ್ಗೀತೆಯಲ್ಲಿ ತ್ಯಾಗ ಅಥವಾ ಸಂನ್ಯಾಸ ಎಂಬುದನ್ನು ಸಾಧನಸರ್ವಸ್ವವಾಗಿ ಹೇಳಿದೆ ಎಂದರೂ ತಪ್ಪಾಗದು. ಆದ್ದರಿಂದಲೇ ಆಚಾರ್ಯರು ಪ್ರವೃತ್ತಿಲಕ್ಷಣ, ನಿವೃತ್ತಿಲಕ್ಷಣ– ಎಂಬ ವೇದೋಕ್ತಧರ್ಮಗಳನ್ನೇ ಗೀತೆಯಲ್ಲಿ ಹೇಳಿದೆಯೆಂದು ತಿಳಿಸಿ ಏಷಣಾತ್ರಯ ತ್ಯಾಗವನ್ನು ಮಾಡಿ ಆತ್ಮನಿಷ್ಠನಾಗುವದೇ ನಿವೃತ್ತಿ ಧರ್ಮವೆಂದು ವಿವರಿಸಿರುತ್ತಾರೆ.

ಈ ಎಲ್ಲಾ ಕಾರಣಗಳಿಂದ ಗೀತೆಯಲ್ಲಿ ಹೇಳಿರುವದು ನಾರಾಯಣ ಅಥವಾ ವಾಸುದೇವ ಎಂಬ ಹೆಸರಿನ ಪರಬ್ರಹ್ಮ ಮತ್ತು ವೇದೋಕ್ತವಾದ ಪ್ರವೃತ್ತಿ ನಿವೃತ್ತಿ ಧರ್ಮಗಳು– ಎಂಬುದೇ ಆಚಾರ್ಯರ ಮತವೆಂದು ನಾವು

ತಿಳಿಯಬೇಕು. ಇದನ್ನು ಅವರು ಹೇಗೆ ಪ್ರತಿಪಾದಿಸಿರುತ್ತಾರೆಂಬುದನ್ನು ನಾವು ಇನ್ನುಮುಂದೆ ಮನಗಾಣಬಹುದು.

* * * * *

## 3. ಶೋಕಮೋಹನಿವೃತ್ತಿಯೇ ಗೀತೆಗೆ ಗುರಿ

ವೇದೋಕ್ತವಾದ ಎರಡು ಧರ್ಮಗಳನ್ನೇ ಗೀತೆಯಲ್ಲಿಯೂ ಹೇಳಿರುವದರಿಂದ ಅದು ಸ್ವತಂತ್ರವಾದ ಶಾಸ್ತ್ರವಲ್ಲ; ಉಪನಿಷತ್ಪ್ರಸ್ಥಾನಕ್ಕೂ ಅದಕ್ಕೂ ಏಕವಾಕ್ಯತೆಯಿದೆ- ಎಂದು ಹಿಂದೆ ತಿಳಿಸಿರುತ್ತೇನೆ. ಭಗವದ್ಗೀತೆಯಲ್ಲಿ ಅರ್ಜುನನ ವಿಷಾದವನ್ನು ತಿಳಿಸುವ ಗ್ರಂಥಸಂದರ್ಭವನ್ನು ವಿವರಿಸಿ: 'ನ ಯೋತ್ಸ್ಯ ಇತಿ ಗೋವಿನ್ದ ಮುಕ್ತ್ವಾ ತೂಷ್ಣೀಂ ಬಭೂವ ಹ' ಎಂಬವರೆಗಿನ ಗ್ರಂಥಕ್ಕೆ ಶಂಕರಾಚಾರ್ಯರವರು ಒಟ್ಟು ತಾತ್ಪರ್ಯವನ್ನು ಹೀಗೆಂದು ಬರೆದಿರುತ್ತಾರೆ: ''ಇತ್ಯೇತದನ್ತಃ ಪ್ರಾಣಿನಾಂ ಶೋಕಮೋಹಾದಿಸಂಸಾರಬೀಜದೋಷೋದ್ಭವಕಾರಣಪ್ರದರ್ಶನಾರ್ಥತ್ವೇನ ವ್ಯಾಖ್ಯೇಯೋಗ್ರನ್ಥಃ'' ಇಲ್ಲಿಯವರೆಗಿನ ಗ್ರಂಥಕ್ಕೆ ಸಂಸಾರಕ್ಕೆ ಕಾರಣವಾಗಿರುವವು ಶೋಕಮೋಹಾದಿ ದೋಷಗಳೇ ಎಂಬುದನ್ನು ತಿಳಿಸುವದರಲ್ಲಿ ತಾತ್ಪರ್ಯವೆಂದು ವ್ಯಾಖ್ಯಾನ ಮಾಡಬೇಕು- ಎಂಬುದು ಆಚಾರ್ಯರ ಮತ. ಅರ್ಜುನನು ಆಗಿನ ಕಾಲದಲ್ಲಿ ಲೋಕೈಕವೀರನು, ಇಂದ್ರಪುತ್ರನು; ಅವನ ಗಾಂಡೀವಧನುಸ್ಸಿನ ಟಂಕಾರ ವನ್ನು ಕೇಳಿದ ಶತ್ರುಗಳ ಎದೆ ತಲ್ಲಣಿಸುತ್ತಿತ್ತು. ಈಶ್ವರನನ್ನು ಒಲಿಸಿ ಪಾಶು ಪತಾಸ್ತ್ರವನ್ನು ಪಡೆದುಕೊಂಡು ಬಂದಿದ್ದವನು; ನಿವಾತಕವಚರೇ ಮುಂತಾದ ವರನ್ನು ಗೆದ್ದು ಕೀರ್ತಿಯನ್ನು ಸಂಪಾದಿಸಿಕೊಂಡವನು. ಕೃಷ್ಣನೇ ಅವನಿಗೆ ಸಾರಥಿಯಾಗಿ ಬಂದಿದ್ದಾನೆ. ಇಂಥವನುಕೂಡ ಸೇನೆಯ ನಡುವೆ ನಿಂತು ನೋಡಲು ತನ್ನ ಮುಂದೆ ಯುದ್ಧಕ್ಕೆ ನಿಂತಿರುವವರೆಲ್ಲ ತನ್ನ ತೀರ ಹತ್ತಿರದ ನೆಂಟರೇ ಎಂಬ ಭಾವವು ಮನಸ್ಸಿನಲ್ಲಿ ಮೂಡಿತು. ತಾನೇ ಕ್ಷಾತ್ರಧರ್ಮವಾದ ಯುದ್ಧದಲ್ಲಿ ಪ್ರವೃತ್ತನಾಗಿದ್ದರೂ ಶೋಕ ಮೋಹಗಳಿಂದ ವಿವೇಕವಿಜ್ಞಾನ ವನ್ನು ಕಳೆದುಕೊಂಡು ಆ ಸ್ವಧರ್ಮವಾದ ಯುದ್ಧವನ್ನು ಬಿಟ್ಟನು, ಪರಧರ್ಮವಾದ ಭಿಕ್ಷಾಜೀವನವನ್ನಾದರೂ ಮಾಡುವೆನೆಂದನು. ''ತಥಾ ಚ ಸರ್ವಪ್ರಾಣಿನಾಂ ಶೋಕಮೋಹಾದಿದೋಷಾವಿಷ್ಟಚೇತಸಾಂ ಸ್ವಭಾವತ ಏವ ಸ್ವಧರ್ಮಪರಿತ್ಯಾಗಃ ಪ್ರತಿಷಿದ್ಧಸೇವಾ ಚ ಸ್ಯಾತ್ । ಸ್ವಧರ್ಮೇ ಪ್ರವೃತ್ತಾನಾ ಮಪಿ ತೇಷಾಂ

ವಾಙ್ಮನಃಕಾಯಾದೀನಾಂ ಪ್ರವೃತ್ತಿಃ ಫಲಾಭಿಸನ್ಧಿ ಪೂರ್ವಿಕೈವ ಸಾಹಂಕಾರಾ ಚ ಭವತಿ ।'' ಹೀಗೆಯೇ ಶೋಕಮೋಹಾದಿಗಳು ತುಂಬಿರುವ ಚಿತ್ತದ ಜೀವರುಗಳಿಗೆಲ್ಲ ಸ್ವಧರ್ಮತ್ಯಾಗ, ಪ್ರತಿಷಿದ್ಧಧರ್ಮಸೇವೆ – ಇವುಗಳಲ್ಲಿ ಮನಸ್ಸಾಗುವದು. ಒಂದು ವೇಳೆ ಅವರು ಸ್ವಧರ್ಮವನ್ನು ಮಾಡುವದಕ್ಕೆ ಹೊರಟರೂ ಅಹಂಕಾರಪೂರ್ವಕವಾಗಿ ಫಲಾಭಿಸಂಧಿ ಪೂರ್ವಕವಾಗಿಯೇ ಮಾಡುವರು. ಇದರಿಂದ ಸಂಸಾರವು ಅವರಿಗೆ ತಪ್ಪದೆ ಇರುತ್ತದೆ. ಆದ್ದರಿಂದ ಸಂಸಾರಕ್ಕೆ ಕಾರಣವಾದ ಶೋಕಮೋಹಗಳನ್ನು ಸರ್ವಕರ್ಮಸಂನ್ಯಾಸಪೂರ್ವಕವಾದ ಆತ್ಮಜ್ಞಾನವೊಂದಲ್ಲದೆ ಬೇರೆ ಯಾವದರಿಂದಲೂ ತೊಲಗಿಸುವದು ಆಗಲಾರದು ಎಂದು ಆ ಜ್ಞಾನವನ್ನು ಲೋಕಾನುಗ್ರಹಕ್ಕಾಗಿ ಅರ್ಜುನನನ್ನು ನಿಮಿತ್ತವಾಗಿಟ್ಟು ಕೊಂಡು ಭಗವಂತನು ಉಪದೇಶಮಾಡಿರುತ್ತಾನೆ– ಎಂಬುದು ಆಚಾರ್ಯರ ಹೇಳಿಕೆ.

ಇದು ವೇದಾಂತಪ್ರಸ್ಥಾನಕ್ಕೆ ಹೊಂದುಗೆಯೂ ಆಗಿದೆ. 'ಎಲ್ಲಿ ಎಲ್ಲವೂ ಆತ್ಮನೆಂದೇ ಆಯಿತೋ ಅಲ್ಲಿ ಎಲ್ಲಿಯ ಮೋಹ, ಎಲ್ಲಿಯ ಶೋಕ?' ಎಂದು ಈಶಾವಾಸ್ಯದಲ್ಲಿದೆ. ಆತ್ಮಜ್ಞಾನದಿಂದಲೇ ಶೋಕಮೋಹಗಳ ನಿವೃತ್ತಿ ಎಂಬುದು ವೇದಾಂತಸಿದ್ಧಾಂತವು. ಶೋಕಮೋಹಕಾಮಕ್ರೋಧಾದಿಗಳಿಗೆ ಪರವಶರಾದವರಿಗೆ ಏನುಮಾಡುತ್ತಿದೇವೆ, ಏನುಮಾಡುತ್ತಿಲ್ಲ ಎಂಬುದೇ ತಿಳಿಯುವದಿಲ್ಲ. ಒಮ್ಮೆ ಕುರ್ತುಕೋಟಿಯಲ್ಲಿ ಒಬ್ಬರು ಏಕನಾಥೀ ಭಾಗವತ ವನ್ನು ಓದುತ್ತಿದ್ದು ಅದರಲ್ಲಿ ಪ್ರತಿಪಾದಿತವಾಗಿದ್ದ 'ಕೋಪವನ್ನು ಬೀಡುವದ ರಿಂದಾಗುವ ಪ್ರಯೋಜನ'ವನ್ನು ತಮ್ಮ ಸ್ನೇಹಿತರಿಗೆ ವಿವರಿಸುತ್ತಿದ್ದರು. ಅಷ್ಟುಹೊತ್ತಿಗೆ ಅವರು ದೇವಾಲಯದಲ್ಲಿಟ್ಟಿದ್ದ ಭಾಗವತಪುಸ್ತಕದ ಹಾಳೆಗಳನ್ನು ಒಂದು ಟಗರು ಕಿತ್ತು ಬಾಯಿಯಲ್ಲಿ ಹಾಕಿಕೊಂಡು ಹೊರಳಾಡಿಸು ತ್ತಿದೆ ಎಂಬುದನ್ನು ಯಾರೋ ಅವರಿಗೆ ಕೂಗಿ ಹೇಳಿದರು. ಕೂಡಲೆ ಅವರು ಹೋಗಿ ಪುಸ್ತಕವನ್ನು ನೋಡಿದ್ದರಲ್ಲಿ ಕೆಲವು ಹಾಳೆಗಳು ಪೂರ ಕಿತ್ತುಹೋಗಿ ದ್ದವು. ಅದನ್ನು ತಂದು ಸ್ನೇಹಿತರಿಗೆ ತೋರಿಸಲು ಅವರು 'ಅಯ್ಯೋ' ಅನ್ಯಾಯವಾಗಿ ಪುಸ್ತಕ ಹೋಯಿತಲ್ಲ!' ಎಂದು ಅನುತಾಪವನ್ನು ಸೂಚಿಸಿದರು. ಆಗ ಆ ಭಾಗವತದವರ ಹೃದಯದಲ್ಲಿ ಹುದುಗಿಕೊಂಡಿದ್ದ ಶೋಕವು ಕೋಪವಾಗಿ ಪರಿಣಮಿಸಿತು. ತಮ್ಮ ಪುಸ್ತಕವನ್ನು ಗಿರಗಿರನೆ ತಿರುಗಿಸಿ

ದೂರಕ್ಕೆ ಬಿಸುಡಿಬಿಟ್ಟರು! ಹೀಗಿರುತ್ತದೆ, ಶೋಕಮೋಹಗಳ ವಿಲಾಸ! ಅರ್ಜುನನಿಗೆ ಶೋಕಮೋಹಗಳಿಂದ ಈ ಸ್ಥಿತಿಯು ಬಂದು ಬಿಟ್ಟಿತ್ತು. ಆಗ ಶ್ರೀಕೃಷ್ಣನು ಎಷ್ಟು ಹೇಳಿದರೂ ಅವನಿಗೆ ಸಮಾಧಾನವು ಬರಲಿಲ್ಲ. ಗುರುಗಳನ್ನೂ ಬಂಧುಗಳನ್ನೂ ಹೊಡೆಯುವ ಯುದ್ಧವು ಬೇಡವೆಂದೇ ಅವನು ಸುಮ್ಮನಾಗಿಬಿಟ್ಟನು. ಆದ್ದರಿಂದ ಇವನಿಗೆ ವೇದಾಂತಜ್ಞಾನವನ್ನು ತಿಳಿಸಿಕೊಟ್ಟ ಹೊರತು ಸರಿಯಾದ ವಿವೇಕವುಂಟಾಗಲಾರದು – ಎಂದು ಭಗವಂತನು ಆ ಜ್ಞಾನವನ್ನು ತಿಳಿಸುವದಕ್ಕೆ ಪ್ರಾರಂಭಿಸಿದನು.

ಬರಿಯ ಬಾಯಿವೇದಾಂತವನ್ನು ಹೇಳುವವರಿಗೆ ಕೂಡ ಆತ್ಮಜ್ಞಾನದ ಕಡೆಗೆ ಲಕ್ಷ್ಯವನ್ನು ತಂದರೆ ಎಷ್ಟೋ ಪ್ರಯೋಜನವುಂಟು. ಒಂದೂರಿನಲ್ಲಿ ಒಬ್ಬರು ವೇದಾಂತಿಗಳಿದ್ದರಂತೆ. ಅವರಲ್ಲಿ ಅನೇಕರು ಬಂದು ಶ್ರವಣಮಾಡಿ ಹೋಗುತ್ತಿದ್ದರು. ಹೀಗಿರವಲ್ಲಿ ಶಾಸ್ತ್ರಿಗಳಿಗೆ ಒಂದು ದಿನ ಚೇಳು ಕಡಿಯಿತು. ಏನು ಔಷಧಿ ಮಾಡಿದರೂ ನೋವು ಕಡಿಮೆಯಾಗಲಿಲ್ಲ. ಅವರು ವ್ಯಥೆಪಡುತ್ತಾ ಬಹಳವಾಗಿ ಶೋಕದಿಂದ ಕೂಗಾಡುತ್ತಿದ್ದರು. ಆ ಸಮಯಕ್ಕೆ ಸರಿಯಾಗಿ ಅವರ ಶಿಷ್ಯರಲ್ಲಿ ಒಬ್ಬರಾದ ಶೆಟ್ಟರೊಬ್ಬರು ಅಲ್ಲಿಗೆ ಬಂದು 'ಸ್ವಾಮಿ, ನನಗೆ ಈಗ ವೇದಾಂತದ ಉಪದೇಶದ ವಿಷಯಕ್ಕೆ ಒಂದು ಸಂದೇಹ ವುಂಟಾಗಿದೆ. ಚೇಳು ಕಡಿದ ನೋವು ದೇಹಕ್ಕೊ, ಆತ್ಮನಿಗೊ?' ಎಂದು ಕೇಳಿದರು. ಶಾಸ್ತ್ರಿಗಳು 'ಈಗ ಬೇಡಪ್ಪ, ಆ ವೇದಾಂತ! ನನಗೆ ಬಹಳ ನೋವಾಗಿದೆ!' ಎಂದು ಎಷ್ಟು ಹೇಳಿದರೂ ಶೆಟ್ಟರು ಕೇಳದೆ 'ಈಗಲಲ್ಲವೆ, ಈ ವಿಷಯ ನಿರ್ಣಯವಾಗಿಬಿಡಬೇಕು? ನಿಜವನ್ನು ಹೇಳಿಬಿಡಿರಿ, ನೋವು ದೇಹಕ್ಕೊಷಿ, ಆತ್ಮನಿಗೊ?' ಎಂದು ಮತ್ತೆ ಮತ್ತೆ ಕೇಳಲಾರಂಭಿಸಿದರು. ಶಾಸ್ತ್ರಿಗಳ ಶೋಕವು ತುಂಬಿಕೊಂಡಿದ್ದ ಅಂತಃಕರಣದಲ್ಲಿ ವಿಚಾರದ ಧಾರೆ ಎದ್ದುಕೊಂಡಿತು. ಅವರು ಕೂಡಲೆ ತಮ್ಮ ತಪ್ಪನ್ನು ಅರಿತುಕೊಂಡು 'ಆತ್ಮನಿಗೆ ಎಲ್ಲಾದರೂ ನೋವು ಉಂಟೆ? ದೇಹಕ್ಕೇ ಸರಿ!' ಎಂದು ನಗುವದಕ್ಕೆ ಆರಂಭಿಸಿದರು! ವಿಷಯವನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸಿದ ಮಾತ್ರ ದಿಂದಲೇ ಶಾಸ್ತ್ರಿಗಳಿಗೆ ಈ ಸತ್ಫಲವಾಯಿತು! ಈ ಸಂದರ್ಭದಲ್ಲಿ ಅವರ ಶಿಷ್ಯನೇ ಅವರಿಗೆ ಗುರುವಾಗಿಬಿಟ್ಟಿದ್ದನು.

ನಮ್ಮಲ್ಲಿ ತೋರುವ ಸರ್ವಸಂಸಾರಧರ್ಮಗಳೂ ನಮ್ಮನಮ್ಮ ಕಾರ್ಯಕರಣಸಂಘಾತಕ್ಕೆ ಸೇರಿದವು. ಕಾರ್ಯವೆಂದರೆ ಶರೀರವು, ಕರಣಗಳೆಂದರೆ ಇಂದ್ರಿಯಾದಿಗಳು. ಇವುಗಳ ಸಂಘಾತವು ಒಟ್ಟುಸೇರಿ ಮಾಡುವ ಧರ್ಮಾಧರ್ಮಗಳ ಫಲವನ್ನು ಇದು ನನ್ನದು ಎಂದು ಅಭಿಮಾನಪಡುತ್ತಿರುವ ಜೀವನಿಗೆ ತಂದೊಪ್ಪಿಸುತ್ತಿರುವದು. ಈ ಕಾರ್ಯಕರಣಸಂಘಾತಕ್ಕೂ ಇವೆಲ್ಲವನ್ನೂ ನೋಡುತ್ತಿರುವ ಸಾಕ್ಷಿಯಾದ ಆತ್ಮನಿಗೂ ಅವಿದ್ಯೆಯಿಂದಾಗಿರುವ ಅಭಿಮಾನವೊಂದಲ್ಲದೆ ಮತ್ತೆ ಯಾವ ಸಂಬಂಧವೂ ಇರುವದಿಲ್ಲವಾದರೂ ಈ ಶರೀರವು ನಾನು ಅಥವಾ ನನ್ನದು; ಈ ಶರೀರಕ್ಕೆ ಸಂಬಂಧಪಟ್ಟವರೆಲ್ಲ ನನ್ನವರು; ಇದಕ್ಕೆ ವಿರೋಧಿಗಳೆಲ್ಲ ನನ್ನ ಶತ್ರುಗಳು – ಎಂಬ ವಿಪರೀತ ಜ್ಞಾನವಾಗಿಬಿಟ್ಟಿರುತ್ತದೆ. ಇದರಿಂದಲೇ ಶೋಕಮೋಹಗಳಾಗುವವು. ಇವುಗಳನ್ನು ತತ್ತ್ವಜ್ಞಾನದಿಂದ ಕಳೆಯುವದೇ ವೇದಾಂತದ ಪ್ರಯೋಜನ.

ಆದರೆ ನಿಜವಾಗಿ ಇದು ಗೀತಾರ್ಥವೆ?– ಎಂಬುದನ್ನು ಸ್ವಲ್ಪ ವಿಚಾರಿಸಬೇಕಾಗುತ್ತದೆ. ಏಕೆಂದರೆ ನಾನು ಹಿಂದೆಯೇ ಹೇಳಿರುವಂತೆ ಗೀತೆಗೆ ಒಬ್ಬೊಬ್ಬರು ಒಂದೊಂದು ಅರ್ಥವನ್ನು ಹೇಳಿರುತ್ತಾರೆ. ಬಾಲಗಂಗಾಧರ ತಿಲಕರವರ ಅಭಿಪ್ರಾಯದಂತೆ ಉಪಕ್ರಮೋಪಸಂಹಾರಗಳಿಂದ ಇದು ಗೀತಾರ್ಥವೆಂದು ಏರ್ಪಡುವದಿಲ್ಲ ಏಕೆಂದರೆ ಅರ್ಜುನನು 'ನಾನು ಯುದ್ಧ ಮಾಡುವದಿಲ್ಲ' ಎಂದು ಕುಳಿತುಬಿಟ್ಟನು– ಎಂಬುದು ಉಪಕ್ರಮವಾಗಿರುತ್ತದೆ. ಶ್ರೀಕೃಷ್ಣನು ಉಪದೇಶಮಾಡಿದ ಮೇಲೆ 'ಕರಿಷ್ಯೇ ವಚನಂ ತವ' ನಿನ್ನ ಮಾತಿನಂತೆ ಮಾಡುತ್ತೇನೆ ಎಂದನು – ಎಂಬುದು ಉಪಸಂಹಾರ. ಇದನ್ನು ನೋಡಿದರೆ ಗೀತೆಯು ಕರ್ಮಯೋಗಪರವೆಂದೇ ಕಾಣುವದಲ್ಲ!– ಎಂಬ ಶಂಕೆಯು ಕೆಲವರಿಗೆ ಉಂಟಾಗುತ್ತದೆ. ಇಲ್ಲಿ ಉಪಕ್ರಮೋಪಸಂಹಾರಾದಿ ತಾತ್ಪರ್ಯ ಲಿಂಗಗಳನ್ನು ತೋರಿಸುವದರಲ್ಲಿ ಒಂದು ತಪ್ಪು ಆಗಿರುತ್ತದೆ. ಪುರಾಣದ ಉಪಕ್ರಮೋಪಸಂಹಾರಗಳು ಯಾವವು?– ಎಂದು ಯಾರೋ ಕೇಳಿದರೆಂದು ಇಟ್ಟುಕೊಳ್ಳಿರಿ. ಪುರಾಣಿಕರು ಮಣೆಯಮೇಲೆ ಕುಳಿತದ್ದು ಉಪಕ್ರಮವೆಂದೂ ಅವರು ಅದನ್ನು ಬಿಟ್ಟು ಎದ್ದದ್ದೇ ಉಪಸಂಹಾರವೆಂದೂ ನಾವು ಯಾರಾದರೂ ಉತ್ತರ ಹೇಳುತ್ತೇವೆಯೆ? ಹಾಗೆಯೇ ಇಲ್ಲಿ ಭಗವದ್ಗೀತೆಯ ಉಪಕ್ರಮೋಪಸಂಹಾರಗಳನ್ನು ಗೊತ್ತುಮಾಡುವದರಲ್ಲಿ

ಅರ್ಜುನನ ವ್ಯಾಪಾರವೇನೂ ಸಹಾಯಕವಾಗಲಾರದು. ಶ್ರೀಕೃಷ್ಣ ಭಗವಂತನು ಮಾಡಿದ ಉಪದೇಶವೇ ಭಗವದ್ಗೀತೆ. ಅದು 'ಅಶೋಚ್ಯಾನನ್ವ ಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ' ಶೋಕಿಸಬಾರದವರನ್ನು ಕುರಿತು ಶೋಕಿಸುತ್ತಿದ್ದೀಯೆ, ತಿಳಿದವರ ಮಾತನ್ನೂ ಆಡುತ್ತಿರುವೆ – ಎಂಬುದರಿಂದ ಉಪಕ್ರಮವಾಗಿದೆ. ಇಲ್ಲಿ ಶೋಕಮೋಹಗಳು ಅರ್ಜುನನಿಗೆ ಉಂಟಾಗಿದ್ದ ವೆಂದೂ ಅದನ್ನು ಕಳೆಯುವದಕ್ಕೆ ಆತ್ಮಜ್ಞಾನವನ್ನು ಹೇಳುವದಕ್ಕೆ ಭಗವಂತನು ಆರಂಭಿಸಿದ್ದನೆಂದೂ ತಿಳಿಯುವದಕ್ಕೆ ಸಾಕಾದಷ್ಟು ಸಾಧನವಿದೆ. ಇದರ ಮುಂದೆ ಭಗವಂತನು ಆತ್ಮನು ಜನನಮರಣಾದಿರಹಿತನೂ ನಿರ್ವಿಕಾರಿಯೂ ಆಗಿರುತ್ತಾನೆಂಬ ಜ್ಞಾನವನ್ನು ಉಪದೇಶಿಸಿಯೂ ಇರುತ್ತಾನೆ. ಉಪಸಂಹಾರದಲ್ಲಿ 'ಕಚ್ಚಿದೇತತ್ ಶ್ರುತಂ ಪಾರ್ಥ ತ್ವಯ್ಯೆಕಾಗ್ರೇಣ ಚೇತಸಾ । ಕಚ್ಚಿದಜ್ಞಾನ ಸಂಮೋಹಃ ಪ್ರಣಷ್ಟಸ್ತೇ ಧನಂಜಯ ॥' (ಗೀ. 18-72) ನಾನು ಹೇಳಿದ್ದನ್ನು ಏಕಾಗ್ರಚಿತ್ತದಿಂದ ಶ್ರವಣಮಾಡಿದೆಯೊ? ನಿನ್ನ ಮೋಹವು ಹೋಯಿತೊ?– ಎಂದೇ ಭಗವಂತನು ಕೇಳಿರುತ್ತಾನೆ. ಅರ್ಜುನನು 'ನಿನ್ನ ಪ್ರಸಾದದಿಂದ ಮೋಹವು ಹೋಯಿತು'– ಎಂದೂ ಹೇಳಿರುತ್ತಾನೆ. ಅರ್ಜುನನ ಮೋಹವನ್ನು ಜ್ಞಾನದಿಂದ ಕಳೆಯುವದಕ್ಕೆ ಗೀತೆಯು ಹೊರಟಿತೆಂದು ಹೇಳುವದಕ್ಕೆ ಈಗ ಏನಾದರೂ ಅಡ್ಡಿ ಕಾಣುತ್ತದೆಯೇನು?

ಗುರುಗಳನ್ನೂ ಬಂಧುಗಳನ್ನೂ ಕೊಂದರೆ ನನಗೆ ಪಾಪವು ಬರುತ್ತದೆ ಎಂದು ಅರ್ಜುನನಿಗೆ ಮೋಹವು ಬಂದಿತ್ತು. ಆದ್ದರಿಂದ ಯುದ್ಧವನ್ನು ಬಿಟ್ಟು ಸುಮ್ಮನಾದನು. ಭಗವಂತನು ಆ ಮೋಹವನ್ನು ಕಳೆಯುವ ಜ್ಞಾನವನ್ನು ಉಪದೇಶಿಸಿದನು. ಮೋಹವು ಹೋಗಿಬಿಡಲು ಈ ಮೊದಲೇ ಯುದ್ಧದಲ್ಲಿ ಪ್ರವೃತ್ತನಾಗಿಯೇ ಇದ್ದ ಅರ್ಜುನನು ಮತ್ತೆ ಯುದ್ಧದಲ್ಲಿ ತೊಡಗಿದನು. ಇದರಿಂದ ಗೀತಾಶಾಸ್ತ್ರವು ಯುದ್ಧಪ್ರವರ್ತಕವೆಂದಾದೀತೆ? ಇದನ್ನು ನಾವು ಸಾವಧಾನವಾಗಿ ಯೋಚಿಸಬೇಕು. ಆಚಾರ್ಯರ ಅಭಿಪ್ರಾಯದಲ್ಲಿ ಗೀತೆಯು ಪ್ರವರ್ತಕಶಾಸ್ತ್ರವೇ ಅಲ್ಲ; ಅದು ಶೋಕಮೋಹ ನಿವರ್ತಕವೇ ಆಗಿರುತ್ತದೆ. ಆದ್ದರಿಂದಲೇ ಅದು ಸರ್ವರಿಗೂ ಉಪಾದೇಯವಾಗಿರುತ್ತದೆ.

*****

# 4. ಪ್ರವೃತ್ತಿನಿವೃತ್ತಿಧರ್ಮಗಳು

ವೇದಾಂತಪ್ರಸ್ಥಾನದಲ್ಲಿರುವದೇ ಗೀತಾಪ್ರಸ್ಥಾನದಲ್ಲಿಯೂ ಇದೆ ಎಂದು ಹೇಳಿದ್ದಾಗಿದೆಯಷ್ಟೆ! ಗೀತೆಯಲ್ಲಿರುವ ಯಾವಯಾವ ಭಾಗದಲ್ಲಿ ಹೇಳಿದೆ ಎಂಬುದನ್ನು ನಾವು ನೋಡಿ ತಿಳಿದುಕೊಳ್ಳುವದರಿಂದ ಇದು ಹೆಚ್ಚು ಮನದಟ್ಟಾಗುತ್ತದೆ.

ಪ್ರವೃತ್ತಿಧರ್ಮಕ್ಕೆ ಅಭ್ಯುದಯವೇ ಫಲವು. ಅಭ್ಯುದಯವೆಂದರೆ ಧರ್ಮಾರ್ಥಕಾಮಗಳು. ಧರ್ಮಾರ್ಥಕಾಮಗಳನ್ನು ಸಂಪಾದಿಸಿಕೊಳ್ಳುವದಕ್ಕೆ ಉಪಾಯವಾಗಿರುವ ಕರ್ಮವನ್ನೇ ಮತ್ತೊಂದು ಬಗೆಯಿಂದ ಉಪಯೋಗಿಸಿ ಕೊಳ್ಳಬಹುದೆಂಬುದು, ಬ್ರಾಹ್ಮಣದಲ್ಲಿ ಕಂಡುಬರುತ್ತದೆ. 'ದೇವಯಾಜಿ ಗಿಂತಲೂ ಆತ್ಮಯಾಜಿಯು ಹೆಚ್ಚಿನವನು' ಎಂದು ಶತಪಥಬ್ರಾಹ್ಮಣದಲ್ಲಿದೆ. ಆತ್ಮಯಾಜಿ ಎಂದರೆ ತನ್ನ ಸಂಸ್ಕಾರಕ್ಕಾಗಿ ಯಾಗಮಾಡುವವನು, ಫಲಾಕಾಂಕ್ಷೆ ಯಿಂದ ದೇವತೆಗಳನ್ನುದ್ದೇಶಿಸಿ ಯಾಗಮಾಡುವವನಲ್ಲ ಎಂದರ್ಥ. ಹೀಗೆ ಕರ್ಮಕ್ಕೆ ಎರಡು ಬಗೆಯ ಫಲಗಳಿವೆ ಎಂಬುದು ವೇದದಿಂದಲೇ ಗೊತ್ತಾಗುತ್ತದೆ. ಕರ್ಮಕಾಂಡದಲ್ಲಿ ವಿಧಿಸಿರುವ ಕರ್ಮಗಳಿಗೆ ಬಹಳಮಟ್ಟಿಗೆ ಅದೃಷ್ಟವಾದ ಫಲವು ಲೋಕಾಂತರದಲ್ಲಿ ಆಗುತ್ತದೆ. ದೃಷ್ಟಫಲವೂ ಅದಕ್ಕೆ ಕೆಲವು ಕಡೆ ಹೇಳಿದ್ದಿರುತ್ತದೆ. ಗ್ರಾಮಕಾಮನಾದವನು ಸಾಂಗ್ರಹಣೀ ಎಂಬ ಇಷ್ಟಿಯನ್ನು ಮಾಡಬೇಕೆಂದು ಶಾಸ್ತ್ರದಲ್ಲಿದೆ; ಇಷ್ಟಿಯನ್ನು ಮಾಡಿ ರಾಜನಸೇವೆ ಯಿಂದ ಗ್ರಾಮವನ್ನು ಪಡೆದುಕೊಂಡರೆ ಅಲ್ಲಿ ಸಾಧನವು ಕರ್ಮವೊ, ರಾಜ ಸೇವೆಯೊ?– ಈ ಎರಡೂ ಸೇರಿಯೇ ಸಾಧನವಾಗಬಹುದಾಗಿರುತ್ತದೆ. ಶಾಸ್ತ್ರವು ಇಲ್ಲಿಯೇ ಆಗುವ ಫಲವನ್ನು ಹೇಳುವಾಗ ದೃಷ್ಟಪ್ರಯತ್ನವನ್ನೇನೂ ಬಿಡಬೇಕೆನ್ನುವದಿಲ್ಲ.

ಕರ್ಮಗಳನ್ನು ಫಲಾಭಿಸಂಧಿಯಿಲ್ಲದೆ ಮಾಡಿದರೆ ಅವಕ್ಕೆ ಮೊದಲು ಆಗ ಬೇಕಾಗಬಹುದಾಗಿದ್ದ ಫಲಕ್ಕಿಂತ ಬೇರೆಯಾದ ಮತ್ತೊಂದು ಫಲವಾಗುವ ದೆಂದು ನಾವು ನಿರೀಕ್ಷಿಸಬಹುದಾಗಿರುತ್ತದೆ. ಏಕೆಂದರೆ ಕೆಲವು ಔಷಧಿಗಳನ್ನು ಅನುಪಾನಭೇದದಿಂದ ಬೇರೆಬೇರೆ ರೋಗಕ್ಕೆ ಚಿಕಿತ್ಸೆಗಾಗಿ ಉಪಯೋಗಿಸುವದು ಲೋಕದಲ್ಲಿ ಕಂಡುಬಂದಿರುತ್ತದೆ. ಹೀಗೆಯೇ ಶಾಸ್ತ್ರೋಕ್ತವಾದ ಅಧ್ಯಯನ,

ಯಜ್ಞ, ದಾನ, ತಪಸ್ಸು – ಎಂಬ ಕರ್ಮಗಳಿಗೆ ಸ್ವಂತವಾದ ಬೇರೆಬೇರೆಯ ಫಲವಿದ್ದರೂ ಅವನ್ನು ಫಲಾಪೇಕ್ಷೆಯಿಲ್ಲದೆ ಮಾಡುವದರಿಂದ ಜ್ಞಾನಕ್ಕೆ ತಕ್ಕ ಯೋಗ್ಯತೆಯುಂಟಾಗುತ್ತದೆ – ಎಂದು "ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷನ್ತಿ ಯಜ್ಞೇನ ದಾನೇನ ತಪಸಾಧಿನಾಶಕೇನ" (ಬೃ. 4-4-22) ಎಂಬ ಶ್ರುತಿಯು ಹೇಳುತ್ತಿದೆ. ಇದನ್ನೇ ಕರ್ಮಯೋಗವೆಂಬ ಹೆಸರಿನಿಂದ ಗೀತೆಯಲ್ಲೇ ಹೇಳಿರುತ್ತದೆ. ಇದನ್ನೇ ಶಂಕರಾಚಾರ್ಯರು:

ಅಭ್ಯುದಯಾರ್ಥೋಽಪಿ ಯಃ ಪ್ರವೃತ್ತಿಲಕ್ಷಣೋ ಧರ್ಮೋ ವರ್ಣಾನಾಶ್ರ ಮಾಂಶ್ಚೋದ್ದಿಶ್ಯ ವಿಹಿತಃ ಸ ದೇವಾದಿಸ್ಥಾನಪ್ರಾಪ್ತಿಹೇತು ರಪಿ ಸನ್ ಈಶ್ವರಾರ್ಪಣಬುದ್ಧ್ಯಾ ಅನುಷ್ಠೀಯಮಾನಃ ಸತ್ತ್ವಶುದ್ಧಯೇ ಭವತಿ ಫಲಾಭಿಸನ್ಧಿ ವರ್ಜಿತಃ । ಶುದ್ಧಸತ್ತ್ವಸ್ಯ ಚ ಜ್ಞಾನನಿಷ್ಠಾಯೋಗ್ಯತಾ ಪ್ರಾಪ್ತಿದ್ವಾರೇಣ ಜ್ಞಾನೋತ್ಪತ್ತಿಹೇತುತ್ವೇನ ಚ ನಿಶ್ಶ್ರೇಯಸಹೇತುತ್ವಮಪಿ ಪ್ರತಿಪದ್ಯತೇ ॥

ಎಂದು ಬರೆದು ತಿಳಿಸಿರುತ್ತಾರೆ. ವರ್ಣಾಶ್ರಮಗಳಿಗಾಗಿ ವಿಧಿಸಿರುವ ಪ್ರವೃತ್ತಿರೂಪವಾದ ಧರ್ಮಕ್ಕೆ ದೇವಾದಿಸ್ಥಾನಪ್ರಾಪ್ತಿಯೇ ಫಲವಾದರೂ ಸಂಗವನ್ನೂ ಫಲಾಭಿಲಾಷೆಯನ್ನೂ ಬಿಟ್ಟು ಈಶ್ವರಾರ್ಪಣಬುದ್ಧಿಯಿಂದ ಮಾಡಿದರೆ ಸತ್ತ್ವಶುದ್ಧಿ, ಜ್ಞಾನನಿಷ್ಠಾ ಯೋಗ್ಯತೆ, ಜ್ಞಾನೋತ್ಪತ್ತಿ – ಈ ಕ್ರಮದಿಂದ ಮೋಕ್ಷಕ್ಕೂ ಕಾರಣವಾಗುತ್ತದೆ ಎಂಬುದು ಈ ವಾಕ್ಯದ ಅರ್ಥ. ಉಪನಿಷತ್ಪ್ರಸ್ಥಾನಕ್ಕೂ ಗೀತಾಪ್ರಸ್ಥಾನಕ್ಕೂ ಹೀಗೆ ಏಕವಾಕ್ಯತೆಯಿದೆ ಎಂಬುದು ಆಚಾರ್ಯರ ಅಭಿಪ್ರಾಯವಾಗಿರುತ್ತದೆ.

ಗೀತೆಯಲ್ಲಿ ಸಂಗವನ್ನೂ ಬಿಟ್ಟು ಫಲಾಪೇಕ್ಷೆಯನ್ನೂ ಬಿಟ್ಟು ಕರ್ಮವನ್ನು ಮಾಡಬೇಕು – ಎಂದು ಹೇಳಿರುವದರಿಂದ ಕರ್ಮವನ್ನು ಮಾಡಕೂಡದೆಂದೇ ಹೇಳಿದಂತೆ ಆಗಿದೆ. ಏಕೆಂದರೆ ನಾನು ಮಾಡುತ್ತೇನೆಂಬ ಅಭಿಮಾನವೂ ಕರ್ಮದಲ್ಲಿ ಆಸಕ್ತಿಯೂ ಫಲದಲ್ಲಿ ದೃಷ್ಟಿಯೂ ಇಲ್ಲದಿದ್ದರೆ ಹೇಗೆ ತಾನೆ ಯಾವ ಕರ್ಮವಾದರೂ ಆದೀತು?– ಎಂದು ಕೆಲವರು ಆಕ್ಷೇಪಿಸುವದುಂಟು. ಇದು ಸರಿಯಲ್ಲ. ಫಲಾಭಿಲಾಷೆಯೂ ಸಂಗವೂ ಇದ್ದು ಮಾಡುವವರ ಕರ್ಮಕ್ಕಿಂತ ಕರ್ಮಯೋಗಿಗಳು ಮಾಡುವ ಕರ್ಮವು ಇನ್ನೂ

ಚೆನ್ನಾಗಿ ಆಗುತ್ತದೆ. ಆಯಾ ಕರ್ಮವನ್ನು ಫಲಾಪೇಕ್ಷೆಯಿಂದ ಮಾಡುವದು ತಪ್ಪಲ್ಲ; ಆದರೆ ಅದು ಅಲ್ಪಬುದ್ಧಿಯವರ ಮಾರ್ಗ. ಆ ಕರ್ಮಫಲಕ್ಕಿಂತಲೂ ಹೆಚ್ಚಿನ ಫಲವಾದ ನಿಶ್ಶ್ರೇಯಸವನ್ನು ಬಯಸುವವರು ಸಂಗವನ್ನೂ ಫಲೇಚ್ಛೆಯನ್ನೂ ಬಿಟ್ಟು ಈಶ್ವರಾರ್ಪಣಬುದ್ಧಿಯಿಂದ ಮಾಡಬೇಕೆಂದು ಇಲ್ಲಿ ಹೇಳಿದೆ. ಇದು ಉಪನಿಷತ್ತಿನ ಉಪದೇಶಕ್ಕೂ ಹೊಂದುಗಡೆಯಾಗಿದೆ; ಯುಕ್ತಿಗೂ ಹೊಂದುತ್ತದೆ. ''ಅಕುರ್ವನ್ ವಿಹಿತಂ ಕರ್ಮ ನಿನ್ದಿತಂ ಚ ಸಮಾಚರನ್ । ಪ್ರಸಕ್ತಶ್ಚೇನ್ದ್ರಿಯಾರ್ಥೇಷು ನರಃ ಪತನಮೃಚ್ಛತಿ ॥'' ಎಂದು ಸ್ಮೃತಿವಾಕ್ಯವಿದೆ. ಶಾಸ್ತ್ರದಲ್ಲಿ ಮಾಡೆಂದು ವಿಧಿಸಿರುವದನ್ನು ಮಾಡದೆ ಬಿಡುವದು, ಮಾಡಬೇಡವೆಂದಿರುವದನ್ನು ಮಾಡುವದು. ಇಂದ್ರಿಯ ಭೋಗಗಳಲ್ಲಿ ಮಗ್ನನಾಗಿರುವದು – ಇವುಗಳಿಂದ ಮನುಷ್ಯನು ಪತಿತನಾಗುತ್ತಾನೆ. ಆದ್ದರಿಂದ ಕರ್ಮವನ್ನು ಅವಶ್ಯವಾಗಿ ಮಾಡಬೇಕು, ಆದರೆ ಅದನ್ನು ಚಿತ್ತಶುದ್ಧಿಗಾಗಿ ಮಾಡಿದವನು ವೇದಾಂತಜ್ಞಾನಕ್ಕೆ ತಕ್ಕ ಯೋಗ್ಯತೆಯನ್ನು ಪಡೆದುಕೊಳ್ಳುತ್ತಾನೆ. ಓದುವದಕ್ಕೆ ಕಣ್ಣೂ ಪುಸ್ತಕವೂ ಹೇಗೆ ಅವಶ್ಯವೋ, ಹಾಗೆಯೇ ವೇದಾಂತಜ್ಞಾನವಾಗುವದಕ್ಕೆ ಶ್ರವಣ ಮನನ ನಿದಿಧ್ಯಾಸನಗಳು ಬೇಕು; ಅವುಗಳನ್ನು ಮಾಡುವದಕ್ಕೆ ತಕ್ಕ ಅಂತಃಕರಣ ಶುದ್ಧಿಯೂ ಬೇಕು. ಅಂತಃಕರಣಶುದ್ಧಿಯು ಕರ್ಮಾಚರಣೆಯಿಂದ ಉಂಟಾಗುತ್ತದೆ.

ಕರ್ಮವನ್ನು ಮಾಡಿದಮಾತ್ರದಿಂದ ಜ್ಞಾನಯೋಗ್ಯತೆಯು ಬರಲಾರದು. ಆ ಯೋಗ್ಯತೆ ಬರುವಂತೆ ಅದನ್ನು ಮಾಡುವದಕ್ಕೆ ಮನಸ್ಸಿನಲ್ಲಿ ಒಂದಾನೊಂದು ಭಾವವು ಅವಶ್ಯವಾಗಿರುತ್ತದೆ. ಉದಾಹರಣೆಗೆ ಈ ದಿವಸ ಗಣೇಶಚತುರ್ಥಿ. ಇದನ್ನು ಮಾಡುವಾಗ ಎಲ್ಲರೂ ಮಾಡುತ್ತಾರಾದ್ದರಿಂದ ನಾವೂ ಮಾಡಿಬಿಡೋಣ – ಎಂಬ ಭಾವವಿದ್ದರೆ ಅಲ್ಲಿ ಕರ್ಮದ ಆದರವೂ ಇಲ್ಲ, ತಿರಸ್ಕಾರವೂ ಇಲ್ಲ. ಗಣೇಶನನ್ನು ಪೂಜೆಮಾಡುವದು ಸರ್ವವಿಘ್ನೋಪ ಶಾಂತಿಗೂ ಕಾರಣವೆಂದು ಮಾಡುವದು ಫಲೇಚ್ಛೆಯಿಂದ ಮಾಡುವ ಕರ್ಮವಾಗುವದು. ಈಶ್ವರನ ಪೂಜೆಯು ಅವಶ್ಯವಾಗಿ ಮಾಡತಕ್ಕದ್ದು, ಆತನ ಪ್ರೀತ್ಯರ್ಥವಾದ ಕರ್ಮವನ್ನೇ ಮಾಡೋಣ – ಎಂದು ಮಾಡುವದು ನಿಷ್ಕಾಮಕರ್ಮವು. ಈ ಮೂರನೆಯ ಬಗೆಯ ಕರ್ಮವೇ ಮುಮುಕ್ಷುಗಳಿಗೆ

ಗೀತೆಯಲ್ಲಿ ಉಪದಿಷ್ಟವಾಗಿರುತ್ತದೆ. ಆದರಿಂದಲೇ ಜ್ಞಾನಕ್ಕೆ ತಕ್ಕ ಯೋಗ್ಯತೆಯು ಚಿತ್ತದಲ್ಲಿ ಉಂಟಾಗುತ್ತದೆ.

ಆಚಾರ್ಯರ ಅಭಿಪ್ರಾಯದಂತೆ ಗೀತೆಯಲ್ಲಿ ಆತ್ಮಜ್ಞಾನವನ್ನೇ ಸ್ವಪ್ರಧಾನವಾಗಿ ಹೇಳಿರುತ್ತದೆ. ಕರ್ಮವು ಅದಕ್ಕೆ ತಕ್ಕ ಸಂಸ್ಕಾರವನ್ನು ಚಿತ್ತಕ್ಕೆ ಕೊಡುವ ಸಾಧನವಾಗಿರುತ್ತದೆ. ಗೀತೆಯು ಕರ್ಮದ ವಿಷಯಕ್ಕೆ ಹೇಳಿರುವ ದೇನೆಂದರೆ: ಯಾವದನ್ನು ಮಾಡಬೇಕು, ಯಾವದನ್ನು ಬಿಡಬೇಕು – ಎಂಬುದಕ್ಕೆ ಶಾಸ್ತ್ರವೇ ಪ್ರಮಾಣವು. ಯಾವನು ಶಾಸ್ತ್ರವಿಧಿಯನ್ನು ಬಿಟ್ಟು ಮನಸ್ಸಿಗೆ ಬಂದಂತೆ ನಡೆಯುವನೋ ಅವನಿಗೆ ಯಾವಸಿದ್ಧಿಯೂ ಆಗುವದಿಲ್ಲ, ಯಾವಸುಖವೂ ಇಲ್ಲ, ಪರಗತಿಯೂ ಇಲ್ಲ. ಕರ್ಮಕ್ಕೆ ಶ್ರದ್ಧೆಯೇ ಮುಖ್ಯ. ಆದ್ದರಿಂದ ಶ್ರದ್ಧಾಪೂರ್ವಕವಾಗಿ ಶಾಸ್ತ್ರದಲ್ಲಿ ಹೇಳಿರುವಂತೆಯೇ ಯಜ್ಞದಾನತಪಸ್ಸುಗಳನ್ನು ಮಾಡಬೇಕು. ಕರ್ಮಗಳೆಲ್ಲ ದುಷ್ಟವೆಂದು ತಿಳಿಯುವದು ತಪ್ಪು. ಯಜ್ಞಾದಿಗಳು ಪವಿತ್ರವಾದ ಕರ್ಮಗಳು; ಅವನ್ನು ಸಂಗವರ್ಜಿತವಾಗಿ ಫಲೇಚ್ಛಾರಹಿತನಾಗಿ ಮಾಡಿದರೆ ಜ್ಞಾನಕ್ಕೆ ತಕ್ಕ ಯೋಗ್ಯತೆ ಬರುತ್ತದೆ.

ಕರ್ಮವು ಜ್ಞಾನಕ್ಕೆ ತಕ್ಕ ಸಂಸ್ಕಾರವನ್ನು ಕೊಟ್ಟು ಚಿತ್ತವನ್ನು ಸಜ್ಜುಗೊಳಿಸುತ್ತದೆ. ಆದ್ದರಿಂದ ಮೋಕ್ಷಕ್ಕೆ ಕರ್ಮವೂ ಬೇಕು, ಜ್ಞಾನವೂ ಬೇಕು. ಇದನ್ನು ಕರ್ಮ ಸಮುಚ್ಚಯ – ಎನ್ನುತ್ತಾರೆ. ಆದರೆ ಆಚಾರ್ಯರಿಗಿಂತ ಹಿಂದಿನ ವೃತ್ತಿಕಾರರುಗಳು ಕೆಲವರು ಜ್ಞಾನಕರ್ಮಗಳ ಸಮಸಮುಚ್ಚಯವು ಅಂದರೆ– ಎರಡನ್ನೂ ಜೊತೆಯಲ್ಲಿಯೇ ಅನುಷ್ಠಾನಮಾಡುವದು– ಮೋಕ್ಷಕ್ಕೆ ಕಾರಣವೆಂದು ವಾದಿಸಿದ್ದರು. ಇಲ್ಲಿ ಕರ್ಮವೆಂದರೆ ವರ್ಣಾಶ್ರಮವಿಹಿತ ಕರ್ಮವೇ. ಈಗಿನ ಕಾಲದಲ್ಲಿ ಜನರಲ್ಲಿ ಒಗ್ಗಟ್ಟನ್ನುಂಟುಮಾಡಬೇಕಾದರೆ ವರ್ಣಾಶ್ರಮವಿಚಾರವನ್ನು ಅತ್ತ ಸರಿಯಿಸುವದು ಒಳ್ಳೆಯದು ಎಂಬ ಅಭಿಪ್ರಾಯವಿರುವ ಕೆಲವರು ಗೀತೆಯಲ್ಲಿ ವರ್ಣಾಶ್ರಮಕರ್ಮವನ್ನು ಹೇಳಿಯೇ ಇಲ್ಲ ಎಂದು ವಾದಿಸುವದುಂಟು. ಆದರೆ 'ಚಾತುರ್ವರ್ಣ್ಯಂ ಮಯಾ ಸೃಷ್ಟಮ್' ಮುಂತಾದ ವರ್ಣಾಶ್ರಮಗಳ ವಿಚಾರದ ಶ್ಲೋಕಗಳನ್ನು ಯಾರೂ ಅಳಿಸಿಹಾಕುವದಕ್ಕೆ ಬರುವಂತಿಲ್ಲ. ಧರ್ಮಶಾಸ್ತ್ರಕಾರರು ಯುಗಭೇದ ದಿಂದ ಧರ್ಮವನ್ನು ಸಂಕೋಚಮಾಡಿ ಉಪದೇಶಿಸಿರುವದುಂಟು. ಈ

ಜನಪ್ರಿಯರು ಬೇಕಾದರೆ ತಮ್ಮ ಅಭಿರುಚಿಗೆ ತಕ್ಕಂತೆ ಜನರಿಗೆ ಈಗ್ಗೆ ಇಷ್ಟು ಮಾಡಿದರೆ ಸಾಕು ಎಂದು ಬೋಧಿಸಲಿ. ವರ್ಣಾಶ್ರಮಧರ್ಮಗಳು ಈಗ ಬಹುಮಟ್ಟಿಗೆ ಲುಪ್ತಪ್ರಾಯವಾಗಿರುವದರಿಂದ ನಮ್ಮನಮ್ಮ ವ್ಯವಹಾರದ ಕರ್ಮಗಳನ್ನೇ ಈಶ್ವರಾರ್ಪಣಬುದ್ಧಿಯಿಂದ ಮಾಡೋಣ ಎಂದೂ ಬೋಧಿಸಲಿ. ಆದರೆ ಗೀತೆಯಲ್ಲಿ ವರ್ಣಾಶ್ರಮವಿಚಾರವನ್ನೇ ಹೇಳಿಲ್ಲ ಎನ್ನುವದು ಸಾಹಸದ ಮಾತೇ ಆಗುವದು. ಇದಿರಲಿ. ಈ ಪ್ರಾಸಂಗಿಕ ವಿಚಾರವನ್ನು ಇಲ್ಲಿಗೆ ಬಿಟ್ಟು ಕರ್ಮಜ್ಞಾನಸಮುಚ್ಚಯ ವಿಚಾರಕ್ಕೆ ತಿರುಗೋಣ.

ಜ್ಞಾನವನ್ನೇ ಸ್ವಪ್ರಧಾನವಾಗಿ ಗೀತೆಯಲ್ಲಿ ಹೇಳಿರುತ್ತದೆ; ಅದಕ್ಕೆ ಅಂಗವಾಗಿ ಮಾತ್ರವೇ ಕರ್ಮವನ್ನು ಹೇಳಿದೆ – ಎಂದು ಆಚಾರ್ಯರು ಅಭಿಪ್ರಾಯಪಡುತ್ತಾರೆ. ಆದರೆ ಅವರಿಗೆ ಸಂನ್ಯಾಸದಲ್ಲಿ ಅಭಿರುಚಿಯಿದ್ದದ್ದರಿಂದ ಹೀಗೆ ಗೀತೆಗೆ ವ್ಯಾಖ್ಯಾನ ಮಾಡಿರುತ್ತಾರೆ ಎಂಬುದು ಈಗಿನ ಕೆಲವರ ಮತವಾಗಿದೆ. ಉದಾಹರಣೆಗೆ ಬಾಲಗಂಗಾಧರತಿಲಕರವರು ಗೀತೆಯಲ್ಲಿ ಜ್ಞಾನಾನಂತರವೂ ಕರ್ಮವನ್ನು ಮಾಡಬೇಕೆಂದು ಹೇಳಿದೆ ಎಂಬ ಅಭಿಪ್ರಾಯವನ್ನು ಪುಷ್ಟಿಗೊಳಿಸುವದಕ್ಕಾಗಿ ತಮ್ಮ ಗೀತಾವ್ಯಾಖ್ಯಾನವನ್ನು ಬರೆದಿರುತ್ತಾರೆ. ಶ್ರೀಕೃಷ್ಣನಿಗೆ ಕರ್ಮಸಂನ್ಯಾಸವನ್ನು ಉಪದೇಶಮಾಡಬೇಕೆಂಬ ಅಭಿಪ್ರಾಯವೇ ಇರಲಿಲ್ಲ. ಶಂಕರಾಚಾರ್ಯರಂತೆ ಸಂನ್ಯಾಸವೇ ಶ್ರೀಕೃಷ್ಣನ ಮತವಾಗಿದ್ದಿದ್ದರೆ, ಅರ್ಜುನನು 'ಭಿಕ್ಷಾಚರಣೆಯೇ ನನಗೆ ಉತ್ತಮವೆಂದು ತೋರುತ್ತದೆ' ಎಂದಾಗ 'ನೀನು ಹೇಳಿದ್ದೆ ಸರಿ; ನಡೆ, ಇಬ್ಬರೂ ಸಂನ್ಯಾಸಿಗಳಾಗಿ ಹೋಗಿ ಒಂದು ಗುಹೆಯಲ್ಲಿದ್ದುಕೊಂಡು ಧ್ಯಾನಮಾಡೋಣ!' ಎಂದು ಶ್ರೀಕೃಷ್ಣನು ಹೇಳುತ್ತಿದ್ದನು. ಅವನಿಗೆ ಒಂದು ಹಿಡಿಕಾವಿಯೇನೂ ಸಿಕ್ಕುತ್ತಿರಲಿಲ್ಲವೆ? ಹಾಗೆ ಮಾಡದೆ 'ನೀನು ಕರ್ಮವನ್ನೇ ಮಾಡು!' 'ತಸ್ಮಾದ್-ಯುಧ್ಯಸ್ವ ಭಾರತ' ಎಂದು ಮುಂತಾಗಿ ಹೇಳಿರುವದನ್ನು ನೋಡಿದರೆ ಶ್ರೀಕೃಷ್ಣನಿಗೆ ಕರ್ಮಯೋಗದಲ್ಲಿಯೇ ತಾತ್ಪರ್ಯವೆಂದು ಗೊತ್ತಾಗುತ್ತದೆ ಎಂದು ಬರೆದಿದ್ದಾರೆ. ತಿಲಕರವರ ಮಾತುಗಳನ್ನು ಗೀತಾರಹಸ್ಯದಲ್ಲಿರುವಂತೆಯೇ ನಾನು ಇಲ್ಲಿ ಹೇಳಿರುವೆನೆಂಬ ಭರವಸೆ ನನಗಿಲ್ಲ; ಏಕೆಂದರೆ ಇಲ್ಲಿ ನನ್ನ ನೆನಪಿನಲ್ಲಿದ್ದಂತೆ ತಿಳಿಸಿರುತ್ತೇನೆ, ಅಷ್ಟೆ. ಆದರೆ ಜ್ಞಾನೋತ್ತರದಲ್ಲಿ ಕರ್ಮ, ಸಂನ್ಯಾಸ- ಎಂಬ ಎರಡು ಆಚಾರಣೆಗಳೂ ಇರಬಹುದೆಂದೂ ಅವುಗಳಲ್ಲಿ

ಕರ್ಮವೇ ಹೆಚ್ಚಿನದೆಂದೂ ತಿಳಿಸುವದೇ ಗೀತೆಯ ಪರಮೋದ್ದೇಶವೆಂದೂ ತಿಲಕರು ಹೇಳಿರುವದು ನಿಶ್ಚಯ. ಇಲ್ಲಿ ಶ್ರೀ ಶಂಕರಾಚಾರ್ಯರ ಮತವನ್ನು ಖಂಡನೆಗೆ ಅನುವಾದಮಾಡಿಕೊಂಡಿರುವದು ಸರಿಯೆ? ಸಂನ್ಯಾಸದ ವಿಷಯಕ್ಕೆ ಅವರ ಮತ್ತು ಆಚಾರ್ಯರ ಮತಗಳಿಗಿರುವ ಅಭಿಪ್ರಾಯ ಭೇದವೇನು?- ಇದನ್ನು ಇನ್ನು ಮುಂದೆ ವಿಚಾರಿಸಬೇಕಾಗಿದೆ.

* * * * *

## 5. ಗೀತೋಕ್ತಜ್ಞಾನವೂ ಸಂನ್ಯಾಸವೂ

ಗೀತೆಯಲ್ಲಿ ಹೇಳಿರುವ ಪ್ರವೃತ್ತಿನಿವೃತ್ತಿರೂಪವಾದ ಎರಡು ಧರ್ಮಗಳಲ್ಲಿ ನಿವೃತ್ತಿಧರ್ಮಕ್ಕೇ ಪ್ರಾಧಾನ್ಯವಿದೆ; ಪ್ರವೃತ್ತಿಧರ್ಮವನ್ನು ಅದಕ್ಕೆ ಅಂಗವಾಗಿ ಹೇಳಿದೆ ಎಂಬುದನ್ನು ನಿನ್ನೆ ಪ್ರಸ್ತಾಪಿಸಿರುತ್ತೇನೆ. ಈ ಅಭಿಪ್ರಾಯಕ್ಕೆ ಗೀತೆಯಲ್ಲಿ ಏನಾದರೂ ಗಮಕವಿದೆಯೆ? ಇದನ್ನು ನೋಡೋಣ.

ಗೀತೆಯಲ್ಲಿ ಜ್ಞಾನವನ್ನು ಅಲ್ಲಲ್ಲಿ ಸರ್ವಶ್ರೇಷ್ಠವೆಂದು ಹೊಗಳಿರುವದು ಕಂಡುಬರುತ್ತದೆ. ವೇದದಲ್ಲಿ ಯಜ್ಞ, ದಾನ, ತಪಸ್ಸು- ಎಂಬಿವು ಹೆಚ್ಚಿನ ಸಾಧನಗಳೆಂದು ಉಕ್ತವಾಗಿದೆ ಎಂಬುದು ಪ್ರಸಿದ್ಧವಷ್ಟೆ? ಜ್ಞಾನವನ್ನು ಈ ಹೆಸರುಗಳಿಂದಲೇ ಹೊಗಳಿ ತಿಳಿಸಿರುವದು ಕಂಡುಬರುತ್ತದೆ. ಉದಾಹರಣೆಗೆ: 'ಶ್ರೇಯಾನ್ ದ್ರವ್ಯಮಯಾದ್ಯಜ್ಞಾಜ್ಞಾನಯಜ್ಞಃ ಪರಂತಪ' (ಗೀ. 4-33) ದ್ರವ್ಯಮಯಯಜ್ಞಕ್ಕಿಂತಲೂ ಜ್ಞಾನಯಜ್ಞವೇ ಹೆಚ್ಚಿನದು - ಎಂಬಲ್ಲಿ ಅದನ್ನು ಯಜ್ಞವೆಂದು ಹೊಗಳಿರುತ್ತದೆ. 'ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ' (4-10) ಬಹಳ ಜನರು ಜ್ಞಾನತಪಸ್ಸಿನಿಂದ ಪವಿತ್ರರಾಗಿ ನನ್ನ ಸ್ವರೂಪವನ್ನು ಪಡೆದಿರುತ್ತಾರೆ ಎಂಬಲ್ಲಿ ಅದನ್ನು ತಪಸ್ಸೆಂದು ಹೊಗಳಿದೆ. ಇದರಂತೆಯೇ ಅದನ್ನು ಯೋಗವೆಂದೂ ಅಲ್ಲಲ್ಲಿ ಹೊಗಳಿದೆ. ಯಾವದರಲ್ಲಿ ತಾತ್ಪರ್ಯವಿರುವದೋ ಅದನ್ನು ಹೊಗಳುತ್ತಾರೆ ಎಂಬುದೊಂದು ಶಾಸ್ತ್ರವಾಕ್ಯಕ್ಕೆ ಅರ್ಥವನ್ನು ಕಲ್ಪಿಸುವಾಗ ಹಿಡಿಯುವ ಲಿಂಗವಾಗಿದೆ. ಜ್ಞಾನವನ್ನು ಹೀಗೆ ಹೊಗಳಿರುವಂತೆ ಕರ್ಮವನ್ನು ಹೊಗಳಿರುವದು ಕಂಡುಬರುವದಿಲ್ಲ. ಗೀತೆಯ ಉಪಕ್ರಮೋಪಸಂಹಾರಗಳಲ್ಲಿ ಜ್ಞಾನಕ್ಕೇ ಪ್ರಾಶಸ್ತ್ಯವನ್ನು ಕೊಟ್ಟು ಹೇಳಿರುತ್ತದೆ - ಎಂಬುದೂ ಇದಕ್ಕೆ ಒಂದು

ಲಿಂಗವಾಗಿರುತ್ತದೆ. 'ಅಶೋಚ್ಯಾನನ್ವ ಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ' ಪ್ರಜ್ಞಾವಂತರ ಮಾತನ್ನೇ ಆಡುತ್ತಿರುವೆ, ಆದರೆ ಮೂಢರಂತೆ ಶೋಕಿಸುತ್ತಿರುವೆ – ಎಂಬಲ್ಲಿ ಜ್ಞಾನದಿಂದ ಮೋಹವು ಹೋಗುತ್ತದೆ ಎಂಬ ವೇದಾಂತಸಿದ್ಧಾಂತದ ಸೂಚನೆಯು ಭಗವಂತನ ಉಪದೇಶದ ಉಪಕ್ರಮದಲ್ಲಿಯೇ ಕಂಡಬರುತ್ತದೆ. 'ತತ್ತ್ವಜ್ಞಾನಿಗಳು ಮಾಡಿದ ಉಪದೇಶದಿಂದ ನಿನಗೆ ಮತ್ತೆ ಹೀಗೆ ಮೋಹವುಂಟಾಗುವದಿಲ್ಲ' (ಗೀ. 4–38) ಎಂದು ನಡುವೆಯಲ್ಲಿಯೂ 'ನಷ್ಟೋ ಮೋಹಃ' ನನ್ನ ಮೋಹವು ಹೋಯಿತು– ಎಂದು ಕೊನೆಯಲ್ಲಿಯೂ ಮೋಹವನ್ನು ಕಳೆಯುವ ಜ್ಞಾನಕ್ಕೆ ಪ್ರಾಶಸ್ತ್ಯವನ್ನು ಕೊಟ್ಟಂತೆ ಕಾಣುತ್ತಿದೆ. ಎರಡನೆಯ ಅಧ್ಯಾಯದ ಕೊನೆಯಲ್ಲಿ ಸ್ಥಿತಪ್ರಜ್ಞನ ಲಕ್ಷಣವನ್ನು ವಿವರಿಸಿ ಸ್ಥಿತಪ್ರಜ್ಞನಾಗಿರುವದು 'ಬ್ರಾಹ್ಮೀ ಸ್ಥಿತಿ' ಎಂದು ಹೊಗಳಿದೆ. ಗೀತೆಯಲ್ಲಿ ಜ್ಞಾನವನ್ನು ಸಾಂಖ್ಯಬುದ್ಧಿಯೆಂದೂ ಕರ್ಮವನ್ನು ಯೋಗಬುದ್ಧಿಯೆಂದೂ ಕರೆದಿದೆಯಷ್ಟೆ; ಆದರೆ 'ಯೋಗಿನಃ ಕರ್ಮ ಕುರ್ವನ್ತಿ ಸಙ್ಗಂತ್ಯಕ್ತ್ವಾಽಽತ್ಮ ಶುದ್ಧಯೇ' ಎಂದು ಕರ್ಮದಿಂದ ಚಿತ್ತಶುದ್ಧಿ ಯ ಫಲವನ್ನು ಹೇಳಿದೆಯೇ ಹೊರತು 'ಆತ್ಮಸಿದ್ಧಯೇ' ಎಂದೇನೂ ಹೇಳಿಲ್ಲ. ಗೀತೆಯಲ್ಲಿ ಕರ್ಮಯೋಗ ದಂತೆ ಧ್ಯಾನಯೋಗವನ್ನೂ ಭಕ್ತಿಯೋಗವನ್ನೂ ಹೇಳಿರುವದುಂಟು; ಆದರೆ ಈ ಎಲ್ಲಾ ಬಗೆಯ ಯೋಗವನ್ನೂ ಜ್ಞಾನಕ್ಕೆ ಸಾಧನವೆಂದೇ ಅಲ್ಲಲ್ಲಿ ಹೇಳಿರುವದು ಕಂಡುಬರುತ್ತದೆ. 'ತತ್ಸ್ವಯಂ ಯೋಗಸಂಸಿದ್ಧಃ ಕಾಲೇನಾಽತ್ಮನಿ ವಿನ್ದತಿ' (4-38), 'ಯುಞ್ಜ್ಯಾದ್ ಯೋಗಮಾತ್ಮವಿಶುದ್ಧಯೇ' (6-12), 'ಭಕ್ತ್ಯಾ ಮಾಮಭಿಜಾನಾತಿ' (18-15) ಎಂದು ಹೇಳಿರುತ್ತದೆಯೇ ಹೊರತು ಜ್ಞಾನವನ್ನು ಕರ್ಮಾದಿಗಳಿಗೆ ಅಂಗವೆಂದಾಗಲಿ ಅದು ಅವುಗಳ ಸಹಾಯ ದಿಂದ ಫಲವನ್ನು ಕೊಡತಕ್ಕದ್ದೆಂದಾಗಲಿ ಹೇಳಿರುವದು ಎಲ್ಲಿಯೂ ಕಂಡು ಬಂದಿರುವದಿಲ್ಲ. ಅದರ ವಿಷಯವನ್ನು ಹೇಳುವಾಗ ''ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ಕೃತಕೃತ್ಯಶ್ಚ ಭಾರತ'' (15-20) ಎಂದು ಜ್ಞಾನಮಾತ್ರದಿಂದ ಕೃತಕೃತ್ಯನಾಗುವನೆಂದು ಪರಮಪುರುಷಾರ್ಥವನ್ನೇ ಅದರ ಫಲವೆಂದು ತಿಳಿಸಿರುತ್ತದೆ. ವಾಕ್ಯಪರ್ಯಾಲೋಚನೆಯಿಂದಲೇ ವಿಷಯನಿರ್ಧಾರಣೆ ಯನ್ನು ಮಾಡುವವರಿಗಾಗಿ ಈ ತಾತ್ಪರ್ಯಲಿಂಗಗಳನ್ನು ಇಲ್ಲಿ ನಾನು ತಿಳಿಸಿರುತ್ತೇನೆ. ಈ ಲಿಂಗಗಳನ್ನುಪಯೋಗಿಸಿಕೊಂಡೇ ಆಚಾರ್ಯರು ತಮ್ಮ

ಭಾಷ್ಯವನ್ನು ಬರೆದಿರುವದರಿಂದ ವಾಕ್ಯಸ್ವಭಾವವನ್ನು ಪರಿಶೀಲನೆಮಾಡಿ ದರೂ ಅವರು ತೆಗೆದಿರುವ ತಾತ್ಪರ್ಯವು ಸರಿ ಎಂದಾಗುತ್ತದೆ ಎಂಬುದನ್ನು ತಿಳಿಸುವದಕ್ಕಾಗಿ ಈ ವಿಷಯವನ್ನು ಪ್ರಸ್ತಾಪಿಸಿರುತ್ತೇನೆ.

ಇನ್ನು ಆಚಾರ್ಯರ ಮತದಂತೆ ಜ್ಞಾನವೆಂದರೆ ಏನು? ಸಂನ್ಯಾಸವೆಂದರೆ ಏನು?- ಎಂಬುದನ್ನು ವಿಚಾರಮಾಡೋಣ. ಏಕೆಂದರೆ ಕೆಲವರು ಜ್ಞಾನವಾದ ಬಳಿಕ ಕರ್ಮವನ್ನು ಮಾಡಬೇಕೊ, ಬಿಡಬೇಕೊ?- ಎಂಬುದು ಗೀತೆಯ ಮುಖ್ಯ ವಿಚಾರಣೀಯವಿಷಯವೆಂದು ಭಾವಿಸಿರುತ್ತಾರೆ. ಜ್ಞಾನವೆಂದರೆ ಆತ್ಮತತ್ತ್ವದ ತಿಳಿವು. ಮೇಲೆ ನಾನು ಕೊನೆಯಲ್ಲಿ ಉದಾಹರಿಸಿರುವ (15-20) ಜ್ಞಾನಸ್ತುತಿಯ ವಾಕ್ಯದ ಹಿಂದೆ ಪರಮಾತ್ಮ ತತ್ತ್ವದ ವಿವೇಚನೆಯನ್ನು ಮಾಡಿದೆ. ಕ್ಷರಾಕ್ಷರಗಳಿಗಿಂತ ವಿಲಕ್ಷಣನಾದ ಆತ್ಮನೇ ಪುರುಷೋತ್ತಮನು - ಎಂಬ ಜ್ಞಾನವನ್ನು ಅಲ್ಲಿ ವಿವರಿಸಿದೆ. ಅದನ್ನು ತಿಳಿದವನೇ ಬುದ್ಧಿವಂತನು ಎಂದರೆ ಜ್ಞಾನಿಯು, ಕೃತಕೃತ್ಯನು ಎಂದರೆ ಮುಂದೆ ಮಾಡತಕ್ಕದ್ದೇನೂ ಉಳಿದಿರದವನು- ಎಂದು ಕೊನೆಯಲ್ಲಿ ಹೇಳಿರುತ್ತದೆ. ಪುರುಷೋತ್ತಮಸ್ವರೂಪವು ಯಾವದು? ಕ್ಷರ ಎಂದರೆ ಸರ್ವಭೂತಗಳ ರೂಪಗಳಿಂದ ತೋರುವ ಆತ್ಮಸ್ವರೂಪವು; ವಿಧವಿಧವಾದ ಕಾರ್ಯಕರಣ ಸಂಘಾತಗಳಿಂದ ಕೂಡಿ ಕೊಂಡಿದ್ದು ಆಯಾ ಸಂಘಾತವು ನಾಶವಾದರೆ ನಾಶವಾಗುವ ಸ್ವರೂಪವದು. ಅಕ್ಷರವೆಂದರೆ ಪ್ರಲಯದಲ್ಲಿರುವ ಅವ್ಯಾಕೃತ ರೂಪವಾದ ಆತ್ಮಸ್ಥಿತಿಯು. ಅದಕ್ಕೆ ಕಾಲದೇಶ ಪರಿಚ್ಛೇದವಿಲ್ಲದ್ದರಿಂದ ಅದು ಅಕ್ಷರಸ್ವರೂಪವು. ಆದರೆ ಈ ವ್ಯಾಕೃತಾವ್ಯಾಕೃತ ರೂಪಗಳೆರಡರಲ್ಲಿಯೂ ನಾಮರೂಪಕರ್ಮಗಳ ಸಂಬಂಧವು ಆತ್ಮನಿಗೆ ತೋರುತ್ತದೆ. ನಾಮರೂಪ ಕರ್ಮಗಳು ನಿಜವಾಗಿ ಆತ್ಮನಿಗೆ ಸೇರಿದವುಗಳಲ್ಲ; ಏಕೆಂದರೆ ಅವು ಆತ್ಮ ಚೈತನ್ಯಕ್ಕೆ ವಿಷಯವಾಗಿರುತ್ತವೆ. ಆದ್ದರಿಂದ ಇದು ಅನಾತ್ಮವು. ಅನಾತ್ಮವು ಆತ್ಮ ಸ್ವರೂಪಕ್ಕಿಂತ ಬೇರೆಯೆಂದಾಗಲಿ ಅದೇ ಸ್ವರೂಪವೇ ಎಂದಾಗಲಿ ಹೇಳುವದಕ್ಕೆ ಬರದೆ ನೀರಿನ ನೊರೆಯಂತೆ ಇರುವ ಅನಿರ್ವಚನೀಯತತ್ತ್ವವಾಗಿರುತ್ತದೆ. ಈ ಕಾರಣದಿಂದ ಇದನ್ನು ವೇದಾಂತಿಗಳು ಮಾಯೆಯೆಂದೂ ಮಿಥ್ಯಾಸ್ವರೂಪ ವೆಂದೂ ಕರೆಯುತ್ತಾರೆ. ಈ ಕ್ಷರಾಕ್ಷರಸ್ವರೂಪಕ್ಕಿಂತ ವಿಲಕ್ಷಣವಾಗಿರುವ ಆತ್ಮಸ್ವರೂಪವೇ ಪುರುಷೋತ್ತಮವೆನಿಸುವದು. ಅದನ್ನು ಅರಿತರೆ

'ಸರ್ವವಿತ್' (15-19) ಎಲ್ಲವನ್ನೂ ಅರಿತವನಾಗುವನು. ಏಕೆಂದರೆ ಆತ್ಮನಿಗಿಂತ ವ್ಯತಿರಿಕ್ತವಾಗಿ ಮತ್ತೆ ಯಾವದೂ ಸ್ವತಂತ್ರತತ್ತ್ವವೇ ಇಲ್ಲದಿರು ವದರಿಂದ ಈ ಆತ್ಮನೇ ಸರ್ವವೂ ಆಗಿರುತ್ತಾನೆ. ಇದೇ ಆತ್ಮಜ್ಞಾನವು ಎಂಬುದು ಹದಿನೈದನೆಯ ಅಧ್ಯಾಯದ ಸಾರವು. ಹೀಗೆಯೇ ''ಕ್ಷೇತ್ರಕ್ಷೇತ್ರಜ್ಞಯೋ ರ್ಜ್ಞಾನಂ ಯತ್ತಜ್ಜ್ಞಾನಂ ಮತಂ ಮಮ'' (13-2) ಕ್ಷೇತ್ರಕ್ಷೇತ್ರಜ್ಞರ ಅರಿವೇ ಜ್ಞಾನವು ಎಂಬುದು ಭಗವಂತನ ಮತವು. ಕ್ಷೇತ್ರವು ಮಹಾಭೂತಾದಿ ಧೃತ್ಯಂತವಾದ ಅನಾತ್ಮವು, ಅದರಲ್ಲಿ ಸ್ಥೂಲಸೂಕ್ಷ್ಮ ಶರೀರವೆಲ್ಲವೂ ಅಡಕ ವಾಗಿರುತ್ತದೆ. ಈ ಅನಾತ್ಮವಾದ ಕ್ಷೇತ್ರವನ್ನು ಯಾವನು ಅರಿಯುತ್ತಿರುವನೋ ಆ ನಿತ್ಯಚೈತನ್ಯಸ್ವರೂಪನಾದ ಆತ್ಮನೇ ಕ್ಷೇತ್ರಜ್ಞನು; ಎಲ್ಲಾ ಶರೀರಗಳಲ್ಲಿಯೂ ಆ ಕ್ಷೇತ್ರಜ್ಞನೇ, ಜೀವನೇ, ನಿಜವಾಗಿ ಪರಮಾತ್ಮನು - ಎಂದು ತಿಳಿಯಬೇಕು ಎಂದು ಹದಿಮೂರನೆಯ ಅಧ್ಯಾಯದಲ್ಲಿ ಹೇಳಿರುತ್ತದೆ. ಇದರಂತೆ ಒಂಬತ್ತನೆಯ ಅಧ್ಯಾಯದಲ್ಲಿಯೂ ಆತ್ಮಜ್ಞಾನವನ್ನೇ ಜ್ಞಾನವೆಂದು ಕರೆದಿರುವದು ಕಂಡುಬರುತ್ತದೆ. ಪರಮಾತ್ಮನು ಜಗತ್ತೆಲ್ಲವನ್ನೂ ವ್ಯಾಪಿಸಿರುವ ಚೈತನ್ಯಸ್ವರೂಪನು. ಆ ಪರಮಾತ್ಮನಲ್ಲಿ ಸರ್ವಭೂತಗಳೂ ಇರುತ್ತವೆಯೇ ಹೊರತು ಆ ಆತ್ಮನು ಭೂತಗಳೊಳಗೆ ಇರುವದಿಲ್ಲ; ಅನಾತ್ಮವು ಆತ್ಮನನ್ನು ಅವಲಂಬಿಸಿರುವದೇ ಹೊರತು ಆತ್ಮನು ಅನಾತ್ಮವನ್ನವಲಂಬಿಸಿರುವದಿಲ್ಲ, ನಿಜವಾಗಿ ನೋಡಿದರೆ ಅನಾತ್ಮವು ಸ್ವತಂತ್ರ ವಸ್ತುವೇ ಅಲ್ಲವಾದ್ದರಿಂದ ಯಾವ ಭೂತಗಳೂ ಆತ್ಮನಲ್ಲಿಲ್ಲವೆಂದೂ ಹೇಳಬಹುದು (9-4,5) ಎಂದು ಆತ್ಮಸ್ವರೂಪವನ್ನು ಅಲ್ಲಿ ತಿಳಿಸಿಕೊಟ್ಟಿದೆ.

ಈಗ ಇಂಥ ಸ್ವರೂಪದ ಆತ್ಮನೇ ತಾನು ಎಂದು ಅರಿತಿರುವ ಜ್ಞಾನವಾದ ಮೇಲೆ, ನಾಮರೂಪಕರ್ಮಗಳ ಸಂಬಂಧವು ತನ್ನ ಸ್ವರೂಪಕ್ಕೆ ಸ್ವಲ್ಪವೂ ಸೇರಿಲ್ಲವೆಂದು ಅರಿವಾದ ಮೇಲೆ, ಕರ್ಮವನ್ನು ಮಾಡಬೇಕೊ ಬಿಡಬೇಕೊ?- ಎಂಬ ಸಂಶಯವು ಹುಟ್ಟೀತೆ? ಇದನ್ನು ನಾವುಗಳೆಲ್ಲರೂ ಸಾವಧಾನವಾಗಿ ವಿಚಾರಮಾಡಬೇಕು.

ಇನ್ನು ಸಂನ್ಯಾಸಶಬ್ದದ ಅರ್ಥವನ್ನು ಕುರಿತು ವಿಚಾರಮಾಡುವದು ಉಳಿದಿದೆ. ಸಂನ್ಯಾಸವೆಂದರೆ ಯಾವ ಕರ್ಮವನ್ನೂ ಮಾಡದೆ ಇರುವದು ಎಂಬ ಅರ್ಥವನ್ನು ಮಾಡಿರುವದರಿಂದ ಶಂಕರಾಚಾರ್ಯರು ಯಾವ ಕೆಲಸವನ್ನೂ ಮಾಡದೆ ಇರುವ ಸೋಮಾರಿಗಳ ಆಶ್ರಮವನ್ನು ಪ್ರೋತ್ಸಾಹಿಸಿರು

ತ್ತಾರೆಂದು ಕೆಲವರ ಭಾವನೆಯಿದೆ. ಇನ್ನು ಕೆಲವರು ಜ್ಞಾನವಾದ ಬಳಿಕ ಸಂನ್ಯಾಸವನ್ನಾದರೂ ಮಾಡಬಹುದು, ಕರ್ಮವನ್ನಾದರೂ ಮಾಡಬಹುದು; ಇವೆರಡರಲ್ಲಿ ಕೇವಲ ಜ್ಞಾನದಿಂದ ಇರುವ ಮಾರ್ಗವು ಉತ್ತಮವೇ ಸರಿ; ಆದರೆ ಜ್ಞಾನವಾದಬಳಿಕವೂ ಲೋಕ ಸಂಗ್ರಹಾರ್ಥವಾಗಿ ನಿಷ್ಕಾಮಕರ್ಮ ಮಾಡುತ್ತಿರುವ ಕರ್ಮಯೋಗವು ಸರ್ವೋತ್ತಮ. ಈ ಎರಡನೆಯ ಮಾರ್ಗವನ್ನೇ ಗೀತೆಯಲ್ಲಿ ಉಪದೇಶಿಸಿದೆ ಎನ್ನುತ್ತಿದ್ದಾರೆ. ಎರಡು ಮಾರ್ಗಗಳಿಗೂ ಮೋಕ್ಷವುಂಟು, ಎರಡು ಮಾರ್ಗಗಳಿಗೂ ಹಿಂದಿನವರ ಸಂಪ್ರದಾಯದ ಆಧಾರವಿದೆ- ಎನ್ನುವದು ಅವರ ಅಭಿಪ್ರಾಯ. ಆದರೆ ಶಂಕರಾಚಾರ್ಯರು ಹೇಳಿರುವ ಆತ್ಮಜ್ಞಾನವು ಪ್ರಾಪ್ತವಾದಮೇಲೆ ನಾಮರೂಪ ಕರ್ಮಗಳ ಸಂಬಂಧವು ಆತ್ಮನಿಗೆ ಇರುವದೇ ಇಲ್ಲ; ಆದ್ದರಿಂದ ಅಂಥ ಜ್ಞಾನಿಯು ಕರ್ಮವನ್ನು ಮಾಡಬೇಕೊ, ಬಿಡಬೇಕೊ?- ಎಂಬ ಪ್ರಶ್ನೆಯೇ ಅವರ ಸಿದ್ಧಾಂತ ದಲ್ಲಿ ಎದ್ದುಕೊಳ್ಳುವಹಾಗಿಲ್ಲ. ಅವರು ಹೇಳುವ ಸಂನ್ಯಾಸವು ಮಾಡುವದಕ್ಕೆ ಅಥವಾ ಬಿಡುವದಕ್ಕೆ ಬರುವ ಕ್ರಿಯೆಯಲ್ಲ. 'ಸರ್ವಕರ್ಮಾಣಿ ಮನಸಾ ಸಂನ್ಯಾಸ್ಯಾಸ್ತೇ ಸುಖಂ ವಶೀ । ನವದ್ವಾರೇ ಪುರೇ ದೇಹೀ ನೈವಕುರ್ವನ್ನ ಕಾರಯನ್ ॥ (5-13) ಎಂಬ ಗೀತೋಕ್ತಿಯಂತೆ ಈ ಸಂನ್ಯಾಸವು ಮನಸ್ಸಿನಲ್ಲಿ ಆಗತಕ್ಕದ್ದು; 'ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮಯಃ । ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್'॥ (4-18) ಎಂಬ ಶ್ಲೋಕದಲ್ಲಿ ಹೇಳಿರುವಂತೆ ಆತ್ಮನಲ್ಲಿ ಯಾವ ಕರ್ಮವೂ ಇಲ್ಲ- ಎಂಬುದನ್ನು ತಿಳಿದು ತನಗೆ ಸಂಬಂಧಪಟ್ಟಿರುವ ವೆಂಬ ಎಲ್ಲಾ ಕರ್ಮಗಳನ್ನೂ ಬಿಡತಕ್ಕದ್ದು. ಶರೀರದಲ್ಲಿರುವಾಗಲೇ ತಾನು ಯಾವ ಕರ್ಮವನ್ನೂ ಮಾಡುತ್ತಿಲ್ಲವೆಂಬ ಅರಿವನ್ನು ಸಂಪಾದನೆ ಮಾಡಿಕೊಂಡರೆ ಸರ್ವಕರ್ಮಸಂನ್ಯಾಸವಾಯಿತೇ ಹೊರತು ಎಲ್ಲಾ ಕರ್ಮವನ್ನೂ ಬಿಟ್ಟು ಕುಳಿತ ಮಾತ್ರದಿಂದ ಸಂನ್ಯಾಸವಾಗಲಾರದು ಎಂಬುದು ಆಚಾರ್ಯರ ಅಭಿಪ್ರಾಯ. ಈ ವೈದಿಕಸಂನ್ಯಾಸದ ಅರ್ಥವನ್ನು ಚೆನ್ನಾಗಿ ಮನದಟ್ಟು ಮಾಡಿ ಕೊಳ್ಳದೆ 'ಸರ್ವಕರ್ಮಾಣಿ ದೇಹೇ ಸಂನ್ಯಸ್ಯ' ಎಂದರೆ ಎಲ್ಲಾ ಕರ್ಮಗಳನ್ನೂ ದೇಹದಲ್ಲಿ ಇಟ್ಟುಕೊಂಡು ಎಂಬರ್ಥವನ್ನೂ ಕೆಲವರು ಮಾಡಿದ್ದರೆಂಬುದು ಭಾಷ್ಯದಿಂದ ತಿಳಿಯಬರುತ್ತದೆ. ಆದರೆ 'ನ್ಯಸ್' ಧಾತುವಿಗೆ

ಇಡು ಎಂಬರ್ಥವಿದ್ದರೂ 'ಸಂನ್ಯಸ್' ಎಂದು 'ಸಂ' ಎಂಬ ಉಪಸರ್ಗ ಪೂರ್ವಕವಾದ ಆ ಧಾತುವಿಗೆ ಬಿಡು ಎಂಬುದೇ ಅರ್ಥವೆಂಬುದನ್ನು ಆಚಾರ್ಯರು ತೋರಿಸಿಕೊಟ್ಟಿರುತ್ತಾರೆ. ಇಲ್ಲಿ ಮನಸ್ಸಿನಿಂದ ಮಾತ್ರ ತ್ಯಾಗಮಾಡುವದು ಸಂನ್ಯಾಸವು. ಅದು ವಾಚಿಕಕಾಯಿಕ ವ್ಯಾಪಾರಗಳಿಗೆ ಅನ್ವಯಿಸುವದಿಲ್ಲ – ಎಂಬರ್ಥವನ್ನು ಕೆಲವರು ತೆಗೆದಿರುತ್ತಾರೆ. ಆದರೆ ಎಲ್ಲಾ ವ್ಯಾಪಾರಗಳೂ ಮನೋವ್ಯಾಪಾರಪೂರ್ವಕವಾಗಿರುವದರಿಂದ ಮಾನಸಿಕ ಸಂನ್ಯಾಸಿಯು ಯಾವ ವ್ಯಾಪಾರವನ್ನೂ ಮಾಡುವದಕ್ಕೆ ಆಗುವದಿಲ್ಲ; ಇಲ್ಲಿ ನೈವಕುರ್ವನ್, ನ ಕಾರಯನ್– ಮಾಡುವದೇ ಇಲ್ಲ, ಮಾಡಿಸುವದೇ ಇಲ್ಲ– ಎಂದು ಒತ್ತಿ ಹೇಳಿರುವದನ್ನು ಲಕ್ಷ್ಯವಿಟ್ಟವರಿಗೆ ಇದು ಸರ್ವಕರ್ಮ ಸಂನ್ಯಾಸದ ವಿಷಯವೆಂಬ ಬಗ್ಗೆ ಯಾವ ಸಂಶಯವೂ ಉಳಿಯುವದೇ ಇಲ್ಲ.

ಆಚಾರ್ಯರು ಹೇಳಿರುವ ಜ್ಞಾನಪೂರ್ವಕವಾದ ಸಂನ್ಯಾಸವು ಮಾನಸಿಕವಾದದ್ದು ಎಂಬುದನ್ನು ಲಕ್ಷ್ಯದಲ್ಲಿಟ್ಟರೆ ಅವರ ಅಭಿಪ್ರಾಯವನ್ನು ತಪ್ಪಾಗಿ ತಿಳಿದು ಕೊಳ್ಳುವದು ಸಾಧ್ಯವೇ ಆಗುತ್ತಿರಲಿಲ್ಲ. ಇಲ್ಲಿ ಕ್ರಿಯಾಸಾಮಾನ್ಯವನ್ನು ಬಿಡುವ ಪ್ರಶ್ನೆಯಿಲ್ಲ; ಏಕೆಂದರೆ ಪ್ರತಿಯೊಬ್ಬನೂ ಯಾವದಾದರೊಂದು ಕ್ರಿಯೆಯನ್ನು ಮಾಡುತ್ತಲೇ ಇರುತ್ತಾನೆ. ಜೀವನಕ್ಕಾಗಿ ಮಾಡುವ ಉದ್ಯೋಗವನ್ನು ಬಿಡಬೇಕೆಂಬ ವಿಚಾರವೂ ಇಲ್ಲಿಲ್ಲ. ಆಚಾರ್ಯರು ಗೀತೆಯಲ್ಲಿ ಸರ್ವಕರ್ಮಸಂನ್ಯಾಸಪೂರ್ವಕವಾದ ಆತ್ಮಜ್ಞಾನ ನಿಷ್ಠೆಯಿಂದ ಮೋಕ್ಷವಾಗುವದು – ಎಂದು ಬರೆದಿರುವಲ್ಲಿ ಹೇಳಿರುವ ಸಂನ್ಯಾಸವು ಯಾವದು? ಗೀತೋಪದೇಶದ ಕಾಲದಲ್ಲಿ ಹೊಟ್ಟೆಗೇನು ಗತಿ?– ಎಂಬ ಪ್ರಶ್ನೆ ಜನರ ಮುಂದೆ ಇರಲಿಲ್ಲ; ಅರ್ಜುನನಿಗಂತೂ ಅದು ತೀರ ಹೊಂದದ ಮಾತು. ಸೋಮಾರಿತನದ ಸಂಭವವೂ ಅವನಿಗಿಲ್ಲ. ಅವನು ಧರ್ಮಸಂಮೂಢನಾಗಿದ್ದನು. ಅವನಿಗೆ ತಾನು ಮಾಡುತ್ತಿರುವದು ಪಾಪ ಕರವಾದ ಅಯುಕ್ತವಾದ ಕರ್ಮವಲ್ಲವೆ? ಎನಿಸಿತು. ರಾಜ್ಯಕ್ಕಾಗಿ ಯುದ್ಧ ಮಾಡುವದಕ್ಕಿಂತಲೂ ಭಿಕ್ಷೆಬೇಡುವದಾದರೂ ಉತ್ತಮವಲ್ಲವೆ?– ಎನಿಸಿತು. ಆಗ ಭಗವಂತನು ಸಮ್ಯಗ್ಜ್ಞಾನದ ಮೂಲಕ ಕರ್ಮದ ರಹಸ್ಯವನ್ನು ತೋರಿಸಿ ಕರ್ಮಯೋಗದಿಂದಾಗುವ ಚಿತ್ತಶುದ್ಧಿರೂಪವಾದ ಫಲವನ್ನೂ ಆ ಮೂಲಕ ಸರ್ವಕರ್ಮಸಂನ್ಯಾಸದಿಂದಾಗುವ ಪರಮಪುರುಷಾರ್ಥವನ್ನೂ ತಿಳಿಸುವದಕ್ಕೆ

ಹೊರಟಿರುತ್ತಾನೆ. ಇಲ್ಲಿ ಕರ್ಮವನ್ನು ಬಿಡುವದು ಎಂಬ ಮಾತನ್ನು ಪ್ರಪಂಚವನ್ನು ಬಿಡುವದು ಎಂಬ ಮಾತಿನಂತೆಯೇ ಅರ್ಥಮಾಡಿಕೊಳ್ಳಬೇಕು. ಪ್ರಪಂಚವು ನಾಮ ರೂಪಕರ್ಮಾತ್ಮಕವಾಗಿದೆ. ಇದನ್ನು ನಾವು ಬಿಡುವದಕ್ಕೂ ಇಟ್ಟುಕೊಳ್ಳುವದಕ್ಕೂ ಆಗುವದಿಲ್ಲ. ಈ ದಿನ ನನಗೆ ಸ್ವಲ್ಪ ಎದೆನೋವಾಗಿರುವದರಿಂದ ನಾಲ್ಕು ದಿನ ಉಪನ್ಯಾಸವನ್ನು ಬಿಟ್ಟರೆ ಒಳ್ಳೆಯದು ಎಂದು ವೈದ್ಯರು ಹೇಳಿದ್ದರು. ಉಪನ್ಯಾಸವನ್ನು ಬೇಕಾದರೆ ನಾನು ನಿಲ್ಲಿಸಬಹುದು; ಏಕೆಂದರೆ ಅದು ನನ್ನ ಅಧೀನ. ಆದರೆ ಪ್ರಪಂಚವು ಹೀಗೆ ಬಿಡುವದಕ್ಕೆ ಬರುವಂಥದ್ದೆ? ಅಲ್ಲ. ಪ್ರಪಂಚವು ಸತ್ಯವೆಂಬ ಬುದ್ಧಿಯಿಂದ ಅನೇಕರು ಕಾಮಕ್ರೋಧಾದಿಗಳಿಗೆ ಸಿಕ್ಕಿ ನರಳುತ್ತಿರುತ್ತಾರೆ. ನಾಯಿಗಳು ಎಂಜಲಹಾಳೆಗೆ ಒಂದರೊಡನೊಂದು ಕಚ್ಚಾಡುವಂತೆ ಜನರೂ ಕಚ್ಚಾಡುತ್ತಿರುವರು. ಈ ಕಚ್ಚಾಟದಲ್ಲಿ ತಮ್ಮ ಸ್ವಾರ್ಥವನ್ನು ಚೆನ್ನಾಗಿ ಸಾಧಿಸಿಕೊಳ್ಳಬಲ್ಲವರಿಗೆ ವ್ಯವಹಾರಚತುರರು ಎಂದು ಹೆಸರು. ಆದರೆ ದೇಹಾತ್ಮಬುದ್ಧಿಯನ್ನು ಬಿಟ್ಟು 'ದೇಹೇಂದ್ರಿಯಾದಿಗಳಿಗಿಂತ ಅತ್ಯಂತ ವಿಲಕ್ಷಣವಾದ ಸರ್ವವ್ಯಾಪಕವಾದ ಚೈತನ್ಯವೊಂದಿದೆ; ಅದೇ ಪರಮಾರ್ಥ ಸತ್ಯವು. ಈ ನಾಮರೂಪಕರ್ಮಾತ್ಮಕವಾದ ಪ್ರಪಂಚವು ಅದರಿಂದ ವ್ಯತಿರಿಕ್ತವಾಗಿ ಸ್ವತಂತ್ರಸತ್ತೆಯುಳ್ಳದ್ದೇ ಅಲ್ಲವಾದ್ದರಿಂದ ಇದು ಮಿಥ್ಯೆಯೇ'- ಎಂದು ಅದರಲ್ಲಿರುವ ಮಿಥ್ಯಾಭಿಮಾನವನ್ನು ಬಿಟ್ಟರೆ ಅಂಥವರಿಗೆ ಕರ್ಮದ ಸಂಬಂಧವು ತೀರ ಬಿಟ್ಟುಹೋದಂತೆ ಆಯಿತು. ಇದಕ್ಕೇ ಸಂನ್ಯಾಸವೆಂದು ಹೆಸರು.

ಈ ಅಭಿಪ್ರಾಯವು ನನ್ನ ಸ್ವಕಪೋಲಕಲ್ಪಿತವಾದದ್ದೊ, ಆಚಾರ್ಯರ ಗೀತಾಭಾಷ್ಯದಲ್ಲಿಯೂ ಇದೆಯೊ?- ಎಂದು ಕೆಲವರು ಸಂಶಯ ಪಡಬಹುದು. ಅಂಥವರ ಸಂಶಯನಿವಾರಣೆಗಾಗಿ ಐದನೆಯ ಅಧ್ಯಾಯದ ಸಂಬಂಧಭಾಷ್ಯವನ್ನು ಇಲ್ಲಿ ಪರಾಮರ್ಶಿಸಬೇಕಾಗಿದೆ. ಇಲ್ಲಿ ಅರ್ಜುನನು ಈ ಪ್ರಶ್ನೆಯನ್ನು ಮಾಡಿರುತ್ತಾನೆ: ''ಸಂನ್ಯಾಸಂ ಕರ್ಮಣಾಂ ಕೃಷ್ಣ ಪುನರ್ಯೋಗಂ ಚ ಶಂಸಸಿ । ಯಚ್ಛ್ರೇಯ ಏತಯೋರೇಕಂ ತನ್ಮೇ ಬ್ರೂಹಿ ಸುನಿಶ್ಚಿತಮ್ ॥'' (ಗೀ. 5-1) ಕರ್ಮಸಂನ್ಯಾಸವನ್ನೂ ಕರ್ಮಯೋಗವನ್ನೂ ಮತ್ತೆಮತ್ತೆ ಹೊಗಳಿರುತ್ತೀಯೆ; ಇವುಗಳಲ್ಲಿ ಯಾವದೊಂದು ಶ್ರೇಯಸ್ಕರವೋ ಅದನ್ನು

ನಿಶ್ಚಿತವಾಗಿ ಹೇಳಿಬಿಡು! ಇದಕ್ಕೆ ಶ್ರೀಕೃಷ್ಣ ಭಗವಂತನ ಉತ್ತರವೇನೆಂದರೆ; 'ಸಂನ್ಯಾಸಃ ಕರ್ಮಯೋಗಶ್ಚ ನಿಃಶ್ರೇಯಸಕರಾವುಭೌ । ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ ॥' (5-2) ಸಂನ್ಯಾಸ, ಕರ್ಮಯೋಗ- ಇವೆರಡೂ ಮೋಕ್ಷಕ್ಕೆ ಕಾರಣವೇ ಆಗಿವೆ; ಆದರೆ ಅವೆರಡರಲ್ಲಿ ಕರ್ಮಸಂನ್ಯಾಸಕ್ಕಿಂತ ಕರ್ಮಯೋಗವೇ ವಿಶಿಷ್ಟವಾಗಿರುತ್ತದೆ. ಇಲ್ಲಿ ಕರ್ಮಯೋಗವು ವಿಶಿಷ್ಟವು ಎಂಬುದಕ್ಕೆ ಅದೇ ಶ್ರೇಷ್ಠವಾದದ್ದು, ಹೆಚ್ಚಿನದು- ಎಂಬರ್ಥವನ್ನು ಕೆಲವರು ತೆಗೆದಿರುತ್ತಾರೆ. ಆದರೆ ಅದು ಗೀತೆಯ ಪೂರ್ವಾಪರ ಸಂದರ್ಭಕ್ಕೆ ಹೊಂದುವದಿಲ್ಲ, ಹೇಗೆಂದರೆ ಭಗವಂತನು ಅರ್ಜುನನಿಗೆ ಉಪದೇಶಮಾಡುವದಕ್ಕೆ ಮೊದಲುಮಾಡಿದಾಗ ಮೊದಲು ಸಾಂಖ್ಯರಿಗೆ ಜ್ಞಾನಯೋಗವನ್ನೂ ಕರ್ಮಿಗಳಿಗೆ ಕರ್ಮಯೋಗವನ್ನೂ ಹೇಳಿರುತ್ತೇನೆಂದು ಬಾಯಿ ಬಿಟ್ಟು ತಿಳಿಸಿರುತ್ತಾನೆ. ಆದ್ದರಿಂದ ಇವೆರಡೂ ಒಬ್ಬನೇ ಅಧಿಕಾರಿಗೆ ಹೊಂದುವವೆಂದಾಗಲಿ, ಇವೆರಡರಲ್ಲಿ ಕರ್ಮಯೋಗವೇ ಹೆಚ್ಚೆಂದಾಗಲಿ ಅರ್ಥವನ್ನು ಮಾಡುವದಕ್ಕೆ ಬರುವದಿಲ್ಲ. ಇದೂ ಅಲ್ಲದೆ ಮೊದಲು ಹೇಳಿರುವ ಸಾಂಖ್ಯಬುದ್ಧಿಯಲ್ಲಿ 'ನ ಜಾಯತೇ ಮ್ರಿಯತೇ ವಾ ಕದಾಚಿತ್'- ಎಂದಿಗೂ ಹುಟ್ಟುವದಿಲ್ಲ, ಸಾಯುವದಿಲ್ಲ- ಎಂದು ಮುಂತಾಗಿ ಆತ್ಮನು ಸರ್ವವಿಕ್ರಿಯಾಶೂನ್ಯನೆಂದು ಹೇಳಿರುತ್ತದೆ. ಯಾವ ವಿಕಾರವೂ ಇಲ್ಲದ ಆತ್ಮನು ನಾನು ಎಂದರಿತವನಿಗೆ ಹೇಗೆತಾನೆ ಯಾವ ಕರ್ಮವಾದರೂ ಇದ್ದೀತು? ದೇಹದ ಸಂಬಂಧದಿಂದ ಕ್ರಿಯೆಯು ಎಲ್ಲರಿಗೂ ಇರುತ್ತದೆ; ಆದರೆ ದೇಹದ ಜನ್ಮಾದಿವಿಕಾರಗಳು ನನಗಿಲ್ಲ ಎಂಬ ಜ್ಞಾನವೇ ಸಾಂಖ್ಯಜ್ಞಾನ. ವಿಕಾರವಾಗಲಿ ಚಲನೆಯಾಗಲಿ ಇಲ್ಲದವನಿಗೆ ಕರ್ಮವುಂಟೆಂಬುದು ಅಪಹಾಸ್ಯಕ್ಕೆ ಗುರಿಯಾದ ಮಾತಲ್ಲವೆ? ನಿಷ್ಕ್ರಿಯನಾದ ಅಜಾವ್ಯಯನಾದ ಆತ್ಮನನ್ನು ಅರಿತವನಿಗೆ ಯಾವ ಕ್ರಿಯೆಯ ಸಂಬಂಧವೂ ಇಲ್ಲವೆಂಬುದನ್ನು ಭಗವಂತನು 'ವೇದಾವಿನಾಶಿನಂ ನಿತ್ಯಂ ಯ ಏನಮಜಮವ್ಯಯಮ್ । ಕಥಂ ಸ ಪುರುಷಃ ಪಾರ್ಥ ಕಂ ಘಾತಯತಿ ಹನ್ತಿ ಕಮ್ ॥' (2-21) ಎಂಬ ಶ್ಲೋಕದಿಂದ ಸ್ಪಷ್ಟವಾಗಿ ತಿಳಿಸಿರುತ್ತಾನೆ. ಆದ್ದರಿಂದ ಇಲ್ಲಿ ಸಂನ್ಯಾಸ ಮತ್ತು ಕರ್ಮಯೋಗ- ಇವೆರಡೂ ನಿಃಶ್ರೇಯಸಕರವಾಗಿರುವವು ಎಂದು ಹೇಳಿರುವದು ಜ್ಞಾನಿಯ ವಿಷಯವಲ್ಲ, ಏಕೆಂದರೆ ಜ್ಞಾನಿಗೆ ಕರ್ಮದ ಸಂಬಂಧವೇ ಇರುವದಿಲ್ಲ.

ಹೀಗಿರುವದರಿಂದಲೇ ಆಚಾರ್ಯರು ''ಆತ್ಮತತ್ತ್ವವಿದಃ ಸಮ್ಯಗ್ದರ್ಶನವಿರುದ್ಧೋ ಮಿಥ್ಯಾಜ್ಞಾನಹೇತುಕಃ ಕರ್ಮಯೋಗಃ ಸ್ವಪ್ನೇಽಪಿ ನ ಸಂಭಾವಯಿತುಂ ಶಕ್ಯತೇ'' ಆತ್ಮಜ್ಞಾನಿಗೆ ಕನಸಿನಲ್ಲಿ ಕೂಡ ಕರ್ಮಯೋಗವು ಇದ್ದೀತೆನ್ನುವದಕ್ಕೆ ಬರುವದಿಲ್ಲ ಎಂದಿರುತ್ತಾರೆ.

ಜ್ಞಾನವೆಂದರೆ ನಿಗಮನಿರುಕ್ತವ್ಯಾಕರಣಾದಿಗಳಿಂದ ಮಾಡಿಕೊಳ್ಳುವ ತಿಳಿವಳಿಕೆ ಎಂದು ಭ್ರಮಿಸಬಾರದು. ಆತ್ಮಸ್ವರೂಪವನ್ನು ನಾವೇ ನೇರಾಗಿ ಅನುಭವಿಸುವದೇ ಆತ್ಮಜ್ಞಾನವು, ಆ ಆತ್ಮಜ್ಞಾನವು ಬಂದರೆ ಆತ್ಮವಿಷಯಕ ಮಿಥ್ಯಾಜ್ಞಾನವೆಲ್ಲವೂ ಸಂಪೂರ್ಣವಾಗಿ ತೊಲಗುವದು. ''ಜನ್ಮಾದಿಸರ್ವವಿಕ್ರಿಯಾರಹಿತತ್ವೇನ ನಿಷ್ಕ್ರಿಯಮಾತ್ಮಾನಮಾತ್ಮತ್ವೇನ ಯೋ ವೇತ್ತಿ ತಸ್ಯಾಽತ್ಮವಿದಃ ಸಮ್ಯಗ್ದರ್ಶನೇನಾ ಪಾಸ್ತಮಿಥ್ಯಾಜ್ಞಾನಸ್ಯ ನಿಷ್ಕ್ರಿಯಾತ್ಮಸ್ವರೂಪಾವಸ್ಥಾನಲಕ್ಷಣಂ ಸರ್ವಕರ್ಮಸಂನ್ಯಾಸಂ ಮುಕ್ತ್ವಾ'' ಎಂಬ ಭಾಷ್ಯದ ಅರ್ಥವನ್ನು ನಾವು ಈ ಸಂದರ್ಭದಲ್ಲಿ ಮನಸ್ಸಿನಲ್ಲಿ ಚೆನ್ನಾಗಿ ಹೊರಳಾಡಿಸಬೇಕು. ಆತ್ಮನಲ್ಲಿ ಜನ್ಮ, ಮರಣ– ಮುಂತಾದ ಯಾವದೊಂದು ವಿಕಾರವೂ ಇಲ್ಲವೆಂದೂ ಆ ಆತ್ಮನೇ ತಾನೆಂದೂ ಯಾವನು ಅರಿತುಕೊಂಡಿರುತ್ತಾನೋ ಅಂಥ ಆತ್ಮಜ್ಞಾನಿಗೆ ಸಮ್ಯಗ್ಜ್ಞಾನದಿಂದ ಮಿಥ್ಯಾಜ್ಞಾನವು ತೊಲಗಿಹೋಗಿರುವದರಿಂದ ನಿಷ್ಕ್ರಿಯಾತ್ಮಸ್ವರೂಪದಲ್ಲಿಯೇ ನೆಲೆನಿಲ್ಲುವದೆಂಬ ಸರ್ವಕರ್ಮಸಂನ್ಯಾಸವನ್ನು ಹೇಳಿ (ಮಿಕ್ಕವರಿಗೆ ಕರ್ಮಯೋಗವನ್ನು ಭಗವಂತನು ಹೇಳಿರುತ್ತಾನೆ) ಎಂಬುದು ಈ ವಾಕ್ಯದ ಅರ್ಥ.

ನಿಷ್ಕ್ರಿಯಾತ್ಮಸ್ವರೂಪದಲ್ಲಿ ನಿಂತಿರುವದೇ ಸರ್ವಕರ್ಮಸಂನ್ಯಾಸವು. ಓದಿನಲ್ಲಿಯೋ ಕೀರ್ತಿಯಲ್ಲಿಯೋ ಧನದಲ್ಲಿಯೋ ಅಥವಾ ಮತ್ತೆ ಯಾವದಾದರೊಂದು ಲೌಕಿಕಸಂಪತ್ತಿನಲ್ಲಿಯೋ ಆತ್ಮಭಾವದಿಂದಿರುವದಲ್ಲ; ಸೋಮಾರಿತನದಿಂದ ಕೆಲಸವನ್ನು ಬಿಟ್ಟಿರುವದೂ ಅಲ್ಲ. ಯಾರೋ ಇಬ್ಬರು ಸೋಮಾರಿಗಳು ನೆಲದ ಮೇಲೆ ಮಲಗಿಕೊಂಡು ನೇರಳೆಹಣ್ಣು ಗಾಳಿಯ ಹೊಡೆತದಿಂದ ಕಳಚಿಕೊಂಡು ಬಾಯಿಗೆ ಬೀಳಲೆಂದು ಕಾದುಕೊಂಡಿದ್ದರಂತೆ; ಅವರಿಬ್ಬರಲ್ಲಿ ಒಬ್ಬನಿಗೆ 'ಕೆಳಗೆಬಿದ್ದ ಹಣ್ಣನ್ನು ನನ್ನ ಬಾಯಿಗೇಕೆ ಇವನು ಹಾಕುವದಿಲ್ಲ;' ಎಂಬ ಅಸೂಯೆಯು ಮತ್ತೊಬ್ಬನ ವಿಷಯಕ್ಕೆ ಬಂದಿತಂತೆ! ಇಂಥ ಸೋಮಾರಿಗಳನ್ನು ಸರ್ವಕರ್ಮಸಂನ್ಯಾಸಿಗಳಿಗೆ ಹೋಲಿಸುವ ಮೂಢತನವು ಯಾರಿಗೆತಾನೆ

ಇದ್ದೀತು? ಸರ್ವಕರ್ಮಸಂನ್ಯಾಸವು ನಿಷ್ಕ್ರಿಯಾತ್ಮಜ್ಞಾನದಿಂದ ಪ್ರಾಪ್ತವಾಗ ತಕ್ಕದ್ದು, ದೇಹಾದಿಗಳ ವೇಷದಿಂದ ಪಡೆಯತಕ್ಕದ್ದಲ್ಲ ಎಂಬುದನ್ನು ನಾವು ನೆನಪಿಟ್ಟುಕೊಂಡರೆ ಗೀತೆಯು ಕರ್ಮಯೋಗ, ಕರ್ಮಸಂನ್ಯಾಸ- ಇವೆರಡನ್ನೂ ಜ್ಞಾನಿಗೆ ಹೇಳಿದೆ ಎಂಬ ಮೋಹವು ದೂರ ಸರಿಯುವದು.

*****

## 6. ಆಶ್ರಮಸಂನ್ಯಾಸವೂ ಕರ್ಮಯೋಗವೂ

ಕರ್ಮವು ಆತ್ಮಜ್ಞಾನಕ್ಕೆ ಸಾಧನವೆಂಬುದನ್ನು ತಿಳಿಸಿದ್ದಾಗಿದೆ. ಆತ್ಮಜ್ಞಾನದ ಸ್ವರೂಪವನ್ನೂ ಅದರಿಂದ ಫಲಿಸುವ ಸರ್ವಕರ್ಮಸಂನ್ಯಾಸದ ಸ್ವರೂಪವನ್ನೂ ಬಿಡಿಸಿ ಹೇಳಿದ್ದೂ ಆಗಿದೆ. ಆದರೂ ಕರ್ಮ, ಕರ್ಮಸಂನ್ಯಾಸ- ಎಂಬ ಶಬ್ದಗಳು ಗೀತೆಯಲ್ಲಿ ಮತ್ತೆ ಮತ್ತೆ ಬರುತ್ತಲೇ ಇರುವದರಿಂದ ಆ ಶಬ್ದಗಳನ್ನು ಇನ್ನಷ್ಟು ವಿಚಾರಮಾಡಿ ತಿಳಿಯುವದು ಅವಶ್ಯವಾಗಿದೆ.

ಕರ್ಮವು ಯಾವದು, ಅಕರ್ಮವು ಯಾವದು? – ಎಂಬುದು ಅನೇಕರಿಗೆ ನಿಜವಾಗಿ ತಿಳಿದಿರುವದಿಲ್ಲ. ಕರ್ಮವನ್ನೇ ಅಕರ್ಮವೆಂದೂ ಅಕರ್ಮವನ್ನೇ ಕರ್ಮವೆಂದೂ ಬಹುಜನರು ತಿಳಿದುಕೊಂಡು ಬಿಟ್ಟಿರುತ್ತಾರೆ. ಆ ತಪ್ಪುತಿಳಿವಳಿಕೆಯನ್ನು ಹೋಗಲಾಡಿಸುವದಕ್ಕಾಗಿ ಭಗವಂತನು ''ಕರ್ಮಣ್ಯ ಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ । ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನಕರ್ಮಕೃತ್ ॥'' ಎಂದು ಹೇಳಿರುತ್ತಾನೆ. ಈ ಶ್ಲೋಕವನ್ನು ಒಮ್ಮೆ ಆಗಲೆ ಉದಾಹರಿಸಿದ್ದಾಗಿದೆ. ಕರ್ಮದಲ್ಲಿ ಅಕರ್ಮವನ್ನು ಕಂಡುಕೊಳ್ಳುವವನೂ ಅಕರ್ಮದಲ್ಲಿ ಕರ್ಮವನ್ನು ಕಂಡುಕೊಳ್ಳುವವನೂ ಬುದ್ಧಿವಂತನು, ಅವನೇ ಸರ್ವಕರ್ಮವನ್ನೂ ಮಾಡಿದವನು – ಎಂಬುದು ಶ್ಲೋಕದ ಅಕ್ಷರಾರ್ಥ. ಕರ್ಮವನ್ನು ಅಕರ್ಮವೆಂದು ತಿಳಿಯುವದು ಹೇಗೆ ಸರಿಯಾದ ತಿಳಿವಳಿಕೆಯಾದೀತು? ಅಥವಾ ಅಕರ್ಮವನ್ನು ಕರ್ಮವೆಂದು ತಿಳಿಯುವದಾದರೂ ಹೇಗೆ ಸರಿಯಾದ ತಿಳಿವಳಿಕೆಯಾದೀತು?– ಎಂದು ಶಂಕೆ ಯುಂಟಾಗುವದು ಸ್ವಾಭಾವಿಕವಾಗಿದೆ. 'ಹುಲ್ಲುಬಣವೆಯ ಬಳಿ ಕೊಳ್ಳಿಯನ್ನು ಹಿಡಿದುಕೊಂಡು ಓಡಾಡುವ ಅವನೇ ನನ್ನ ಮಕ್ಕಳಲ್ಲೆಲ್ಲ ಬುದ್ಧಿವಂತ!' ಎಂದು ಒಬ್ಬನು ಹೇಳಿದನಂತೆ! ಇದೂ ಅಷ್ಟೇ ಅವಿವೇಕದ ಮಾತೇ ಎಂದು ನಮಗೆ ತಟ್ಟನೆ

ತೋರುವ ಸಂಭವವಿದೆ. ಆದರೂ ಶ್ಲೋಕದಲ್ಲಿ ಒಂದು ತತ್ತ್ವಾರ್ಥವು ಅಡಗಿರುತ್ತದೆ. ಲೋಕದಲ್ಲಿ ಕರ್ಮದಂತೆ ತೋರುವದು ನಿಜವಾಗಿ ಅಕರ್ಮ ವಾಗಿರಬಹುದು; ಉದಾಹರಣೆಗೆ ನಾವು ಕುಳಿತಿರುವ ರೈಲು ಮುಂದು ಮುಂದಕ್ಕೆ ಹೋಗುತ್ತಿದ್ದರೆ ದಾರಿಯ ಆಕಡೆ ಈಕಡೆ ಇರುವ ಮರಗಳು ಹಿಂದುಹಿಂದಕ್ಕೆ ಹೋಗುತ್ತಿರುವಂತೆ ಕಾಣುತ್ತಿರುವದು ನಮ್ಮೆಲ್ಲರ ಅನುಭವ ದಲ್ಲಿದೆ. ಇದರಂತೆ ಕರ್ಮವೂ ಅಕರ್ಮದಂತೆ ತೋರಬಹುದು. ಉದಾಹರಣೆಗೆ ಎರಡು ರೈಲುಗಳು ಒಂದೇ ವೇಗದಲ್ಲಿ ಓಡುತ್ತಿದ್ದರೆ ರೈಲಿನಲ್ಲಿರುವವರಿಗೆ ಅವೆರಡೂ ನಿಂತಿರುವಂತೆಯೇ ಭಾಸವಾಗಿಬಿಡಬಹುದು. ಆದ್ದರಿಂದ ಪ್ರಕೃತದಲ್ಲಿ ಜನರು ಕರ್ಮವನ್ನು ಅಕರ್ಮವೆಂದೂ ಅಕರ್ಮ ವನ್ನು ಕರ್ಮವೆಂದೂ ತಪ್ಪಾಗಿ ತಿಳಿದುಕೊಂಡಿರುತ್ತಾರೆಂಬುದನ್ನು ತಿಳಿಸುವದಕ್ಕೆ ಈ ಶ್ಲೋಕವು ಬಂದಿದೆ. ಇದನ್ನು ಈಗ ಸ್ವಲ್ಪ ಬಿಡಿಸಿ ತಿಳಿದುಕೊಳ್ಳುವದಕ್ಕೆ ಯತ್ನಿಸೋಣ.

ನಮ್ಮಲ್ಲಿ ಅನೇಕರು ಎಲ್ಲಾ ಕೆಲಸವನ್ನೂ ಬಿಟ್ಟುಬಿಟ್ಟರೆ ಅಕರ್ಮ ವಾಯಿತು ಎಂದು ತಿಳಿದುಕೊಂಡಿದ್ದೇವೆ. ಆದರೆ ಕೆಲಸವನ್ನೆಲ್ಲ ಬಿಟ್ಟು ಸುಮ್ಮನೆ ಕೂಡುವದೆಂಬುದೂ ನಮ್ಮ ಕಾರ್ಯಕರಣಸಂಘಾತಕ್ಕೆ ಸೇರಿದ ಒಂದು ಕ್ರಿಯೆಯೇ – ಎಂಬುದು ನಮ್ಮಲ್ಲಿ ಎಲ್ಲಿಯೋ ಕೆಲವರಿಗೆ ಮಾತ್ರ ಹೊಳೆದಿರುತ್ತದೆ. ಇಂದ್ರಿಯಗಳನ್ನುಪಯೋಗಿಸಿಕೊಂಡು ಕೆಲಸಮಾಡುವದು ಹೇಗೆ ಕರ್ಮವೆನಿಸುವದೋ, ಹಾಗೆಯೇ ಅವುಗಳ ಎಲ್ಲಾ ವ್ಯಾಪಾರವನ್ನೂ ಬಿಟ್ಟು ಕೂಡುವದೂ ಒಂದು ಕರ್ಮವೇ ಆಗಿರುತ್ತದೆ. ಆದ್ದರಿಂದ ಹೊರಗಿನ ಕರ್ಮಗಳನ್ನು ಬಿಟ್ಟಮಾತ್ರದಿಂದ ಕರ್ಮಸಂನ್ಯಾಸವಾಗಲಾರದು. ಈ ಕಾರಣದಿಂದಲೇ ಶಾಸ್ತ್ರದಲ್ಲಿ ಏಷಣಾತ್ರಯವನ್ನು ಬಿಡುವದೇ ಸಂನ್ಯಾಸ ವೆಂದು ತಿಳಿಸಿರುತ್ತದೆ. ಈ ಲೋಕ, ಪಿತೃಲೋಕ, ದೇವಲೋಕ– ಎಂಬ ಮೂರು ಲೋಕಗಳಲ್ಲಿ ಯಾವದಾದರೊಂದನ್ನು ಪಡೆದುಕೊಳ್ಳಬೇಕೆಂಬ ಆಶೆಗೆ ಏಷಣೆ ಎಂದು ಹೆಸರು. ಈ ಮೂರನ್ನೂ ಆತ್ಮಜ್ಞಾನದ ಮೂಲಕವಾಗಿ ಸಂಪೂರ್ಣ ವಾಗಿ ಬಿಟ್ಟವರೇ ಕರ್ಮಸಂನ್ಯಾಸಿಗಳು. ಕರ್ಮವೆಂದರೇನು? ಕಾರ್ಯಕರಣ ಗಳ ವ್ಯಾಪಾರವು. ಸರಿಯಾಗಿ ವಿಚಾರಮಾಡಿನೋಡಿದರೆ ಈ ವ್ಯಾಪಾರವು ದೃಶ್ಯವಾದ ಕಾರ್ಯಕರಣಗಳಲ್ಲಿರುವದರಿಂದ ಇವುಗಳನ್ನು ಸಾಕ್ಷಿಯಾಗಿ

ನೋಡುತ್ತಿರುವ ಆತ್ಮನಲ್ಲಿ ಯಾವ ಕರ್ಮವೂ ಇರುವದಿಲ್ಲ. ಇದನ್ನು ಅರಿತುಕೊಂಡಿರುವವನು ಯಾವ ಕರ್ಮವನ್ನು ಮಾಡಿದಂತೆ ತೋರಿದರೂ ನಿಜವಾಗಿ ಅವನು ತನ್ನ ದೃಷ್ಟಿಯಿಂದ ಅಕರ್ಮಿಯೇ ಆಗಿರುತ್ತಾನೆ. ಆದರೆ ಈ ಜ್ಞಾನವಿಲ್ಲದೆ ಹೊರಗಿನ ಕೆಲವು ಕರ್ಮಗಳನ್ನು ಬಿಟ್ಟಮಾತ್ರದಿಂದ ಏಷಣೆಗಳು ನಮ್ಮನ್ನು ಬಿಡುವದಿಲ್ಲ. ನಾವು ಯಾವ ಕರ್ಮವನ್ನು ಮಾಡಲಿ, ಮಾಡದೆ ಇರಲಿ, ಹಿಂದಿನ ಕರ್ಮವನ್ನು ಮಾಡಿದ ವಾಸನೆಯೇ ನಮ್ಮನ್ನು ಕೆಲಸದಲ್ಲಿ ನೂಕಿಬಿಡುತ್ತದೆ. ಆದ್ದರಿಂದ ಸುಮ್ಮನಿರುವದೂ ಈ ಸಂದರ್ಭದಲ್ಲಿ ಕರ್ಮವೇ ಆಯಿತು. ಒಬ್ಬ ಸಂನ್ಯಾಸಿಯು ಪೂರ್ವಾಶ್ರಮದಲ್ಲಿ ಬೆಸ್ತರೊಡನೆ ವ್ಯವಹರಿಸುತ್ತಿದ್ದನಂತೆ. ಅವನಿಗೆ ದಾರಿಯಲ್ಲಿ ಮೀನುಹಿಡಿಯುತ್ತಿದ್ದ ಹುಡುಗರನ್ನು ಕಾಣುತ್ತಲೂ ಅದು ನೆನಪಿಗೆ ಬಂತು. ಕೆಲವರು ಹುಡುಗರು ಒಂದು ಆಮೆಯನ್ನು ಚೆಚ್ಚುತ್ತಿದ್ದರು. ಸಂನ್ಯಾಸಿಯು 'ಹೂಂ, ನಮಗೇಕೆ ಇದೆಲ್ಲ? ನಾವು ಸಂನ್ಯಾಸಿಗಳು!' ಎಂದು ಸ್ವಲ್ಪ ಮುಂದಕ್ಕೆ ಹೋದನಂತೆ. ಆದರೆ ಅವನ ಹಿಂದಿನ ಕರ್ಮವಾಸನೆಯು ಅವನನ್ನು ಸುಮ್ಮನಿರಗೊಡಲಿಲ್ಲ. 'ಹೀಗೇನೆ, ಆಮೆಯನ್ನು ಹೊಡೆಯುವದು?, ಅದನ್ನು ತಿರುಗಿಸಿ ಹೊಡೆದರೆ ತಾನೇ ಬಿಟ್ಟುಕೊಳ್ಳುತ್ತದೆ,' ಎಂದನಂತೆ! ಹೀಗಿರುತ್ತದೆ ಕರ್ಮದ ವಾಸನೆ! ಸೋಮಾರಿಗಳೂ ಜ್ಞಾನಿಗಳೂ ನಮಗೆ 'ಈಗಲೂ ಕರ್ಮವಿಲ್ಲ, ಹಿಂದೆಯೂ ಇರಲಿಲ್ಲ, ಮುಂದೆಯೂ ಇರುವದಿಲ್ಲ' ಎಂದುಕೊಂಡಿರುತ್ತಾರೆ. ಆದರೆ ಸೋಮಾರಿಗಳಿಗೆ ಕರ್ಮವಾಸನೆಯಿದೆಯಾದ್ದರಿಂದ ಅವರು ಹೇಗಿದ್ದರೂ ಕರ್ಮಿಗಳೇ. ಜ್ಞಾನಿಗಳು ನೋಡುವದಕ್ಕೆ ಯಾವ ಕರ್ಮವನ್ನು ಮಾಡಿದರೂ ಅವರು ಕರ್ಮಸಂನ್ಯಾಸಿಗಳೇ!

ಜ್ಞಾನಿಗಳಿಗೆ ಹೀಗೆ ಜ್ಞಾನದ ಬಲದಿಂದಲೇ ಸರ್ವಕರ್ಮಸಂನ್ಯಾಸವು ಪ್ರಾಪ್ತವಾಗಿರುತ್ತದೆ. ಆದ್ದರಿಂದ ಆ ಸಂನ್ಯಾಸದ ಜೊತೆಗೆ ಕರ್ಮವೂ ಇದೆಯೆಂಬುದು ಅರ್ಥವಿಲ್ಲದ ಮಾತು. ಆದ್ದರಿಂದ ಜ್ಞಾನಿಯಾದವನು ಕರ್ಮವನ್ನು ಮಾಡಬೇಕೊ, ಕರ್ಮಸಂನ್ಯಾಸವನ್ನು ಮಾಡಬೇಕೊ?– ಎಂಬ ಮಾತಿಗೆ ಅರ್ಥವಿಲ್ಲವೆಂದಾಯಿತು. ಹಾಗಾದರೆ 'ತಯೋಸ್ತು ಕರ್ಮಸಂನ್ಯಾಸಾತ್ ಕರ್ಮಯೋಗೋ ವಿಶಿಷ್ಯತೇ' (5–2) ಎಂಬ ವಾಕ್ಯಕ್ಕೆ ಅರ್ಥವೇನು?– ಎಂಬ ಪ್ರಶ್ನೆಯು ಈಗ ಎದ್ದುಕೊಳ್ಳುವದಷ್ಟೆ? ಇದಕ್ಕೆ

ಆಚಾರ್ಯರು ಹೇಳಿರುವ ಉತ್ತರವಿದು:

ಜ್ಞಾನಿಗೆ ಮೇಲೆ ಹೇಳಿದ ಪ್ರಕಾರದಿಂದ ಕರ್ಮದ ಸೋಂಕೇ ಇರುವದಿಲ್ಲ. ಏಕೆಂದರೆ 'ನಿಷ್ಕರ್ಮನಾದ ಆತ್ಮನೇ ನಾನು' ಎಂಬುದೇ ಅವನ ಗ್ರಹಿಕೆಯಾಗಿರುತ್ತದೆ. ಆದ್ದರಿಂದ ಈ ಆತ್ಮಜ್ಞಾನವಿಲ್ಲದವನಿಗೇ ಈ ಎರಡನ್ನೂ ಹೇಳಿದೆ ಎಂದಾಯಿತು. "ತಸ್ಮಾದನಾತ್ಮವಿತ್ಕರ್ತೃಕಯೋರೇವ ಸಂನ್ಯಾಸ ಕರ್ಮಯೋಗಯೋಃ ನಿಃಶ್ರೇಯಸಕರತ್ವವಚನಂ ತದೀಯಾಚ್ಚ ಕರ್ಮಸಂನ್ಯಾಸಾತ್ ಪೂರ್ವೋಕ್ತಾತ್ಮವಿತ್ಕರ್ತೃಕಸರ್ವಕರ್ಮಸಂನ್ಯಾಸ ವಿಲಕ್ಷಣಾತ್ ಸತ್ಯೇವ ಕರ್ತೃತ್ವವಿಜ್ಞಾನೇ ಕರ್ಮೈಕದೇಶವಿಷಯಾದ್ ಯಮನಿಯಮಾದಿಸಹಿತತ್ವೇನ ಚ ದುರನುಷ್ಠೇಯತ್ವಾತ್ ಸುಕರತ್ವೇನ ಚ ಕರ್ಮಯೋಗಸ್ಯ ವಿಶಿಷ್ಟತ್ವಾಭಿಧಾನಮ್" ಆಚಾರ್ಯರು ಹೇಳಿರುವ ಸರ್ವಕರ್ಮಸಂನ್ಯಾಸವು ಜ್ಞಾನಿಗೆ ತಾನೇ ಉಂಟಾಗತಕ್ಕದ್ದೆಂದು ಆಗಲೆ ಹೇಳಿದ್ದಾಗಿದೆ. ಆದರೆ ಐದನೆಯ ಅಧ್ಯಾಯದಲ್ಲಿ ಹೇಳಿರುವದು ಈ ಸಂನ್ಯಾಸವನ್ನಲ್ಲ. ಹಿಂದಿನ ಅಧ್ಯಾಯಗಳಲ್ಲಿ ಕರ್ಮಸಂನ್ಯಾಸವನ್ನು ಬಹಳವಾಗಿ ಹೊಗಳಿದ್ದರಿಂದ ಅದನ್ನು ಆತ್ಮಜ್ಞಾನಿಯಲ್ಲದವನೂ ಮಾಡಬಹುದೆಂದು ಏರ್ಪಡು ತ್ತದೆಯಷ್ಟೆ? ಆದ್ದರಿಂದ ಅರ್ಜುನನು ಆತ್ಮಜ್ಞಾನಿಯಲ್ಲದವನು ಕರ್ಮಸಂನ್ಯಾಸವನ್ನು ಮಾಡುವದು ಒಳ್ಳೆಯದೊ, ಕರ್ಮಯೋಗವನ್ನು ಮಾಡುವದು ಒಳ್ಳೆಯದೊ?– ಎಂದು ಕೇಳಿರುತ್ತಾನೆ. ಭಗವಂತನು ಅದಕ್ಕನುಗುಣವಾಗಿಯೇ ಉತ್ತರವನ್ನು ಕೊಟ್ಟಿರುತ್ತಾನೆ. ಕರ್ಮಸಂನ್ಯಾಸ, ಕರ್ಮಯೋಗ– ಈ ಎರಡೂ ಸರಿಯಾಗಿ ಮಾಡಿದರೆ ಮೋಕ್ಷಕ್ಕೆ ಕಾರಣವೇ ಆಗುತ್ತವೆ. ಆದರೆ ಆತ್ಮಜ್ಞಾನವಿಲ್ಲದವನು ಸರ್ವಕರ್ಮಸಂನ್ಯಾಸವನ್ನು ಮಾಡುವದಕ್ಕೆ ಆಗುವದಿಲ್ಲ; ಏಕೆಂದರೆ ಅವನಿಗೆ ಇನ್ನೂ ಕರ್ತೃತ್ವಬುದ್ಧಿಯಿರುತ್ತದೆ. ಅವನು ಗೃಹಸ್ಥನು ಮಾಡಬೇಕಾದ ಕರ್ಮಗಳನ್ನು ಮಾತ್ರ ಬಿಟ್ಟು ಯಮನಿಯಮಾದಿಗಳನ್ನು ಅನುಸರಿಸಿ ಶ್ರವಣಮನನ ನಿದಿಧ್ಯಾಸನಗಳನ್ನು ಮಾಡಿ ಆತ್ಮಜ್ಞಾನವನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಈ ಸಾಧನಗಳನ್ನು ಎಲ್ಲರೂ ಮಾಡುವದು ಶಕ್ಯವಿಲ್ಲವಾದ್ದರಿಂದ ಕರ್ಮಯೋಗವನ್ನು ಮಾಡುವದೇ ಒಳ್ಳೆಯದು ಎಂಬುದು ಶ್ರೀಕೃಷ್ಣನ ಉತ್ತರವು.

ಸಂನ್ಯಾಸವು ಹೆಚ್ಚೊ, ಕರ್ಮಯೋಗವು ಹೆಚ್ಚೊ?– ಎಂಬುದು ಪ್ರಕೃತ ಪ್ರಶ್ನೆಯ ಉದ್ದೇಶವಲ್ಲವೆಂಬುದನ್ನು ನಾವು ನೆನಪಿನಲ್ಲಿಡಬೇಕು.

ಶ್ರೇಯಸ್ಸಿಗೆ ಯಾವದು ಕಾರಣವೋ ಅದನ್ನು ತಾನು ಮಾಡಬೇಕೆಂದು ಅರ್ಜುನನು ಸಂಕಲ್ಪಿಸಿರುತ್ತಾನೆ. ಭಗವಂತನು ಈ ಎರಡೂ ನಿಃಶ್ರೇಯಸಕ್ಕೆ ಕಾರಣವೇ ಆದರೂ ಕರ್ಮಯೋಗದಲ್ಲಿ ಒಂದು ವಿಶೇಷವಿದೆ ಎಂದು ಅದನ್ನು ಹೊಗಳಿರುವದರಿಂದ ಇದೇ ನಿನಗೆ ಸುಕರವು ಎಂದು ಅರ್ಜುನನಿಗೆ ತಿಳಿಸಿಕೊಟ್ಟಂತೆ ಆಗಿರುತ್ತದೆ.

ಜ್ಞೇಯಃ ಸ ನಿತ್ಯಸಂನ್ಯಾಸೀ ಯೋ ನ ದ್ವೇಷ್ಟಿ ನ ಕಾಂಕ್ಷತಿ ।
ನಿರ್ದ್ವಂದ್ವೋ ಹಿ ಮಹಾಬಾಹೋ ಸುಖಂ ಬನ್ಧಾತ್ ಪ್ರಮುಚ್ಯತೇ ॥ (5-3)

"ಅರ್ಜುನನೆ, ಯಾವನು ಯಾವದೊಂದನ್ನೂ ದ್ವೇಷಿಸುವದಿಲ್ಲವೋ ಯಾವದೊಂದನ್ನೂ ಬಯಸುವದಿಲ್ಲವೋ ಅವನು ಕರ್ಮದಲ್ಲಿದ್ದರೂ ನಿತ್ಯ ಸಂನ್ಯಾಸಿಯು; ಏಕೆಂದರೆ ಅವನು ದ್ವಂದ್ವಗಳನ್ನು ಸುಲಭವಾಗಿ ಮೀರಿ ಬಂಧದಿಂದ ಬಿಡುಗಡೆಯನ್ನು ಹೊಂದುತ್ತಾನೆ" ಎಂದು ಕರ್ಮಯೋಗವನ್ನು ಭಗವಂತನು ಹೊಗಳಿರುವದನ್ನು ನಾವು ಲಕ್ಷಿಸಬೇಕು. ಇಲ್ಲಿ ಸಂನ್ಯಾಸವನ್ನು ನಿಂದಿಸಿಲ್ಲ; ಕರ್ಮಯೋಗಿಯನ್ನು ಸಂನ್ಯಾಸಿಯೆಂದು ಹೊಗಳಿರುವದರಿಂದ ಸಂನ್ಯಾಸವು ಹೆಚ್ಚಿನ ಸಾಧನವೇ ಸರಿ ಎಂದು ಒಪ್ಪಿಕೊಂಡಂತೆಯೂ ಆಗಿದೆ. ಆದರೆ ಪ್ರಕೃತವಾಗಿರುವದು ಮುಖ್ಯಸಂನ್ಯಾಸವಲ್ಲ, ಗೌಣಸಂನ್ಯಾಸ. ಅದರಲ್ಲಿ ಕರ್ತೃತ್ವಬುದ್ಧಿಯು ಹೋಗಿರುವದಿಲ್ಲ; ಆದ್ದರಿಂದ ಗೃಹಸ್ಥಾಶ್ರಮದ ಕರ್ಮಗಳನ್ನು ಬಿಟ್ಟು ಜ್ಞಾನಕ್ಕಾಗಿ ಶ್ರವಣಾದಿಗಳನ್ನು ಮಾಡಬೇಕಾಗಿರುತ್ತದೆ. ಯಾರಿಗೆ ಮನಇಂದ್ರಿಯಗಳ ಸಂಯಮವನ್ನು ಮಾಡಿಕೊಳ್ಳುವ ಸ್ಥೈರ್ಯ ವಿರುವದಿಲ್ಲವೋ ಯಾರಿಗೆ ಆತ್ಮವಿಚಾರವನ್ನು ಮಾಡುವ ಅಂತರ್ಮುಖತ್ವವೂ ದೊರಕಿಲ್ಲವೋ ಅಂಥವರು ಈ ಆಶ್ರಮಸಂನ್ಯಾಸವನ್ನು ಮಾಡುವದಕ್ಕಿಂತ ಕರ್ಮಯೋಗವನ್ನು ಮಾಡುವದೇ ಲೇಸು. ಏಕೆಂದರೆ ಅದರಿಂದ ಸುಲಭವಾಗಿ ಬಂಧದಿಂದ ಬಿಡುಗಡೆಯಾಗಬಹುದು– ಎಂಬುದು ಭಗವಂತನ ಅಭಿಪ್ರಾಯ.

ಈ ಗುಟ್ಟನ್ನು ಅರಿಯದೆ ಸಂನ್ಯಾಸಾಶ್ರಮವನ್ನು ಆರಿಸಿಕೊಂಡಮಾತ್ರ ದಿಂದಲೇ ತಾವು ಕೃತಾರ್ಥರಾಗುವೆವೆಂದು ಅನೇಕರು ತಿಳಿದುಕೊಂಡಿರು ವಂತಿದೆ. ಸಂನ್ಯಾಸವೆಂದರೆ ಯಾವ ಕಟ್ಟೂ ಇಲ್ಲದೆ ಸ್ವೇಚ್ಛೆಯಿಂದ ನಡೆಯ

ಬಹುದಾದ ಆಶ್ರಮವೆಂದೇ ಅನೇಕರು ತಿಳಿದುಕೊಂಡಿರುವಂತೆ ಕಾಣಿಸುತ್ತಿದೆ. ಕೆಲವರು ರೋಗದಿಂದ ನರಳುತ್ತಿದ್ದರೆ 'ಆತುರಸಂನ್ಯಾಸ'ವನ್ನು ತೆಗೆದುಕೊಳ್ಳುವ ಅಧಿಕಾರವು ತಮಗೆ ಇದೆಯೆಂದು ಭಾವಿಸುತ್ತಾರೆ. ಗೃಹಕೃತ್ಯದಲ್ಲಿ ಯಾವದಾದರೂ ಅನಿವಾರ್ಯವಾದ ಕಷ್ಟವು ಬಂದೊದಗಿದರೆ ಆಗಲೂ ಸಂನ್ಯಾಸಕ್ಕೆ ಅರ್ಹತೆಯಿದ್ದಂತೆಯೇ– ಎಂದು ಅನೇಕರ ಭಾವನೆಯಾಗಿರುತ್ತದೆ. ಭಿಕ್ಷಾವಂದನೆ, ಚಾತುರ್ಮಾಸ್ಯ– ಎಂದು ಹೇಳಿಕೊಳ್ಳುತ್ತಾ ಕಾವಿ, ಪಾದುಕೆ, ದಂಡ, ಕಮಂಡಲು– ಇಂಥವುಗಳ ವೇಷಮಾತ್ರವೇ ಸಂನ್ಯಾಸವೆಂದು ಭಾವಿಸುವವರೂ ಹಲವು ಜನರಿರುತ್ತಾರೆ. ಇನ್ನು ಕೆಲವರು ರಾಜಕೀಯ ಚಳುವಳಿಗಳಲ್ಲಿ ಮುಖ್ಯಪಾತ್ರವನ್ನು ವಹಿಸುವದೂ ತಮ್ಮ ಆಶ್ರಮಕ್ಕೆ ಒಪ್ಪುವ ಕರ್ಮವೆಂದು ಎಣಿಸಿರುತ್ತಾರೆ! ಯಮನಿಯಮಾದಿಗಳನ್ನು ಅನುಷ್ಠಾನ ಮಾಡುತ್ತಾ ಶ್ರವಣಮನನಾದಿಗಳಿಂದ ಜ್ಞಾನಸಂಪಾದನೆಗೆ ಪ್ರಯತ್ನಿಸುವ ಇಚ್ಛೆಯಿರುವವರು ಮಾತ್ರ ಈ ಆಶ್ರಮ ಸಂನ್ಯಾಸವನ್ನು ಸ್ವೀಕರಿಸಬೇಕೇ ಹೊರತು ಮಿಕ್ಕವರು ಎಂದಿಗೂ ಇದಕ್ಕೆ ಕೈಹಾಕಬಾರದು.

ಆದರೆ ಆತ್ಮಜ್ಞಾನವು ಬೇಕಾದರೆ ಈ ಸಂನ್ಯಾಸವನ್ನು ಆರಿಸಿಕೊಳ್ಳಲೇಬೇಕೆ? ಇದಿಲ್ಲದಿದ್ದರೆ ಆಗುವದೇ ಇಲ್ಲವೆ? ಹಾಗೆಂದು ಗೀತೆಯಲ್ಲಿ ಎಲ್ಲಿಯೂ ಹೇಳಿಲ್ಲಷಿ. 'ಕರ್ಮಯೋಗೋ ವಿಶಿಷ್ಯತೇ' ಎಂಬ ಮಾತನ್ನು ಈ ಪ್ರಶ್ನೆಗೆ ಉತ್ತರವಾಗಿಯೇ ಹೇಳಿರುತ್ತದೆ. ಕರ್ಮವನ್ನು ಈಶ್ವರಾರ್ಪಣ ಬುದ್ಧಿಯಿಂದ ಮಾಡುತ್ತಲೇ ಇದ್ದು ಜ್ಞಾನಕ್ಕೆ ಅರ್ಹನಾಗಬಹುದು; ಕರ್ಮ ಸಂನ್ಯಾಸವನ್ನು ಮಾಡಿ ಶ್ರವಣಾದಿಗಳಿಂದಲೂ ಆ ಅರ್ಹತೆಯನ್ನು ಪಡೆದುಕೊಳ್ಳಬಹುದು. ನಿಜವಾಗಿ ನೋಡಿದರೆ ಬಹುಜನರಿಗೆ ಕರ್ಮಯೋಗವೇ ಹೆಚ್ಚು ಸುಖಕರವಾಗಿರುತ್ತದೆ. ಆದ್ದರಿಂದಲೇ ಇದನ್ನು 'ವಿಶಿಷ್ಯತೇ' ಎಂದು ಹೊಗಳಿರುತ್ತದೆ. ಅನೇಕರು ಕಲಿಯುಗದಲ್ಲಿ ಕರ್ಮವು ನಡೆಯುವದಿಲ್ಲ ಎನ್ನುತ್ತಾರೆ. ಕರ್ಮಸಂನ್ಯಾಸವು ಮಾತ್ರ ನಡೆಯುತ್ತದೆಯೆ? – ಎಂದು ಅಂಥವರನ್ನು ಕೇಳಬೇಕು! ಈಚೆಗೆ 'ವೇದಾಂತಿ'ಗಳೆನ್ನುವವರು ಹೆಚ್ಚಿಕೊಂಡು ಸಂಧ್ಯಾದಿ ಕರ್ಮಗಳನ್ನು ಕೂಡ ಮನಸ್ಸಿಗೆ ಬಂದಂತೆ ನಿಂದಿಸುತ್ತಿದ್ದಾರೆ. ಇದು ಸರ್ವಥಾ ಸರಿಯಲ್ಲ, ಏಕೆಂದರೆ ವೇದೋಕ್ತಕರ್ಮಗಳನ್ನು ನಿಂದಿಸುವವರು ವೇದಾಂತಿಗಳೂ ಅಲ್ಲ, ವೈದಿಕರೂ ಅಲ್ಲ. ಅಂಥ ಕರ್ಮನಿಂದಕರ ವಚನವನ್ನು

ಆಲಿಸುವದರಿಂದ ಮುಮುಕ್ಷುಗಳಿಗೆ ಎಂದಿಗೂ ಹಿತವಾಗಲಾರದು. ಶಾಸ್ತ್ರೋಕ್ತ ಕರ್ಮವನ್ನು ಪರಮೇಶ್ವರಪ್ರೀತ್ಯರ್ಥವಾಗಿ ಮಾಡುತ್ತಾ ಚಿತ್ತಶುದ್ಧಿಯನ್ನು ಸಂಪಾದಿಸಿಕೊಂಡು ತತ್ತ್ವವಿಚಾರವನ್ನು ಮಾಡಬೇಕು. ಹಾಗಾದರೆ ಕಾಲಾನುಕಾಲಕ್ಕೆ ವಿರಕ್ತಿಯುಂಟಾಗಿ ನಮಗೆ ಅಂತರಂಗ ಸಾಧನೆಯಲ್ಲಿಯೂ ಪ್ರವೇಶವು ದೊರಕೀತು.

* * * * *

## 7. ಲೋಕಸಂಗ್ರಹಾರ್ಥಕರ್ಮ

ಸಂನ್ಯಾಸ, ಕರ್ಮಯೋಗ – ಈ ಎರಡರಲ್ಲಿ ಮೋಕ್ಷಕ್ಕೆ ಕಾರಣವಾದದ್ದು ಯಾವದು?– ಎಂದು ಅರ್ಜುನನು ಕೇಳಿದ್ದಕ್ಕೆ ಇವೆರಡೂ ಮೋಕ್ಷಕ್ಕೆ ಕಾರಣವೇ ಎಂದು ಭಗವಂತನು ಉತ್ತರವನ್ನು ಕೊಟ್ಟಿರುತ್ತಾನೆ. ಯಾವನಿಗೆ ಸಾಂಖ್ಯಬುದ್ಧಿಗೆ ಗೋಚರಿಸುವ ಪರಮಾತ್ಮಸ್ವರೂಪದ ಅರಿವು ಆಗಿಬಿಟ್ಟಿರುತ್ತದೆಯೋ ಅವನು ನಿತ್ಯನಿಷ್ಕ್ರಿಯಾತ್ಮಸ್ವರೂಪದಲ್ಲಿರುವದೆಂಬ ಪರಮಾರ್ಥ ಸಂನ್ಯಾಸದಲ್ಲಿಯೇ ಇರುವದರಿಂದ ಅವನ ವಿಷಯಕ್ಕೆ ಈ ಪ್ರಶ್ನೆಯು ಹೊಂದುವದಿಲ್ಲ. ಈ ವಿದ್ವತ್ಸಂನ್ಯಾಸವು ದೊರಕುವದಕ್ಕಿಂತ ಮುಂಚೆ ಕರ್ತೃತ್ವಬುದ್ಧಿಯು ಇರುವಾಗಲೇ ಕರ್ಮಫಲಗಳಲ್ಲಿ ವಿರಕ್ತಿಯುಂಟಾದದ್ದರಿಂದ ಗಾರ್ಹಸ್ಥ್ಯಕರ್ಮಗಳನ್ನು ಪರಿತ್ಯಜಿಸಿ ಜ್ಞಾನಕ್ಕೆ ಬೇಕಾದ ಶ್ರವಣಾದಿಗಳನ್ನು ಅಭ್ಯಾಸಮಾಡುವದಕ್ಕಾಗಿ ತೆಗೆದುಕೊಳ್ಳುವ ಪರಮಹಂಸಪಾರಿ ವ್ರಾಜ್ಯಕ್ಕೆ ವಿವಿದಿಷಾಸಂನ್ಯಾಸವೆಂದು ಹೆಸರು. ಶಿಖಾಯಜ್ಞೋಪವೀತಾದಿಗಳುಳ್ಳ ತ್ರಿದಂಡಿಸಂನ್ಯಾಸವೆಂಬ ಸಂನ್ಯಾಸಾಶ್ರಮವೂ ಉಂಟು. ಅದಕ್ಕೆ ಬ್ರಹ್ಮಲೋಕವೇ ಫಲವು. ಆದರೆ ಪ್ರಕೃತದಲ್ಲಿ ಅದರ ವಿಚಾರವೇನೂ ಇಲ್ಲ. ಮುಕ್ತಿಗೆ ಬೇಕಾದ ಕರ್ಮಸಂನ್ಯಾಸವನ್ನು ಕುರಿತೇ ಇಲ್ಲಿ ವಿಚಾರಮಾಡಲಾಗುತ್ತಿದೆ. ಸಂನ್ಯಾಸವೂ ಕರ್ಮಯೋಗವೂ ಎರಡೂ ಸರಿಯಾಗಿ ಅನುಷ್ಠಾನ ಮಾಡುವವರಿಗೆ ಮೋಕ್ಷಕ್ಕೆ ಕಾರಣವೇ ಆಗಿದ್ದರೂ ಸಂನ್ಯಾಸದಲ್ಲಿ ಅಮಾನಿತ್ವಾದಿ ಸಾಧನಗಳನ್ನು ಎಡೆಬಿಡದೆ ಆಚರಿಸುತ್ತಿರಬೇಕಾಗುತ್ತದೆ; ಮನಃಪ್ರಧಾನವಾದ ಈ ಸಾಧನಗಳಿಗೆ ಅವಿರುದ್ಧವಾದ ನಿಯಮಗಳು ಕೆಲವನ್ನೂ ಅನುಸರಿಸಬೇಕಾಗುತ್ತದೆ. ಆದ್ದರಿಂದ ಇದನ್ನು ನಡೆಯಿಸಿಕೊಂಡುಹೋಗುವದೂ ಎಲ್ಲರಿಗೂ ಸುಕರವಲ್ಲ. ಈ ಕಾರಣದಿಂದ ಅಂಥವರಿಗೆ ಕರ್ಮಯೋಗವೇ ಈ

ಸಂನ್ಯಾಸಕ್ಕಿಂತಲೂ ಮೇಲು ಎಂದು ಭಗವಂತನು ಹೇಳಿರುತ್ತಾನೆ.

ಕರ್ಮಯೋಗವು ಸುಕರವೆಂದೂ ನಿಃಶ್ರೇಯಸಕ್ಕೆ ಕಾರಣವೆಂದೂ ಹೇಳಿರುವದರಿಂದ ಸಂನ್ಯಾಸವು ಸರ್ವಥಾ ಮಾಡತಕ್ಕದ್ದಲ್ಲವೆಂದು ಯಾರಾದರೂ ಯೋಚಿಸಿ ಕೊಳ್ಳಬಹುದು. ಆದರೆ ಹಾಗೇನೂ ಇಲ್ಲ. ಏಕೆಂದರೆ ಕರ್ಮಯೋಗವೂ ಕರ್ಮ ಸಂನ್ಯಾಸಕ್ಕೇ ಕಾರಣವಾಗಿರುತ್ತದೆ. ಆದ್ದರಿಂದಲೇ ಭಗವಂತನು 'ಸಂನ್ಯಾಸಸ್ತು ಮಹಾಬಾಹೋ ದುಃಖಮಾಪ್ತುಮಯೋಗತಃ' ಅರ್ಜುನನೆ, ಕರ್ಮಯೋಗವಿಲ್ಲದೆ ಸಂನ್ಯಾಸವನ್ನು ಪಡೆದುಕೊಳ್ಳುವದು ಕಷ್ಟ; ಯೋಗದಿಂದ ಕ್ರಮಕ್ರಮವಾಗಿ ಸಂನ್ಯಾಸವನ್ನು ಪಡೆದುಕೊಳ್ಳಲೂ ಬಹುದು – ಎಂದು ಹೇಳಿರುತ್ತಾನೆ. ಸಂನ್ಯಾಸವನ್ನು ಯಾವಾಗ ತೆಗೆದು ಕೊಳ್ಳಬೇಕು? ಎಂಧರೆ ಯಾವಾಗ ವೈರಾಗ್ಯವುಂಟಾಗುವದೋ ಆಗ ಕರ್ಮತ್ಯಾಗವನ್ನು ಮಾಡಬೇಕು. 'ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್' ಯಾವ ದಿನ ಕರ್ಮಫಲಭೋಗದಲ್ಲಿ ವಿರಕ್ತಿಯುಂಟಾಗುವದೋ ಆ ದಿನವೇ ಪ್ರವ್ರಜ್ಯೆಯನ್ನು ಹೊಂದಬೇಕು– ಎಂದು ಶ್ರುತಿ ಹೇಳುತ್ತದೆ. ವೈರಾಗ್ಯವೆಂದರೆ ಯಾವದಾದರೂ ಕಷ್ಟದಿಂದ ಬೇಸರವುಂಟಾಗುವದು ಎಂದರ್ಥವಲ್ಲ. ಸರಿಯಾಗಿ ವಿಚಾರಮಾಡಿದ ಬಳಿಕ ಕರ್ಮಫಲಗಳ ಭೋಗದಲ್ಲಿ ಉಂಟಾಗುವ ವೈರಾಗ್ಯವೇ ನಿಜವಾದ ವೈರಾಗ್ಯವು. ಈ ಸಂದರ್ಭ ದಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಹೇಳಿರುವ ಒಂದು ಚಿಕ್ಕ ಕಥೆಯು ನೆನಪಿಗೆ ಬರುತ್ತಿದೆ. ''ಒಮ್ಮೆ ಗಂಡಹೆಂಡಿರಿಬ್ಬರು ಮಲಗುವ ಕೋಣೆಯಲ್ಲಿ ದ್ದಾಗ ಏಕಾಂತದಲ್ಲಿ ಮಾತನಾಡುತ್ತಿದ್ದರಂತೆ. ಹೆಂಡತಿಯು 'ನನ್ನ ತಮ್ಮನು ಈಚೆಗೆ ವಿರಕ್ತನಾಗಿ ಒಂದೊಂದು ಪದಾರ್ಥವನ್ನು ಬಿಡುತ್ತಲೇ ಬಂದಿದ್ದಾನೆ. ಅವನೆಲ್ಲಿ ಸಂನ್ಯಾಸಿಯಾಗಿಬಿಡುವನೋ ಎಂದು ನನಗೆ ಅಂಜಿಕೆಯಾಗಿದೆ– ಎಂದಳಂತೆ. ಆಗ ಗಂಡನು 'ಛೀ' ಸಂನ್ಯಾಸಿಯಾಗುವವರು ಹೀಗಲ್ಲ ವಿರಕ್ತರಾಗುವದು; ನೀನೇನೂ ನಿನ್ನ ತಮ್ಮನ ವಿಷಯಕ್ಕೆ ಅಂಜದಿರು, ಅವನು ಸಂನ್ಯಾಸಿಯಾಗುವದಿಲ್ಲ' ಎಂದನಂತೆ. ಆಗ ಹೆಂಡತಿಯು 'ಹಾಗಾದರೆ, ಸಂನ್ಯಾಸಕ್ಕೆ ಸಿದ್ಧರಾಗಿರುವವರು ಹೇಗಿರುತ್ತಾರೆ? ಅವರು ಇನ್ನು ಮನೆಯಿಂದ ಹೊರಟುಹೋಗುವರೆಂದು ಹೇಗೆ ತಿಳಿದುಕೊಳ್ಳಬೇಕು?' ಎಂದು ಕುತೂಹಲ ದಿಂದ ಕೇಳಿದಳಂತೆ. ಆಗ ಗಂಡನು 'ಸಂಸಾರವನ್ನು ಪರಿತ್ಯಾಗಮಾಡು ವವರು,

ಇಗೊ ಹೀಗೆಮಾಡುತ್ತಾರೆ' ಎಂದು ಕೂಡಲೇ ತಾನೇ ಹಾಸಿಗೆಯಿಂದ ಎದ್ದು ಮನೆಯಿಂದ ಹೊರಕ್ಕೆ ಹೋಗಿಯೇ ಬಿಟ್ಟನಂತೆ!'' ಹೀಗಿರುತ್ತದೆ, ತೀವ್ರವೈರಾಗ್ಯ!

ಪರಮಾರ್ಥಸಂನ್ಯಾಸವು ಬಂದವರಿಗೆ ಮಾಡತಕ್ಕದ್ದು ಯಾವದೂ ಇರುವದಿಲ್ಲ. ಅವರಿಗೆ ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಪಡೆದು ಕೊಳ್ಳತಕ್ಕದ್ದು ಯಾವದೂ ಇರುವದಿಲ್ಲ. ಅದಕ್ಕಾಗಿ ಯಾವ ಶಾಸ್ತ್ರೋಕ್ತಕರ್ಮ ವನ್ನೂ ಅವರು ಮಾಡಬೇಕಾದದ್ದು ಇರುವದಿಲ್ಲ. ಅಂಥ ಜ್ಞಾನವು ಯಾವಾಗ ಬಂದರೆ ಆಗಲೇ ಸಂನ್ಯಾಸಿಗಳಾಗಿಬಿಡುವರು– ಗೃಹಸ್ಥನಾದಮೇಲೆಯೇ ಅದು ಬರಬೇಕೆಂಬ ನಿರ್ಬಂಧವೇನೂ ಇರುವದಿಲ್ಲ– ಮಹಾಪುರುಷರಾದವರಿಗೆ ಬ್ರಹ್ಮಚರ್ಯದಲ್ಲಿಯೇ ಜ್ಞಾನವು ಪ್ರಾಪ್ತವಾಗಿಬಿಡಬಹುದು. ಅಂಥ ಜ್ಞಾನಿಗೆ– ಕರ್ಮದಿಂದಲಾಗಲಿ ಕರ್ಮಸಾಧನದಿಂದಲಾಗಲಿ ಯಾವ ಪ್ರಯೋಜನವೂ ಇಲ್ಲದ್ದರಿಂದ ಅವನು ಎಲ್ಲವನ್ನೂ ಬಿಟ್ಟು ಜ್ಞಾನನಿಷ್ಠನಾಗಿದ್ದು ಕೊಂಡು ಬಿಡುತ್ತಾನೆ.

ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।
ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥ (4-21)

ಜ್ಞಾನಿಯಾದವನಿಗೆ ಯಾವದೊಂದರ ಆಶೆಯೂ ಇರುವದಿಲ್ಲ. ಅವನಿಗೆ ಯಾವದೊಂದರಲ್ಲಿಯೂ ನನ್ನದು ಎಂಬ ಅಭಿಮಾನವು ಇರುವದಿಲ್ಲ. ಸಾಮಾನ್ಯ ಜನರಿಗೆ ಯಾವದಾದರೊಂದರಲ್ಲಿ ನನ್ನದು ಎಂಬ ಅಭಿಮಾನವು ಇದ್ದೇ ಇರುತ್ತದೆ. ಉದಾಹರಣೆಗೆ ಅಂಗಡಿಗೆ ಹೋಗಿ ನಮಗೆ ಬೇಕಾದ ವಸ್ತುವನ್ನು ಕೊಂಡುಕೊಳ್ಳುವವರೆಗೂ ಕೈಯಲ್ಲಿರುವ ಹಣದಲ್ಲಿ ನನ್ನದು ಎಂಬ ಅಭಿಮಾನವಿರುತ್ತದೆ; ಆದರೆ ಪದಾರ್ಥವನ್ನು ಕೊಂಡ ಬಳಿಕ ಆ ಪದಾರ್ಥದಲ್ಲಿ ನನ್ನದು ಎಂಬ ಬುದ್ಧಿ ಬಂದು ಬಿಡುತ್ತದೆ; ಕೈಯ್ಯಲ್ಲಿದ್ದ ಹಣವನ್ನು ಅಂಗಡಿ ಯವನಿಗೆ ಕೊಟ್ಟಮೇಲೆ ಅದರಲ್ಲಿ ನನ್ನದೆಂಬ ಅಭಿಮಾನವು ಹಾರಿಹೋಗಿ ಬಿಡುತ್ತದೆ. ಇದರಂತೆ ಅಂಗಡಿಯವನಿಗೆ ಅಂಗಡಿಯಲ್ಲಿರುವ ಸಾಮಾನುಗಳಲ್ಲಿ ನನ್ನದು ಎಂಬ ಬುದ್ಧಿಯಿರುತ್ತದೆ; ಅವುಗಳನ್ನು ಮಾರಿದ ಮೇಲೆ ಅದು ಕೈಗೆ ಬಂದ ಹಣದ ಮೇಲೆ ಬಂದು ಕೂಡುತ್ತದೆ. ಹೀಗೆ ನನ್ನದು ಎಂಬ ಅಭಿಮಾನವು ಒಂದರಿಂದೊಂದಕ್ಕೆ ಹಾರುತ್ತಲೇ ಇರುತ್ತದೆ. ಇದು ಲೋಕದ ಜನರಿಗೆಲ್ಲ

ಸ್ವಭಾವವಾಗಿಬಿಟ್ಟಿರುತ್ತದೆ. ಎಡ್ವರ್ಡ್‌ಕಾರ್ಪೆಂಟರ್ ಎಂಬಾತನು ಬರೆದಿರುವ "Civilisation Its Cause and Cure" (ನಾಗರಿಕತೆಯೂ ಅದರ ನಿದಾನ (ಮೂಲಕಾರಣ)ವೂ ಚಿಕಿತ್ಸೆಯೂ)- ಎಂಬ ಇಂಗ್ಲಿಷು ಪುಸ್ತಕದಲ್ಲಿ 'ನಾಗರಿಕತೆಯೆಂಬುದೊಂದು ರೋಗ'ವೆಂದೂ ಅದಕ್ಕೆ 'ಮಮತ್ವ (ಇದು ನನ್ನದು ಎಂಬ) ಅಭಿಮಾನವೇ ಕಾರಣ'ವೆಂದೂ ವರ್ಣಿಸಿರುತ್ತಾನೆ. ಅವನು ಕೆಲವು ಜನಾಂಗಗಳವರು ಈ ರೋಗಕ್ಕೆ ಮದ್ದನ್ನು ಕಂಡುಹಿಡಿದು ಕೊಂಡಿದ್ದಾರೆಂದು ವರ್ಣಿಸಿ ಭರತಖಂಡದವರನ್ನು ಅದಕ್ಕೆ ಉದಾಹರಣೆ ಯಾಗಿ ಕೊಟ್ಟಿರುತ್ತಾನೆ. ಭರತಖಂಡದಲ್ಲಿರುವ ಋಷಿಗಳು 'ಮಮತ್ವ' ಎಂಬ ಮೃತ್ಯುಕಾರಣವನ್ನು ಮೀರುವ ಉಪಾಯವನ್ನು ಕಂಡುಹಿಡಿದಿರುತ್ತಾರೆ ಎಂಬುದು ನಿಜ; ಆದರೆ ಭರತಖಂಡದವರೆಲ್ಲ ನಿರ್ಮಮರೆಂದು ಹೇಳುವದಕ್ಕೆ ಬರುವದಿಲ್ಲ. ಯಾರು ಸರ್ವತ್ರವೂ ವ್ಯಾಪಿಸಿಕೊಂಡಿರುವ ಪರಮಾತ್ಮನೇ ತಮ್ಮ ಆತ್ಮನೆಂಬ ಜ್ಞಾನವನ್ನು ಸಂಪಾದಿಸಿಕೊಂಡಿರುವರೋ ಅಂಥವರು ಮಾತ್ರ ಸರ್ವಪರಿಗ್ರಹಗಳನ್ನೂ ಪರಿತ್ಯಾಗಮಾಡಿದ ಪರಮಹಂಸರಾಗಬಲ್ಲರು. ಅಂಥವರಿಗೆ ಶರೀರಾದಿಗಳಲ್ಲಿರುವ ಅಭಿಮಾನವು ಆತ್ಮನಲ್ಲಿ ಬಂದು ಬಿಟ್ಟಿರುತ್ತದೆ.

ಶರೀರವೆಂದರೇನು? ಯಾವಯಾವದನ್ನು ನಾನು-ನನ್ನದೆಂದು ಜನರು ಮಿಥ್ಯಾಭಿಮಾನದಿಂದ ತಿಳಿದಿರುತ್ತಾರೋ ಆ ಅಧ್ಯಾತ್ಮಸಾಮಗ್ರಿ ಯೆಲ್ಲವೂ ಶರೀರವೇ.

ಮಹಾಭೂತಾನ್ಯಹಂಕಾರೋ ಬುದ್ಧಿರವ್ಯಕ್ತಮೇವ ಚ ।
ಇನ್ದ್ರಿಯಾಣಿ ದಶೈಕಂ ಚ ಪಞ್ಚಚೇನ್ದ್ರಿಯಗೋಚರಾಃ ॥ (ಗೀ. 13-5)

ಇಚ್ಛಾ ದ್ವೇಷಃ ಸುಖಂ ದುಃಖಂ ಸಂಘಾತಶ್ಚೇತನಾ ಧೃತಿಃ ।
ಏತತ್ಕ್ಷೇತ್ರಂ ಸಮಾಸೇನ ಸವಿಕಾರಮುದಾಹೃತಮ್ ॥ (ಗೀ. 13-6)

ಈ ಎರಡು ಶ್ಲೋಕಗಳಲ್ಲಿ ಹೇಳಿರುವದೆಲ್ಲ ಕ್ಷೇತ್ರವೇ, ಶರೀರವೇ. ಇದನ್ನು ಸ್ಥೂಲಶರೀರವೆಂದೂ ಸೂಕ್ಷ್ಮಶರೀರವೆಂದೂ ಶಾಸ್ತ್ರದಲ್ಲಿ ವಿಂಗಡಿಸಿ ರುತ್ತದೆ. ಎಲ್ಲಕ್ಕೂ ಸಾಕ್ಷಿಯಾದ ಆತ್ಮನೊಬ್ಬನನ್ನು ಬಿಟ್ಟು ಮಿಕ್ಕ ದೇಹೇಂದ್ರಿಯ ಗಳೆಲ್ಲವೂ ಶರೀರಕ್ಕೇ ಸೇರಿದ್ದು. ಈ ಕ್ಷೇತ್ರಕ್ಷೇತ್ರಜ್ಞರಿಗೆ ಉಂಟಾಗಿರುವ

ಸಂಯೋಗದಿಂದಲೇ ಸ್ಥಾವರ ಜಂಗಮಪ್ರಾಣಿಗಳೆಲ್ಲವೂ ಆಗಿರುವವು ಎಂದು ಭಗವಂತನು ಹೇಳಿರುತ್ತಾನೆ. ಕ್ಷೇತ್ರ-ಕ್ಷೇತ್ರಜ್ಞರಿಗೆ ಆಗಿರುವ ಈ ಸಂಬಂಧವು ಯಾವದು? ಕೈಗೂ ಒಂದು ಪುಸ್ತಕಕ್ಕೂ ಆಗಿರುವಂತೆ ಒಂದು ಕಡೆಯಲ್ಲಿ ಆತ್ಮನು ಕ್ಷೇತ್ರವನ್ನು ಮುಟ್ಟಿಕೊಂಡಿರುವದಿಲ್ಲ. ಗುಣಗಳು ಗುಣಿಯಲ್ಲಿಯೂ ಜಾತಿಯು ವ್ಯಕ್ತಿಗಳಲ್ಲಿಯೂ ಕ್ರಿಯೆಯು ಕ್ರಿಯಾವಂತನಲ್ಲಿಯೂ ಸೇರಿಕೊಂಡಿರುವಂತೆ ನಿತ್ಯವಾಗಿ ಅಂಟಿಕೊಂಡಿರುವದೂ ಇಲ್ಲ. ಹಾಗಾದರೆ ಈ ಸಂಬಂಧದ ನಿಜವಾದ ಸ್ವರೂಪವು ಯಾವದೆಂದರೆ ಆಚಾರ್ಯರು ಹೀಗೆ ವರ್ಣಿಸಿರುತ್ತಾರೆ:

'ಕ್ಷೇತ್ರಕ್ಷೇತ್ರಜ್ಞಯೋರ್ವಿಷಯವಿಷಯಿಣೋರ್ಭಿನ್ನಸ್ವಭಾವಯೋರಿತರೇತರ ತದ್ಧರ್ಮಾಧ್ಯಾಸಲಕ್ಷಣಃ ಸಂಯೋಗಃ ಕ್ಷೇತ್ರಕ್ಷೇತ್ರಜ್ಞಸ್ವರೂಪವಿವೇಕಾಭಾವ ನಿಬನ್ಧನೋ ರಜ್ಜುಶುಕ್ತಿಕಾದೀನಾಂ ತದ್ವಿವೇಕಜ್ಞಾನಾಭಾವಾದಧ್ಯಾರೋಪಿತ ಸರ್ಪರಜತಾದಿ ಸಂಯೋಗವತ್ । ಸೋऽಯಮಧ್ಯಾಸಲಕ್ಷಣಃ ಕ್ಷೇತ್ರಕ್ಷೇತ್ರಜ್ಞ ಸಂಯೋಗೋ ಮಿಥ್ಯಾಜ್ಞಾನಲಕ್ಷಣಃ । ಯಥಾಶಾಸ್ತ್ರಂ ಕ್ಷೇತ್ರಕ್ಷೇತ್ರಜ್ಞಲಕ್ಷಣ ಭೇದಪರಿಜ್ಞಾನಪೂರ್ವಕಂ ಪ್ರಾಗ್ದರ್ಶಿತರೂಪಾತ್ ಕ್ಷೇತ್ರಾತ್ ಮುಂಜಾದಿವ ಇಷೀಕಾಂ ಯಥೋಕ್ತ ಲಕ್ಷಣಂ ಕ್ಷೇತ್ರಜ್ಞಂ ಪ್ರವಿಭಜ್ಯ 'ನ ಸತ್ತನ್ನಾಸದುಚ್ಯತೇ' ಇತ್ಯನೇನ ನಿರಸ್ತಸರ್ವೋಪಾಧಿವಿಶೇಷಂ ಜ್ಞೇಯಂ ಬ್ರಹ್ಮ ಸ್ವರೂಪೇಣ ಯಃ ಪಶ್ಯತಿ ಕ್ಷೇತ್ರಂ ಚ ಮಾಯಾನಿರ್ಮಿತಹಸ್ತಿಸ್ವಪ್ನದೃಷ್ಟವಸ್ತುಗನ್ಧರ್ವನಗರಾದಿವತ್ ಅಸದೇವ ಸದಿವಾವಭಾಸತ ಇತ್ಯೇವಂನಿಶ್ಚಿತವಿಜ್ಞಾನೋ ಯಃ, ತಸ್ಯ ಯಥೋಕ್ತಸಮ್ಯಗ್ದರ್ಶನವಿರೋಧಾದಪಗಚ್ಛತಿ ಮಿಥ್ಯಾಜ್ಞಾನಮ್ ।।''

ಮೇಲೆ ಕೊಟ್ಟಿರುವ ಗೀತಾಭಾಷ್ಯಭಾಗದ ಅಭಿಪ್ರಾಯವಿದು: ಕ್ಷೇತ್ರವು ವಿಷಯ, ಕ್ಷೇತ್ರಜ್ಞನು ವಿಷಯಿ. ಇವುಗಳ ಸ್ವಭಾವಗಳು ಒಂದಕ್ಕೊಂದು ತೀರಭಿನ್ನವಾಗಿರುವವು. ಇವುಗಳಲ್ಲಿ ಒಂದನ್ನು ಇನ್ನೊಂದೆಂದೂ ಒಂದರ ಧರ್ಮಗಳನ್ನು ಇನ್ನೊಂದರ ಧರ್ಮಗಳೆಂದೂ ತಿಳಿಯುವ ಅಧ್ಯಾಸವೇ ಇವುಗಳೆರಡಕ್ಕೂ ಇರುವ ಸಂಬಂಧವು; ಈ ಸಂಬಂಧಕ್ಕೆ ಇವುಗಳ ಸ್ವರೂಪವನ್ನು ವಿಂಗಡಿಸಿಕೊಂಡು ಅರಿಯದಿರುವದೇ ನಿಮಿತ್ತವು. ಶಾಸ್ತ್ರದಲ್ಲಿ ಹೇಳಿರುವಂತೆ ಇವೆರಡರ ಲಕ್ಷಣವನ್ನೂ ಚೆನ್ನಾಗಿ ಅರಿತುಕೊಂಡು ಕ್ಷೇತ್ರದಿಂದ ಕ್ಷೇತ್ರಜ್ಞನನ್ನು ವಿವೇಚಿಸಿ ಸತ್ತಲ್ಲ, ಅಸತ್ತೂ ಅಲ್ಲ- ಎಂದು (ಗೀ. 13-12)

ಹೇಳಿರುವ ರೀತಿಯಿಂದ ಯಾವ ಉಪಾಧಿಯೂ ಇಲ್ಲದ ರೂಪದಿಂದ ಯಾವನು ಕಂಡುಕೊಳ್ಳುವನೋ, ಮತ್ತು ಕ್ಷೇತ್ರವು ಮಾಯೆಯಿಂದ ಮಾಡಿರುವ ಆನೆಯಂತೆಯೂ ಕನಸಿನಲ್ಲಿ ಕಂಡ ವಸ್ತುಗಳಂತೆಯೂ ಗಂಧರ್ವ ನಗರದಂತೆಯೂ ಅಸತ್ತೇ ಆಗಿದ್ದರೂ ನಿಜವಾಗಿರುವಂತೆ ಕಾಣಿಸುತ್ತದೆ ಎಂದು ಯಾವನು ನಿಶ್ಚಯಮಾಡಿಕೊಂಡಿರುವನೋ ಅವನಿಗೆ ಮೇಲೆ ಹೇಳಿರುವ ಮಿಥ್ಯಾಜ್ಞಾನವು ತೊಲಗಿಬಿಡುತ್ತದೆ.

ಈ ಜ್ಞಾನವು ಯಾರಿಗೆ ಬಂದಿರುವದೋ ಅಂಥವರಿಗೆ ಮಾತ್ರ ನನ್ನದು ಎಂಬ ಅಭಿಮಾನವು ಇರುವದಿಲ್ಲ. ಮಿಕ್ಕವರು ಯಾರಿಗೂ ನನ್ನದು ಎಂಬ ಬುದ್ಧಿಯು ಹೋಗಿರುವದಿಲ್ಲ. ಈ ಮಿಥ್ಯಾಭಿಮಾನವನ್ನು ಭರ್ತೃಹರಿಯ 'ನಿರ್ವೇದ'ವೆಂಬ ಒಂದು ಸಂಸ್ಕೃತನಾಟಕಗ್ರಂಥದಲ್ಲಿ ಸ್ವಾರಸ್ಯವಾಗಿ ವರ್ಣಿಸಿರುತ್ತದೆ. ''ಭರ್ತೃಹರಿರಾಜನು ಒಮ್ಮೆ ಹೆಂಡತಿಯು ಸಂಭಾಷಣೆಯಲ್ಲಿ ಪ್ರದರ್ಶಿಸಿದ ಹೆಚ್ಚಿನ ತರಗತಿಯ ಪಾತಿವ್ರತ್ಯವನ್ನು ಪರೀಕ್ಷಿಸುವದಕ್ಕಾಗಿ ತಾನು ಕಾಡಿನಲ್ಲಿ ಸತ್ತುಹೋದನೆಂಬ ಸುದ್ದಿಯನ್ನು ಆಕೆಗೆ ಮುಟ್ಟಿಸುತ್ತಾನೆ; ಆಕೆಯು ಆ ಸುದ್ದಿಯನ್ನು ಕೇಳುತ್ತಲೂ ಮೂರ್ಛೆ ಹೋಗಿ ಪರಲೋಕಕ್ಕೆ ತೆರಳಿಬಿಡುತ್ತಾಳೆ. ರಾಜನಿಗೆ ಈ ದುಃಖದ ವಾರ್ತೆಯು ಮುಟ್ಟಲು ಅವನು ಶೋಕದ ಉನ್ಮಾದ ದಿಂದ ರಾಜಧಾನಿಯನ್ನು ಪ್ರವೇಶಿಸದೆ, ಹೆಂಡತಿಯ ಶವಕ್ಕೆ ಅಂತ್ಯಸಂಸ್ಕಾರ ವನ್ನು ಮಾಡುವದಕ್ಕೂ ಅವಕಾಶವನ್ನು ಕೊಡದೆ ಆ ಶವವನ್ನು ತನ್ನ ಎದೆಯ ಮೇಲಿಟ್ಟುಕೊಂಡು ಪ್ರಾಣವನ್ನು ಬಿಡುವೆನೆಂದೂ ಪರಲೋಕದಲ್ಲಿಯಾದರೂ ಆಕೆಯ ಸಮಾಗಮವಾಗಲೆಂದೂ ಆ ಕಾರ್ಯಕ್ಕೆ ಮೊದಲು ಮಾಡುತ್ತಾನೆ. ಈ ಸಂದರ್ಭಕ್ಕೆ ಸರಿಯಾಗಿ ಗೋರಕ್ಷರೆಂಬ ಸುಪ್ರಸಿದ್ಧಸಾಧುಗಳು ತಮ್ಮದೊಂದು ಮಡಕೆಯನ್ನು ಒಡೆದುಕೊಂಡು ಗಟ್ಟಿಯಾಗಿ ಅಳುತ್ತಾ 'ಅಯ್ಯೋ! ಆ ನನ್ನ ನಯವಾದ ಸುಂದರಾಕಾರದ ಮಡಕೆ ಒಡೆದು ಹೋಯಿತಲ್ಲ! ಅದು ಎಷ್ಟು ಗಟ್ಟಿಯಾಗಿರುವದೋ ನೋಡೋಣವೆಂದು ನಾನೇ ಅದನ್ನು ಕುಟ್ಟಿ ಒಡೆದು ಹಾಕಿದೆನಲ್ಲ! ಇನ್ನು ನನಗೇನು ಗತಿ!' ಎಂದು ಮುಂತಾಗಿ ಶೋಕಿಸುತ್ತಿರುವದು ರಾಜನಿಗೆ ಕೇಳಿಬಂತು. ಅವರೊಬ್ಬರು ಮಹಾತ್ಮರೆಂಬುದರನ್ನರಿಯದೆ 'ಅಯ್ಯಾ, ಹೋಗಲಿ ಬಿಡು, ನಿನಗೆ ಇದಕ್ಕಿಂತಲೂ ಉತ್ತಮವಾದ ಮಡಕೆಗಳನ್ನು ಕೊಡಿಸುವೆನು' ಎಂದು ಮುಂತಾಗಿ ಸಮಾಧಾನಪಡಿಸಿದರೂ ಅವರು 'ಛೇ!

ನಿರಂತರವಾಗಿ ನನ್ನ ಜೊತೆಯಲ್ಲಿದ್ದ ಆ ಮಡಕೆಯು ಹಾಳಾದಮೇಲೂ ನಾನು ಬದುಕಿರುವದೆ? ಇಲ್ಲ, ಇಲ್ಲ; ಆ ಮಡಕೆಯ ಚೂರುಗಳನ್ನು ನನ್ನ ಎದೆಯ ಮೇಲೆ ಇಟ್ಟುಕೊಂಡೇ ಪ್ರಾಣವನ್ನು ಬಿಡುವೆನು. ಮತ್ತೊಂದು ಜನ್ಮದಲ್ಲಾದರೂ ಆ ಮಡಕೆಗೂ ನನಗೂ ಸೇರುವಿಕೆಯಾಗಲಿ!' ಎಂದು ಗಟ್ಟಿಯಾಗಿ ಅಳುತ್ತಾ ಮಲಗಿರುವದನ್ನು ಕಂಡು ರಾಜನು ನಗುತ್ತಾ 'ಅಹಹಾ! ವ್ಯಾಮೋಹವೆ! ಒಂದು ಮಡಕೆಗಾಗಿ ಇಷ್ಟೊಂದು ಸಾಹಸಕೃತ್ಯ ವನ್ನು ಮಾಡುವ ಈತನು ಎಂಥ ಅನುಕಂಪನೀಯನು!' ಎಂದು ಮುಂತಾಗಿ ಪರಿಹಾಸ್ಯಮಾಡುವದಕ್ಕೆ ಮೊದಲು ಮಾಡಿದನು. 'ನೀನು ಮಾತ್ರ ಒಂದು ಶವಕ್ಕೆ ಹೀಗೆ ವ್ಯಾಮೋಹಪಟ್ಟು ನಡೆಯುತ್ತಿರುವದು ಯುಕ್ತವಷ್ಟೆ?' ಎಂದು ಸಾಧುಗಳು ಮೂದಲಿಸಲು ರಾಜನಿಗೆ ತನ್ನ ತಪ್ಪಿನ ಅರಿವಾಯಿತು. ತನಗೆ ಬುದ್ಧಿ ಹೇಳುವದಕ್ಕೆ ಬಂದಿರುವ ಈ ಮಹನೀಯರು ಒಬ್ಬ ವಿರಕ್ತಶಿಖಾಮಣಿಗಳಾದ ಸಾಧುವರ್ಯರೆಂಬ ಅರಿಕೆಯೂ ಆಯಿತು. ಕೂಡಲೆ ಅವರ ಬೋಧೆಯಿಂದ ಅವನಿಗೆ ತೀವ್ರವೈರಾಗ್ಯವು ಬಂದು ಅವನು ರಾಜ್ಯತ್ಯಾಗವನ್ನು ಮಾಡಿ ಅವರ ಅನುಗ್ರಹದಿಂದ ಯೋಗಿವರ್ಯನಾದನು'' – ಎಂಬುದು ನಾಟಕದ ಕಥೆಯ ಸಾರ.

ಹೀಗೆ ತನಗೆ ಮಹಾಪುಣ್ಯಪರಿಪಾಕದಿಂದ ಉಂಟಾದ ಆತ್ಮಜ್ಞಾನದ ಮಹಿಮೆಯಿಂದ ಯಾವನ ಅಂತಃಕರಣದಲ್ಲಿ ಸ್ವಭಾವಸಿದ್ಧವಾದ ವೈರಾಗ್ಯವು ತೋರಿಕೊಳ್ಳುವದೋ ಅಂಥ ಪುರುಷಧೌರೇಯನು ಇಹಪರಫಲಗಳಿಗಾಗಿ ಮಾಡುವ ಎಲ್ಲಾ ಕರ್ಮಗಳನ್ನೂ ಅವಶ್ಯವಾಗಿ ಸಂನ್ಯಾಸಮಾಡುವನು. ಕೇವಲ ಶರೀರಸ್ಥಿತಿಗಾಗಿ ಅವಶ್ಯವಾಗಿ ಮಾಡಬೇಕಾದಷ್ಟು ಭಿಕ್ಷಾದಿಕರ್ಮವನ್ನು ಮಾತ್ರ ಮಾಡುತ್ತಾ ಜ್ಞಾನನಿಷ್ಠನಾಗಿ ತನ್ನ ಪ್ರಾರಬ್ಧಕರ್ಮದ ಶೇಷಫಲವನ್ನು ಅನುಭವಿಸುತ್ತಾ ಕಾಲಯಾಪನೆಯನ್ನು ಮಾಡುವನು ಎಂಬುದು ಸ್ವಾಭಾವಿಕವಾಗಿದೆ.

ಆದರೆ ಯಾವನು ಗೃಹಸ್ಥನಾಗಿ ಕರ್ಮಗಳನ್ನು ಮಾಡುವದಕ್ಕೆ ಆರಂಭಿಸಿರುವನೋ ಅವನಿಗೆ ಆ ಆಶ್ರಮದಲ್ಲಿಯೇ ಜ್ಞಾನವುಂಟಾದರೆ ಇನ್ನುಮೇಲೆ ಅವನಿಗೆ ಯಾವ ಕರ್ಮದಿಂದಲೂ ಯಾವ ಪ್ರಯೋಜನವೂ ಆಗಬೇಕಾದದ್ದು ಇಲ್ಲವಾದರೂ ಸರ್ವಕರ್ಮವನ್ನೂ ಬಿಟ್ಟುಬಿಡುವದಕ್ಕೆ

ಯಾವದಾದರೂ ಒಂದು ಲೌಕಿಕವಾದ ಅಡ್ಡಿಯಿರಬಹುದು. ಉದಾಹರಣೆಗೆ ವೃದ್ಧಮಾತಾಪಿತೃಗಳ ಸೇವೆಯನ್ನು ಮಾಡುವವರು ಯಾರೂ ಇಲ್ಲದಿರ ಬಹುದು; ಇಂಥ ಸಂದರ್ಭಗಳಲ್ಲಿ ಅವನು ಮೊದಲಿನಂತೆ ಕರ್ಮವನ್ನು ಮಾಡಿಕೊಂಡೇ ಇದ್ದುಬಿಡುತ್ತಾನೆ. ಅವನಿಗೆ ಜ್ಞಾನವು ಉತ್ಪನ್ನವಾಗಿಬಿಟ್ಟಿರು ವದರಿಂದ ಈಗ ಮಾಡುವ ಕರ್ಮದಿಂದ ಅವನಿಗೆ ಆಗಬೇಕಾದ ಪ್ರಯೋಜನವು ಯಾವದೂ ಇರುವದಿಲ್ಲವಾದರೂ ಆ ಕರ್ಮದ ಅನುಷ್ಠಾನ ದಿಂದ ಶಿಷ್ಟರಿಗೆ ಸಂತೋಷವಾಗುತ್ತದೆ. ಸಾಮಾನ್ಯಜನರಿಗೆ ಅವನ ಮೇಲು ಪಙ್ಕ್ತಿಯಿಂದ ಕರ್ಮಾಚರಣೆಯಲ್ಲಿ ಶ್ರದ್ಧೆಯೂ ಹೆಚ್ಚುತ್ತದೆ. ಇದನ್ನೇ ಲೋಕಸಂಗ್ರಹಕರ್ಮವೆನ್ನುವರು. ಲೋಕಸಂಗ್ರಹಕರ್ಮವೆಂಬ ಶಬ್ದಕ್ಕೆ ಈಗಿನ ಕೆಲವರು ಒಂದು ಬಗೆಯ ವಿಲಕ್ಷಣಾರ್ಥವನ್ನು ಕಲ್ಪಿಸಿಕೊಂಡಿರುತ್ತಾರೆ. ಅಂಥವರು 'ನಾವು ಜ್ಞಾನಿಗಳಾದ್ದರಿಂದ ಯಾವ ಕರ್ಮವನ್ನೂ ಮಾಡುವದಿಲ್ಲ' ಎಂದು ಕರ್ಮವನ್ನು ಬಿಟ್ಟುಬಿಡುತ್ತಾರೆ. ಆದರೆ ತಮ್ಮ ಮನೆಗೆ ಯಾರಾದರೂ ಬಂದರೆ ಅವರಿಗೆ ತೋರುಗಾಣಿಕೆಯಾಗಿ ಸಹಸ್ರಗಾಯತ್ರಿಯನ್ನು ಮಾಡುವದಕ್ಕೆ ಆರಂಭಿಸುತ್ತಾರೆ! ಇಂಥವರು ಕರ್ಮನಟನೆಯ ಧೂರ್ತರೇ ಹೊರತು ಜ್ಞಾನಿಗಳಲ್ಲ; ಅವರಿಗೆ ಕರ್ಮಭ್ರಷ್ಟತೆಯೇ ಫಲ. ಗೃಹಸ್ಥನಾಗಿದ್ದರೂ ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡುತ್ತಿರುವ ಜ್ಞಾನಿಯ ವರ್ತನೆ ಹೀಗಿರುವದಿಲ್ಲ. ಅವನು ಎಲ್ಲಾ ಗೃಹಸ್ಥರಂತೆಯೇ ಕರ್ಮವನ್ನು ಉತ್ತಮರೀತಿಯಿಂದಲೇ ಮಾಡುತ್ತಿರುತ್ತಾನೆ; ಆದರೆ ಅವನಿಗೆ ಅದು ಯಾವ ವಿಶಿಷ್ಟಫಲವನ್ನೂ ಕೊಡುವದಿಲ್ಲ. ಏಕೆಂದರೆ ಅದು ಜ್ಞಾನಾಗ್ನಿಯಿಂದ ದಗ್ಧವಾಗಿ ಬಿಟ್ಟಿರುತ್ತದೆ. ಅವನಿಗೆ ಕರ್ಮದಲ್ಲಿ ಸಂಗವಿರುವದಿಲ್ಲ, ಫಲದಲ್ಲಿ ಆಸಕ್ತಿಯೂ ಇರುವದಿಲ್ಲಫಿ; ಏಕೆಂದರೆ ಜ್ಞಾನದಲ್ಲಿ ನಿಷ್ಠನಾಗಿಬಿಟ್ಟಿರುತ್ತಾನೆ. ಹೀಗೆ ಲೋಕಸಂಗ್ರಹಕ್ಕಾಗಿ ಕರ್ಮವನ್ನು ಮಾಡುತ್ತಿರುವವನ ದೃಷ್ಟಿಯನ್ನು ಭಗವಂತನು ಹೀಗೆಂದು ವರ್ಣಿಸಿರುತ್ತಾನೆ:

ಬ್ರಹ್ಮಾರ್ಪಣಂ ಬ್ರಹ್ಮ ಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ ।
ಬ್ರಹ್ಮೈವ ತೇನ ಗನ್ತವ್ಯಂ ಬ್ರಹ್ಮಕರ್ಮಸಮಾಧಿನಾ ॥ (4-24)

ಅವನು ಯಾವ ಸಾಧನದಿಂದ ಹವಿಸ್ಸನ್ನು ಅರ್ಪಿಸುತ್ತಾನೋ ಅದು ಅವನ ದೃಷ್ಟಿಯಲ್ಲಿ ಬರಿಯ ಸಾಧನವಲ್ಲ, ಅದು ಬ್ರಹ್ಮವೇ. ಹೀಗೆಯೇ ಅವನು ಹಾಕುವ ಹವಿಸ್ಸೂ ಅವನಿಗೆ ಬ್ರಹ್ಮವೇ; ಯಾವ ಅಗ್ನಿಯಲ್ಲಿ ಅವನು ಹೋಮ

ಮಾಡುತ್ತಾನೋ ಅದೂ ಅವನ ದೃಷ್ಟಿಯಿಂದ ಬ್ರಹ್ಮವೇ; ಹೋಮಮಾಡುವ ತಾನೂ ಬ್ರಹ್ಮವೇ; ಹೋಮಪ್ರಕ್ರಿಯೆಯೂ ಬ್ರಹ್ಮವೇ; ಕರ್ಮವೆಲ್ಲವೂ ಬ್ರಹ್ಮವೇ, ಅದರಿಂದ ದೊರಕುವ ಫಲವೂ ಬ್ರಹ್ಮವೇ. ಹೀಗೆ ಜ್ಞಾನಿಯಾದವನು ಮಾಡುವ ಕರ್ಮವು ಕರ್ಮವೇ ಅಲ್ಲ; ಅದರಲ್ಲಿ ಅವನ ದೃಷ್ಟಿಯಿಂದ ಕ್ರಿಯಾಕಾರಕಫಲಗಳೇ ಇರುವದಿಲ್ಲ. ಬೆಳ್ಳಿಯೆಂದು ತಪ್ಪಾಗಿ ತಿಳಿದುಕೊಂಡಿದ್ದವನು ಇದು ಕಪ್ಪೆಯಚಿಪ್ಪೇ ಎಂದು ನಿಶ್ಚಯಿಸಿಕೊಂಡಂತೆ ಅವನು ಕ್ರಿಯಾಕಾರಕಾದಿಗಳನ್ನೆಲ್ಲ ಬ್ರಹ್ಮವೆಂದೇ ತಿಳಿದುಕೊಂಡಿರುತ್ತಾನೆ. ಆದ್ದರಿಂದ ಹೀಗೆ ಲೋಕಸಂಗ್ರಹಕರ್ಮವನ್ನು ಮಾಡುತ್ತಿರುವ ಜ್ಞಾನಿಯೂ ಪರಮಾರ್ಥದೃಷ್ಟಿಯಿಂದ ಸಂನ್ಯಾಸಿಯೇ ಆಗಿರುತ್ತಾನೆ ಎಂದು ಅಭಿಪ್ರಾಯ. ಗೃಹಸ್ಥರಲ್ಲಿ ಕೂಡ ಪ್ರವೃತ್ತಿನಿಷ್ಠರಲ್ಲದೆ ನಿವೃತ್ತಿನಿಷ್ಠರೂ ಇರುತ್ತಾರೆಂದು ಸ್ಮೃತಿಗಳಲ್ಲಿ ಹೇಳಿರುತ್ತದೆ. ಜ್ಞಾನಿಗಳಾಗಿಯೂ ಗೃಹಸ್ಥರಂತೆ ತೋರುವವರು ಆತ್ಯಂತಿಕವಾಗಿ ನಿವೃತ್ತಿನಿಷ್ಠರೇ ಆಗಿರುತ್ತಾರೆ.

ಶಂಕರಾಚಾರ್ಯರು ಕರ್ಮಗಳನ್ನೆಲ್ಲ ಬಿಟ್ಟು ಕಾವಿಯನ್ನುಟ್ಟುಕೊಂಡವರೇ ಜ್ಞಾನಿಗಳೆಂದು ಭಾವಿಸುತ್ತಾರೆಂಬ ತಪ್ಪುಕಲ್ಪನೆಯನ್ನು ಮಾಡಿಕೊಂಡಿರುವವರು ಆಚಾರ್ಯರು ಹೇಳಿರುವ ಈ ಲೋಕಸಂಗ್ರಹಕರ್ಮದ ತತ್ತ್ವವನ್ನು ಮನಸ್ಸಿನಲ್ಲಿ ಚೆನ್ನಾಗಿ ಹೊರಳಿಸಬೇಕು. ಅಜ್ಞಾನಿಗಳಾದವರು ಸುಮ್ಮನೆ ಆಶ್ರಮಚಿಹ್ನೆಗಳಾದ ಕಾವಿದಂಡಕಮಂಡಲುಗಳನ್ನು ಧರಿಸಿದರೂ ನಿಜವಾದ ಸಂನ್ಯಾಸಿಗಳಾಗರು; ಕರ್ಮದಲ್ಲಿ ಶ್ರದ್ಧೆಯಿಲ್ಲದವರು ಕರ್ಮವನ್ನು ಮಾಡುತ್ತಿದ್ದರೂ ನಿಜವಾದ ಗೃಹಸ್ಥರಾಗಲಾರರು. ಜ್ಞಾನಿಯಾದವನು ಲೋಕದೃಷ್ಟಿಯಿಂದ ಗೃಹಸ್ಥನಾಗಿರಲಿ ಅಥವಾ ಚತುರ್ಥಾಶ್ರಮದಲ್ಲಿರಲಿ, ಪರಮಾರ್ಥದೃಷ್ಟಿಯಿಂದ ಅವನು ಎಂದೆಂದಿಗೂ ಸಂನ್ಯಾಸಿಯೇ; ಇಂಥ ಸಂನ್ಯಾಸಸಹಿತವಾದ ಜ್ಞಾನನಿಷ್ಠೆಯೇ ನಿಃಶ್ರೇಯಸಕ್ಕೆ ಕಾರಣವೆಂದು ಗೀತೆಯಲ್ಲಿ ಬೋಧಿಸಿದೆ ಎಂಬ ಮಹಾತತ್ತ್ವವು ಜ್ಞಾನಿಗೃಹಸ್ಥನ ಮತ್ತು ಜ್ಞಾನಿಪರಮಹಂಸನ ವಿಷಯದಲ್ಲಿ ಆಚಾರ್ಯರು ಬರೆದಿರುವ ಭಾಷ್ಯದಿಂದ ಮಾತ್ರವೇ ಮನದಟ್ಟಾದೀತು.

* * * * *

## 8. ಕರ್ಮಯೋಗದ ಗುರಿ

ಪರಮಾರ್ಥಕ್ಕೆ ನಾಮರೂಪಕರ್ಮಗಳ ಸೋಂಕಿಲ್ಲ ಎಂದು ಅರಿತುಕೊಳ್ಳುವ ಜ್ಞಾನವೇ ಮುಕ್ತಿಗೆ ಕಾರಣವಾಗಿರುತ್ತದೆ. ಜನರಿಗೆ ಕರ್ಮವನ್ನು ಮಾಡಿರೆಂದಾಗಲಿ ಬಿಡಿರೆಂದಾಗಲಿ ಹೇಳಿಕೊಡಬೇಕಾದದ್ದಿಲ್ಲ. ಏಕೆಂದರೆ ಲೋಕದಲ್ಲಿ ಪ್ರತಿಯೊಬ್ಬನೂ ಏನಾದರೊಂದು ಕರ್ಮವನ್ನು ಮಾಡುತ್ತಲೇ ಇರುತ್ತಾನೆ. 'ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್' ಎಂಬ ಗೀತಾವಾಕ್ಯವು ಇದನ್ನು ಅನುವಾದ ಮಾಡಿಕೊಂಡು ಕರ್ಮವನ್ನು ಮಾಡುವವರು ಹೇಗೆ ಮಾಡಬೇಕೆಂಬುದನ್ನು ತಿಳಿಸಿಕೊಡುತ್ತದೆಯೇ ಹೊರತು ಕರ್ಮವನ್ನು ಮಾಡಬೇಕು ಎಂಬುದನ್ನಲ್ಲ. ಪ್ರಮಾಣವಾದದ್ದು ನಮಗೆ ಮೊದಲು ತಿಳಿಯದೆ ಇದ್ದದ್ದನ್ನು ತಿಳಿಸಿಕೊಡಬೇಕಷ್ಟೆ? ಆದ್ದರಿಂದ ಪ್ರಮಾಣ ವಾದ ಶಾಸ್ತ್ರವು ಕರ್ಮವನ್ನು ಹೇಗೆ ಮಾಡಬೇಕೆಂಬುದನ್ನು ತಿಳಿಸಿಕೊಡುತ್ತದೆ. ಕರ್ತೃತ್ವಭೋಕ್ತೃತ್ವವು ಪಶುಪಕ್ಷ್ಯಾದಿಗಳಿಗೆ ಇರುವಂತೆ ಮನುಷ್ಯನಿಗೂ ಸ್ವಭಾವದಿಂದಲೇ ಇರುತ್ತದೆ. ಆದರೆ ಯಾವ ಕರ್ಮದಲ್ಲಿ ಪ್ರವೃತ್ತರಾಗಬೇಕು, ಯಾವದರಿಂದ ನಿವೃತ್ತರಾಗಬೇಕು – ಎಂಬುದನ್ನು ಮಾತ್ರ ಶಾಸ್ತ್ರವು ತಿಳಿಸಿಕೊಡುತ್ತದೆ.

ಈ ಫಲವು ಬೇಕಾದರೆ ಇಂಥ ಕರ್ಮವನ್ನು ಮಾಡಬೇಕು ಎಂದು ಶಾಸ್ತ್ರವು ಫಲಕ್ಕೆ ಸಾಧನವನ್ನು ತಿಳಿಸುತ್ತದೆ. ಕರ್ಮವೇನೋ ಪುರುಷತಂತ್ರವೇ; ಅದನ್ನು ಪುರುಷನು ತನ್ನ ಇಚ್ಛೆಯಂತೆ ಮಾಡಬಹುದು, ಬಿಡಬಹುದು, ವಿಪರೀತವಾಗಿಯೂ ಮಾಡಬಹುದು. ಒಬ್ಬ ಬ್ರಾಹ್ಮಣ ಹುಡುಗನು ಊಟಮಾಡುವಾಗ ಪ್ರಾಣಾಹುತಿಯನ್ನು ಒಂದು, ಎರಡು, ಮೂರು– ಎಂದು ಇಂಗ್ಲಿಷಿನಲ್ಲಿ ಸಂಖ್ಯೆಗಳನ್ನು ಹೇಳಿಕೊಂಡು ತೆಗೆದುಕೊಳ್ಳುತ್ತಿದ್ದನು! ಶಾಸ್ತ್ರವೇನೂ ಅವನನ್ನು ಹಾಗೆ ಮಾಡದಂತೆ ಅಡ್ಡಿಮಾಡಲಾರದಾಯಿತು! ಪ್ರವೃತ್ತಿನಿವೃತ್ತಿಗೆ ರಾಗದ್ವೇಷಗಳು ಕಾರಣ; ಇವು ಪಶ್ವಾದಿಗಳಿಗೂ ಮನುಷ್ಯರಿಗೂ ಸಮಾನವಾಗಿರುತ್ತವೆ. ಸರಿಯಾಗಿ ನೋಡಿದರೆ ಕ್ರಿಯಾಪ್ರಧಾನ ವಾದ ಪ್ರಪಂಚವೇ ರಾಗದ್ವೇಷಗಳ ಮೂಟೆಯಾಗಿರುತ್ತದೆ. ಆದ್ದರಿಂದ ಅಽ ಕಾರಿಗಳಿಗೆ ಇರುವ ಮನೋಭಾವಕ್ಕೆ ಅನುಗುಣವಾಗಿ ನಿತ್ಯಕಾಮ್ಯ ಕರ್ಮ ಗಳನ್ನು ವಿಧಿಸಿರುವ ಶಾಸ್ತ್ರವೇ ಮುಮುಕ್ಷುಗಳಿಗೆ ಕರ್ಮಯೋಗವನ್ನು

ಉಪದೇಶಿಸಿರುತ್ತದೆಯೆಂಬುದು ಸ್ವಾಭಾವಿಕವಾಗಿದೆ.

ವೇದಶಾಸ್ತ್ರಗಳೂ ಜ್ಞಾನಿಗಳ ಅನುಭವವೂ ತಿಳಿಸಿಕೊಡುವದೇನೆಂದರೆ ಆತ್ಮನಲ್ಲಿ ಯಾವ ನಾಮರೂಪಕರ್ಮಗಳ ಸಂಬಂಧವೂ ಇಲ್ಲ. ಈ ತಿಳಿವಳಿಕೆಯು ಸಾಂಖ್ಯವೆಂಬ ತತ್ತ್ವವಿಚಾರದ ಬುದ್ಧಿಯಿರುವವರಿಗೆ ಮಾತ್ರ ಇರುತ್ತದೆ. ಆ ಬುದ್ಧಿಯಿರುವವರಿಗೆ ತತ್ತ್ವದ ತಿಳಿವಳಿಕೆಯಿಂದ ಅವಿದ್ಯೆಯು ಸಂಪೂರ್ಣವಾಗಿ ಹೋಗಿಬಿಟ್ಟಿರುತ್ತದೆ. ಅವಿದ್ಯೆಯಿಂದಲೇ ಕಾಮವುಂಟಾಗುವದು, ಅದರಿಂದ ಕರ್ಮವುಂಟಾಗುವದು. ಆದ್ದರಿಂದ ಸಾಂಖ್ಯಬುದ್ಧಿಯು ಸಂಪೂರ್ಣವಾಗಿ ಅಳವಟ್ಟಿರುವವರಿಗೆ ಯಾವ ಕಾಮವೂ ಇರುವದೇ ಇಲ್ಲ; ಅಂಥವರೇ ಸ್ಥಿತಪ್ರಜ್ಞರು. ಸ್ಥಿತಪ್ರಜ್ಞರ ಲಕ್ಷಣವನ್ನು ಹೇಳುವದಕ್ಕೆ ಪ್ರಾರಂಭಿಸಿದ ಶ್ರೀಕೃಷ್ಣಭಗವಂತನು ''ಪ್ರಜಹಾತಿ ಯದಾ ಕಾಮಾನ್ ಸರ್ವಾನ್ ಪಾರ್ಥ ಮನೋಗತಾನ್' ಎಂದು ಹೇಳಿರುತ್ತಾನೆ. ಮನಸ್ಸನ್ನು ಆಶ್ರಯಿಸಿರುವ ಎಲ್ಲಾ ಕಾಮಗಳನ್ನೂ ಸಂಪೂರ್ಣವಾಗಿ ಬಿಟ್ಟವನೇ ಸ್ಥಿತಪ್ರಜ್ಞನು. ಇಲ್ಲಿ ಎಲ್ಲಾ ಕಾಮಗಳೆಂದರೆ ಕೆಟ್ಟ ಆಸೆಗಳು ಎಂದು ಕೆಲವರು ಸಂಕೋಚಮಾಡಿ ಅರ್ಥವನ್ನು ಹೇಳುವದುಂಟು. ಆದರೆ ಗೀತೆಯಲ್ಲಿ ಹಾಗೇನೂ ಹೇಳಿಲ್ಲ. ಶ್ರುತಿಯಲ್ಲಿಯೂ ''ಯದಾ ಸರ್ವೇ ಪ್ರಮುಚ್ಯನ್ತೇ ಕಾಮಾ ಯೇಽಸ್ಯ ಹೃದಿಶ್ರಿತಾಃ'' ಎಂದೇ ಇದೆ. ಕಾಮವು ಅಂತಃಕರಣದಲ್ಲಿರುತ್ತದೆ; ಅಂತಃಕರಣವು ಅನಾತ್ಮವೆಂಬುದನ್ನು ಮನಗಂಡಿರುವ ಸಾಂಖ್ಯಬುದ್ಧಿಯ ಆತ್ಮಜ್ಞಾನಿಗೆ ಯಾವ ಕಾಮವೂ ಇರುವದೇ ಇಲ್ಲ ಎಂಬುದು ಯುಕ್ತವಾಗಿದೆ.

ಆದರೆ ಹೀಗೆ ಸಾಂಖ್ಯಬುದ್ಧಿಯಿಂದ ಕಾಮಗಳನ್ನೆಲ್ಲ ಪರಿತ್ಯಜಿಸುವದು ಎಲ್ಲರಿಗೂ ಸಾಧ್ಯವಿಲ್ಲ. ಆದ್ದರಿಂದ 'ಯೋಗೇ ತ್ವಿಮಾಂ ಶೃಣು' ಎಂದು ಭಗವಂತನು ಕರ್ಮಯೋಗವನ್ನೂ ಸಮಾಧಿಯೋಗವನ್ನೂ ಮುಮುಕ್ಷುಗಳಿಗೆ ಜ್ಞಾನೋಪಾಯವಾಗಿ ಉಪದೇಶಿಸಿರುತ್ತಾನೆ. ಕರ್ತೃತ್ವಭೋಕ್ತೃತ್ವಬುದ್ಧಿಯನ್ನು ಜ್ಞಾನದಿಂದ ಕಳೆದುಕೊಳ್ಳುವ ಮುಂಚೆ ಅದಕ್ಕೆ ಮೊದಲನೆಯ ಮೆಟ್ಟಿಲಾಗಿ ಮಾಡುವ ಸಾಧನವೇ ಕರ್ಮಯೋಗವು. ಕರ್ಮಯೋಗವೆಂದರೇನು? 'ನಿಃಸಙ್ಗತಯಾ ದ್ವಂದ್ವಪ್ರಹಾಣಪೂರ್ವಕಮೀಶ್ವರಾರಾಧನಾರ್ಥೇ ಕರ್ಮಾನುಷ್ಠಾನೇ' ನಿಃಸಂಗನಾಗಿ ದ್ವಂದ್ವಪ್ರಹಾಣಪೂರ್ವಕವಾಗಿ ಈಶ್ವರಾರಾಧನೆ ಎಂದು

ಕರ್ಮವನ್ನು ಮಾಡುವದು- ಎಂದು ಆಚಾರ್ಯರು ತಿಳಿಸಿರುತ್ತಾರೆ. ಇಲ್ಲಿ ಹೇಳಿರುವ ವಿಶೇಷಣಗಳ ಅಭಿಪ್ರಾಯವನ್ನು ಒಂದೊಂದಾಗಿ ಬಿಡಿಸಿ ತಿಳಿದುಕೊಳ್ಳುವದಕ್ಕೆ ಪ್ರಯತ್ನಿಸೋಣ. ಸಂಗವೆಂದರೇನು? ಅಂಟಿಕೊಳ್ಳು ವದು, ಕರ್ಮವನ್ನು ನಾನು ಮಾಡುತ್ತೇನೆಂಬ ಬುದ್ಧಿಯಿಂದ ಮಾಡುತ್ತಿರು ವವರಿಗೆ ರಾಗದ್ವೇಷಗಳು ಕಟ್ಟಿಟ್ಟ ಬುತ್ತಿ. ಅವರು ಕರ್ಮವನ್ನು ಬಿಡಬೇಕೆಂದರೂ ಕರ್ಮವು ಅವರನ್ನು ಬಿಡುವದಿಲ್ಲ. ದ್ವಂದ್ವಗಳು ಎಂದರೆ ರಾಗದ್ವೇಷಗಳೇ ಮುಂತಾದ ಆಧ್ಯಾತ್ಮಿಕವಾದ ಜೋಡಿಗಳು; ಅವುಗಳ ಕಾಟವನ್ನು ತಪ್ಪಿಸಿಕೊಳ್ಳಬೇಕಾದರೆ ಫಲಾಭಿಸಂಧಿಯಿಲ್ಲದೆ ಕರ್ಮವನ್ನು ಮಾಡಬೇಕಾಗುತ್ತದೆ. ಆದರೆ ಇದು ಸುಲಭ ಸಾಧ್ಯವಲ್ಲ. ಯಾವ ಕರ್ಮವನ್ನು ಮಾಡಿದರೂ ಇದು ಯಾವ ಫಲಕ್ಕಾಗಿ?- ಎಂಬ ಪ್ರಶ್ನೆ ಏಳುತ್ತದೆ. ಪ್ರಯೋಜನವಿಲ್ಲದೆ ಯಾವನೂ ಕರ್ಮವನ್ನು ಮಾಡುವದಿಲ್ಲ ಎಂಬುದೊಂದು ನಿಯಮ. ಈ ವಿಷಯದಲ್ಲಿ ಒಂದು ಚಿಕ್ಕಕಥೆಯನ್ನು ಹೇಳುವದುಂಟು. ''ಒಂದೂರಿನಲ್ಲಿ ಒಬ್ಬ ಗೃಹಸ್ಥನ ಹೆಂಡತಿ, ಗಂಡನು ತನಗೆ ಆಗಾಗ್ಗೆ ಕೊಡುತ್ತಿದ್ದ ಪಾರಿತೋಷಕದ್ರವ್ಯವನ್ನು ಮನಸ್ಸಿನಲ್ಲಿಟ್ಟು ಕೊಂಡು ಯಾವದಾದರೂ ಕೆಲಸವನ್ನು ಮಾಡೆಂದು ಹೇಳಿದರೆ 'ಏನು ಕೊಡುತ್ತೀರಿ?' ಎಂದು ಕೇಳುತ್ತಿದ್ದಳಂತೆ. ಗಂಡನು ಮತ್ತೆಮತ್ತೆ ಅವಳು ಹೀಗೆ ಪೀಡಿಸಿದ್ದನ್ನು ಕಂಡು ಅವಳಿಗೆ ಏನೂ ಕೊಡದೆಯೇ ಇದ್ದುಬಿಟ್ಟನು; ಕೊನೆಗೆ ಆಕೆಯು ಯಾವ ಕೆಲಸವನ್ನೂ ಮಾಡದೆ ಸುಮ್ಮನಾಗಿಬಿಟ್ಟಳಂತೆ. ಹೀಗಿರಲು ಗೃಹಕೃತ್ಯವು ಅವ್ಯವಸ್ಥೆಗೆ ಬಂದದ್ದನ್ನು ಕಂಡು ಒಂದು ದಿನ ಜಿಗುಪ್ಸೆಯಿಂದವನು ರೇಗಿ, ಆಕೆಯು 'ಏನು ಕೊಡುತ್ತೀರಿ?' ಎಂದಾಗ ಎರಡು ಏಟು ಕೊಟ್ಟನು. ಮುಂದೆ ಅವಳನ್ನು ಕೆಲಸಕ್ಕೆ ಹಚ್ಚಬೇಕಾದರೆ ಆಗಾಗ್ಗೆ ಒಂದೇಟು ಕೊಡಬೇಕಾಗಿಯೇ ಬಂತು. ದಂಡನೆಯಿಲ್ಲದೆ ಆಕೆ ಯಾವ ಕೆಲಸವನ್ನೂ ಮಾಡಲಾರದೆಹೋದಳು. ಒಂದು ದಿನ ಅವನು ಹಳ್ಳಿಗೆ ಹೋಗಿ ಹಿಂದಿರುಗಿ ಬಂದಾಗ ಅವಳು ಇನ್ನೂ ಹಾಸಿಗೆಮೇಲೆಯೇ ಮಲಗಿದ್ದದ್ದನ್ನು ಕಂಡು 'ಇದೇಕೆ ಇನ್ನೂ ಹೀಗೆಯೇ ಮಲಗಿಕೊಂಡಿದೀಯೆ?' ಎನ್ನಲು, 'ಕೊಡುವದು ಕೊಟ್ಟರೆ ಏಳುತ್ತೇನೆ' ಎಂದಳಂತೆ!'' ಇದು ಹಾಸ್ಯಕ್ಕೆ ಹೇಳಿದ ಕಥೆ ಎಂದು ಮೇಲೆಯೇ ಕಾಣಿಸುತ್ತದೆ. ಆದರೆ ನಮ್ಮಲ್ಲನೇಕರು ಈ ಕೆಲಸವನ್ನೇಕೆ ಮಾಡಬೇಕು? ಇದಕ್ಕೇನು ಫಲವು

ದೊರಕುತ್ತದೆ?– ಎಂದು ಕೇಳದೆ ಯಾವ ಕೆಲಸಕ್ಕೂ ಕೈಹಾಕಲಾರದೆ ಇರುತ್ತೇವೆಂಬುದೇನೋ ನಿಜವಾಗಿಬಿಟ್ಟಿದೆ. ಇದು ಸ್ವಾಭಾವಿಕವೂ ಆಗಿದೆ. ಸರ್ವಥಾ ಯಾವ ಫಲವೂ ಬೇಡವೆನ್ನುವವನು ಯಾವನುತಾನೆ ಏತಕ್ಕೆ ಕರ್ಮವನ್ನು ಮಾಡಿಯಾನು?

ಹಾಗಾದರೆ ಫಲಾಭಿಲಾಷೆಯಿಲ್ಲದೆ ಕರ್ಮವನ್ನು ಮಾಡಬೇಕೆಂದು ಭಗವಂತನು ಮಾಡಿರುವ ಉಪದೇಶಕ್ಕೆ ಅರ್ಥವೇನು?– ಎಂದು ನೀವು ಕೇಳ ಬಹುದು. ಫಲಾಪೇಕ್ಷೆಯಿಂದಲಾದರೂ ಸತ್ಕರ್ಮವನ್ನು ಮಾಡುವದೇನೂ ತಪ್ಪಲ್ಲಷ್ಟೆ. ವೇದದಲ್ಲಿಯೂ ಕಾಮ್ಯಕರ್ಮಗಳನ್ನು ವಿಧಿಸಿರುವದು ಈ ಕಾರಣದಿಂದಲೇ. ಕಾಮ್ಯಕರ್ಮಗಳನ್ನು ಬಿಟ್ಟು ನಿತ್ಯಕರ್ಮಗಳನ್ನು ಮಾಡುತ್ತಿದ್ದರೂ ಅದಕ್ಕೂ ಫಲವಿಲ್ಲದೆ ಇರುವದಿಲ್ಲ. ತಮ್ಮತಮ್ಮ ವರ್ಣಕ್ಕೆ ವಿಧಿಸಿರುವ ಕರ್ಮವನ್ನು ಸರಿಯಾಗಿ ಮಾಡಿದರೆ ಸ್ವರ್ಗಪ್ರಾಪ್ತಿಯಾಗುವದು ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. 'ವರ್ಣಾ ಆಶ್ರಮಾಶ್ಚ ಸ್ವಕರ್ಮನಿಷ್ಠಾಃ ಪ್ರೇತ್ಯ ಕರ್ಮಫಲಮನುಭೂಯ ತತಃ ಶೇಷೇಣ ವಿಶಿಷ್ಟದೇಶಜಾತಿಕುಲಧರ್ಮಾಯುಃಶ್ರುತವೃತ್ತಸುಖಮೇಧಸೋ ಜನ್ಮ ಪ್ರತಿ ಪದ್ಯನ್ತೇ' ಎಂದು ಗೌತಮ ಧರ್ಮಸೂತ್ರದಲ್ಲಿದೆ. ಸ್ವಕರ್ಮನಿಷ್ಠರಾದವರು ಸತ್ತಬಳಿಕ ಪರಲೋಕದಲ್ಲಿ ಕರ್ಮಫಲವನ್ನು ಅನುಭವಿಸಿ ಆಮೇಲೆ ಉಳಿದ ಕರ್ಮದ ಫಲವಾಗಿ ಆಯಾ ದೇಶ, ಜಾತಿ, ಕುಲ, ಧರ್ಮ, ಆಯುಸ್ಸು, ಶಾಸ್ತ್ರಜ್ಞಾನ, ನಡತೆ, ಧನ, ಸುಖ, ಮೇಧಾಶಕ್ತಿ– ಇವುಗಳಿಂದೊಡಗೂಡಿ ಮತ್ತೊಂದು ಜನ್ಮವನ್ನು ಹೊಂದುತ್ತಾರೆ ಎಂಬುದು ಸೂತ್ರದ ಅರ್ಥ. ಆದರೆ ಮುಮುಕ್ಷುಗಳಾದವರಿಗೆ ಅನಿತ್ಯವಾದ ಕರ್ಮಫಲವು ಬೇಡವಾಗಿರುತ್ತದೆ. ಹಡಗಿನ ವ್ಯಾಪಾರವನ್ನು ಮಾಡು ವವನು ಹುಲ್ಲಿನ ವ್ಯಾಪಾರವನ್ನು ಕಡೆಗಣಿಸುವಂತೆ ಅವರು ತಾವು ಮಾಡುವ ನಿತ್ಯಕರ್ಮಗಳನ್ನು ಪರಮೇಶ್ವರನ ಆರಾಧನೆ ಎಂದು ಮಾಡುತ್ತಾರೆ. ''ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಮ್ । ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿನ್ದತಿ ಮಾನವಃ ॥'' ಯಾವ ಅಂತರ್ಯಾಮಿಯಾದ ಈಶ್ವರನಿಂದಲೇ ಸರ್ವ ಪ್ರಾಣಿಗಳೂ ತಮ್ಮತಮ್ಮ ವ್ಯಾಪಾರಮಾಡುತ್ತಿರುವರೋ, ಯಾವಾತನೇ ಎಲ್ಲ ವನ್ನೂ ವ್ಯಾಪಿಸಿಕೊಂಡಿರುವನೋ, ಆ ಭಗವಂತನನ್ನು ಸ್ವಕರ್ಮದಿಂದ ಅಭ್ಯರ್ಚನ ಮಾಡಿದರೆ ಮಾನವನಿಗೆ ಜ್ಞಾನಕ್ಕೆ

ತಕ್ಕ ಯೋಗ್ಯತೆ ಎಂಬ ಸಿದ್ಧಿಯು ದೊರಕುವದು.

ಹೀಗೆ ಸಂಗತ್ಯಾಗ, ದ್ವಂದ್ವಪ್ರಹಾಣ, ಫಲಾಭಿಸಂಧಿರಾಹಿತ್ಯ, ಕರ್ಮದಿಂದ ಈಶ್ವರನ ಅರ್ಚನೆ– ಎಂಬ ಈ ನಾಲ್ಕು ಅಂಗಗಳಿಂದ ಕೂಡಿದಾಗ ಕರ್ಮವು ಕರ್ಮಯೋಗವೆನಿಸುವದು. ಆಗ ಕರ್ಮವು ಬಂಧಕವಾಗುವ ದಿಲ್ಲ. ಕರ್ಮಯೋಗ ಬುದ್ಧಿಯಿಂದ ಕೂಡಿದ್ದರೆ 'ಕರ್ಮಬನ್ಧಂ ಪ್ರಹಾಸ್ಯಸಿ' ಕರ್ಮದ ಕಟ್ಟನ್ನು ಕಳಚಿಕೊಳ್ಳುವೆ – ಎಂದು ಭಗವಂತನು ಉಪದೇಶಿಸಿರುತ್ತಾನೆ.

ಭಗವದ್ಗೀತೆಯಲ್ಲಿ ಹೇಳಿರುವದು ಶಾಸ್ತ್ರೋಕ್ತವಾದ ಕರ್ಮವನ್ನೇ ಎಂಬುದರಲ್ಲಿ ಸಂಶಯವಿಲ್ಲ. ಈ ವಿಷಯವನ್ನು ಆಗಲೆ ಒಂದು ಕಡೆ ಪ್ರಸ್ತಾಪಿಸಿ ವಿವರಿಸಿರುತ್ತೇನೆ. ಈಗ ನಾವುಗಳು ಶಾಸ್ತ್ರೋಕ್ತಕರ್ಮಗಳನ್ನು ಬಿಟ್ಟು ದೂರಸರಿದಿದ್ದೇವೆ. ಅಗ್ನಿಹೋತ್ರ, ದರ್ಶಪೂರ್ಣಮಾಸ, ಚಾತುರ್ಮಾಸ್ಯಾದಿ ಗಳು, ಸಾರ್ವತ್ರಿಕಕರ್ಮವೆಂದು ಯಾರೂ ಹೇಳುವಹಾಗೂ ಇಲ್ಲ. ಬ್ರಾಹ್ಮಣಾದಿಗಳಿಗೆಂದು ಗೀತೆಯಲ್ಲಿ ಹೇಳಿರುವ ಕರ್ಮಗಳೂ ಯಜ್ಞದಾನ ತಪಸ್ಸುಗಳೂ ಸದ್ಯಕ್ಕೆ ಬಹಳ ಅಲ್ಪಪ್ರಮಾಣದಲ್ಲಿ ಹೇಗೋ ಅಲ್ಲಲ್ಲಿ ಒಂದಿಷ್ಟು ಕೆಲವರಿಗೆ ಅಂಟಿಕೊಂಡಿರಬಹುದು. ಹೀಗಿದ್ದರೂ ಕರ್ಮಯೋಗದ ತತ್ತ್ವವೇನೂ ಬದಲಾಯಿಸುವಂತಿಲ್ಲ. ಅದು ಸರ್ವಕಾಲಕ್ಕೂ ಸರ್ವರಿಗೂ ಅನ್ವಯಿಸುವಂತೆ ಇದೆ. ವೈದಿಕಕರ್ಮಗಳನ್ನು ಮಾಡದೆ ಲೌಕಿಕಕರ್ಮಗಳನ್ನು ಮಾಡುವವರು ಕೂಡ ಈ ಕರ್ಮಯೋಗದ ತತ್ತ್ವವನ್ನು ಅನುಸರಿಸುವದಕ್ಕೆ ಬರುತ್ತದೆ. ಇತ್ತಕಡೆಗೆ ನಾವು ಮನಸ್ಸನ್ನು ಹೊರಳಿಸಬೇಕು.

ವೇದಾಂತದ ದೊಡ್ಡದೊಡ್ಡ ಮಾತುಗಳನ್ನು ಆಡುವವರು ಹಲವರು ಸಿಕ್ಕುತ್ತಾರೆ. ಆದರೆ ಅದಕ್ಕಾಗಿ ಸಾಧನಗಳನ್ನು ಮಾಡುವದಕ್ಕೆ ಸಿದ್ಧರಾಗಿರು ವವರು ಬಹಳ ಕಡಿಮೆ. ಸಾಧುಗಳು, ಸಂನ್ಯಾಸಿಗಳು ಎನ್ನಿಸಿಕೊಳ್ಳುವದಕ್ಕೆ ಆಶೆಯಿರುವವರು ಹೆಚ್ಚು ಜನರಿರಬಹುದು. ಆದರೆ ನಿಜವಾದ ಸಾಧುಗಳ ಅಥವಾ ಸಂನ್ಯಾಸಿಗಳ ಲಕ್ಷಣವನ್ನುಳ್ಳವರಾಗಲಿ, ಅವರ ಸ್ಥಿತಿಗೆ ಏರುವದಕ್ಕೆ ಮಾಡಬೇಕಾದ ಸಾಧನಗಳನ್ನು ಮಾಡುವದಕ್ಕೆ ಸಿದ್ಧರಾಗಿರುವವರಾಗಲಿ ಬಹಳ ವಿರಳ. ಬ್ರಾಹ್ಮಣರೆಂದು ಹೆಮ್ಮೆಯನ್ನು ತಳೆಯುವವರು ಹಲವುಮಂದಿ ಸಿಕ್ಕಬಹುದು; ಆದರೆ ನಿಜವಾದ ಬ್ರಾಹ್ಮಣನ ಸ್ವಾರ್ಥತ್ಯಾಗ, ಕರ್ತವ್ಯನಿಷ್ಠೆ

ಕಷ್ಟಸಹಿಷ್ಣುತೆ, ಶಾಸ್ತ್ರಗುರುಗಳಲ್ಲಿ ಶ್ರದ್ಧೆ, ಪಾಪಭೀತಿ- ಇವೇ ಮುಂತಾದವುಗಳನ್ನು ಅಳವಡಿಸಿಕೊಳ್ಳುವದಕ್ಕೆ ಪ್ರಯತ್ನಿಸುವವರು ಬಹಳ ಕಡಿಮೆಯೇ ಸರಿ. ಹೀಗೆಯೇ ಭಗವದ್ಗೀತೆಯ ವಿಚಾರವಾಗಿ ಶ್ಲೋಕಗಳನ್ನು ಉದಾಹರಿಸಿ ವ್ಯಾಖ್ಯಾನಮಾಡುವದಕ್ಕೆ ಸಿದ್ಧರಾಗಿರುವವರಿಗೇನೂ ಕಡಿಮೆಯಿಲ್ಲ. ಆದರೆ ಆ ಸದ್ಗ್ರಂಥದಲ್ಲಿ ಉಪದಿಷ್ಟವಾಗಿರುವ ಕರ್ಮಯೋಗದ ತತ್ತ್ವವನ್ನು ಅರಿತು ಆಚರಣೆಗೆ ತರುವದಕ್ಕೆ ಪ್ರಯತ್ನಿಸುವ ಮಹಾಶಯರ ಸಂಖ್ಯೆಯೇನೂ ಹೆಚ್ಚಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಕರ್ಮಯೋಗದಲ್ಲಿ ಸಂಗತ್ಯಾಗ, ಫಲತ್ಯಾಗ – ಇವೆರಡೂ ಬಹಳ ಕಷ್ಟಸಾಧ್ಯವೆಂದು ನಮಗೆ ಕಾಣಿಸುತ್ತಿವೆ. ಆದರೂ ಭಗವಂತನಿಗೆ ಕರ್ಮವನ್ನು ಸಮರ್ಪಣೆಮಾಡುವ ಅಭ್ಯಾಸವನ್ನು ಮಾಡಿಕೊಂಡವರಿಗೆ ಇದು ಸುಲಭವಾಗಿ ಅಳವಡುತ್ತದೆ. ಹಾಗಲುಕಾಯಿ ಮುಂತಾದ ಕೆಲವು ತರಕಾರಿಯ ಕಾಯಿಗಳನ್ನು ಕಹಿತೆಗೆದು ಉಪಯೋಗಿಸುವ ಜಾಣತನವನ್ನು ಸಂಪಾದಿ ಸುವದು ಹೇಗೆ ಅವಶ್ಯವೋ ಹಾಗೆ ಸಂಗಫಲೇಚ್ಛೆಗಳನ್ನು ತೆಗೆದುಹಾಕಿ ಕರ್ಮವನ್ನು ಮಾಡುವ ಕೌಶಲವನ್ನು ಕಲಿತುಕೊಳ್ಳುವದು ಕರ್ಮಬಂಧದಿಂದ ಬಿಡುಗಡೆಯಾಗುವದಕ್ಕೆ ಅವಶ್ಯವಾಗುತ್ತದೆ. ಈ ಕೌಶಲವು ಕರ್ಮವನ್ನು ಪರಮೇಶ್ವರನ ಅರ್ಚನೆಯಾಗಿ ಮಾಡುವದರಿಂದ ನಮಗೆ ಸುಲಭವಾಗಿ ದೊರಕುತ್ತದೆ. ಅಲ್ಲಿ ಇಲ್ಲಿ ಕಷ್ಟದಿಂದ ಹೂಹಣ್ಣುಕಾಯಿಗಳನ್ನು ತಂದು ಮಾಡುವ ಈಶ್ವರಪೂಜೆಗಿಂತಲೂ ಸ್ವಕರ್ಮವನ್ನೇ ಈಶ್ವರಾರ್ಚನೆಯ ಸಾಧನವಾಗಿ ಮಾಡಿಕೊಳ್ಳುವದು ಹೆಚ್ಚಿನ ಸಾಧನವಾಗಿರುತ್ತದೆ. ನಾವು ಮಾಡುವ ಕರ್ಮವೆಲ್ಲವೂ ನಿಜವಾಗಿ ಆ ಭಗವಂತನ ಅನುಗ್ರಹದಿಂದಲೇ ಸಾಗುತ್ತಿರುತ್ತದೆ. ನಮ್ಮ ಶರೀರ, ಇಂದ್ರಿಯ, ಮನಸ್ಸು, ಬುದ್ಧಿ- ಇವುಗಳೆಲ್ಲವೂ ಆತನ ವರವೇ ಆಗಿದೆ. ಹೀಗಿರುವಲ್ಲಿ ಈ ಕರ್ಮವು ನನ್ನದು ಎಂದು ಹೆಮ್ಮೆಪಡುವದಕ್ಕೆ ಅವಕಾಶವೆಲ್ಲಿದೆ? ನಾವು ಮಾಡುವ ಪ್ರತಿಯೊಂದು ಕರ್ಮದಲ್ಲಿಯೂ ಆ ಭಗವಂತನ ಸಂನಿಧಿಯನ್ನು ಕಂಡುಕೊಂಡು, ಅದನ್ನು ಆತನಿಗೇ ಸಮರ್ಪಣೆ ಮಾಡಿಬಿಡಬಹುದು. ಕರ್ಮಯೋಗದ ಕೊನೆಯ ಗುರಿಯು ಇದೇ ಆಗಿರುತ್ತದೆ.

*****

# 9. ಧ್ಯಾನಯೋಗ

ಕರ್ಮಯೋಗದ ಲಕ್ಷ್ಯವು ಏತರಲ್ಲಿದೆ ಎಂಬುದನ್ನು ನಿನ್ನೆ ತಿಳಿಸಿರುತ್ತೇನೆ. ಯಾರಿಗೆ ನಿಷ್ಕ್ರಿಯನಾದ ಪರಮಾತ್ಮನಲ್ಲಿ ಆತ್ಮಭಾವವಿಲ್ಲವೋ, ಯಾರು ಕರ್ತೃತ್ವಬುದ್ಧಿಯಿಂದಲೇ ಕೂಡಿರುವರೋ ಅಂಥವರಿಗಾಗಿ ಕರ್ಮಯೋಗವನ್ನೂ ಕರ್ಮ ಸಂನ್ಯಾಸವನ್ನೂ ಚಿತ್ತಸ್ಥಿತಿಯ ತಾರತಮ್ಯದಿಂದ ತಿಳಿಸಿರುತ್ತದೆ. ಸಾಮಾನ್ಯವಾಗಿ ಕರ್ಮ ಸಂನ್ಯಾಸವು ಕಷ್ಟಕರವಾಗಿರುವದರಿಂದ ಅದಕ್ಕಿಂತಲೂ ಕರ್ಮಯೋಗವೇ ಸಾಧಕರಿಗೆ ಒಳ್ಳೆಯದು ಎಂದು ಭಗವಂತನು ಹೇಳಿರುತ್ತಾನೆ, ಎಂಬುದನ್ನೂ ತಿಳಿಸಿದ್ದಾಗಿದೆ.

ಗೀತೆಯು ಯೋಗಶಾಸ್ತ್ರವೆಂದು ಪ್ರಸಿದ್ಧವಾಗಿದೆ. ಗೀತೆಯಲ್ಲಿ ಯೋಗಶಬ್ದಕ್ಕೆ ಯಾವದು ಮುಖ್ಯಾರ್ಥವೆಂದು ಸಂಮತವಾಗಿದೆ ಎಂಬ ವಿಷಯದಲ್ಲಿ ಮತಭೇದವುಂಟು. ಕೆಲವರು ಕರ್ಮಯೋಗವೇ ನಿಜವಾದ ಗೀತಾಸಂಮತಯೋಗವೆನ್ನುವರು. ಹೀಗೆಯೇ ಧ್ಯಾನಯೋಗ, ಭಕ್ತಿಯೋಗ–ಇವುಗಳಲ್ಲಿಯೇ ಗೀತೆಗೆ ತಾತ್ಪರ್ಯವೆಂದು ಕಲ್ಪಿಸುವವರೇನೂ ಕಡಿಮೆಯ ಸಂಖ್ಯೆಯವರಿಲ್ಲ. ಶ್ರೀ ಶಂಕರಾಚಾರ್ಯರ ಅಭಿಪ್ರಾಯದಲ್ಲಿ ಕರ್ಮಯೋಗ ವೆಂಬ ಉಪಾಯದಿಂದ ಸಂನ್ಯಾಸಪೂರ್ವಕವಾಗಿ ಪಡೆದುಕೊಳ್ಳಬೇಕಾಗಿರುವ ಜ್ಞಾನನಿಷ್ಠೆಯೇ ಯೋಗವು. ಗೀತೆಯ ಎರಡು ಮೂರನೆಯ ಅಧ್ಯಾಯಗಳಲ್ಲಿ ಈ ಯೋಗವನ್ನೇ ತಾತ್ಪರ್ಯದಿಂದ ಹೇಳಿರುತ್ತದೆ. ಸಕಲವೇದಾರ್ಥದ ಸಾರವೇ ಇದು. ''ಈ ಅವ್ಯಯವಾದ ಯೋಗವನ್ನು ನಾನು ಹಿಂದೆ ವಿವಸ್ವಂತನಿಗೆ ಹೇಳಿದ್ದೆನು. ವಿವಸ್ವಂತನು ಮನುವಿಗೂ ಮನುವು ಇಕ್ಷ್ವಾಕುವಿಗೂ ಹೇಳಿದನು'' ಎಂದು ಭಗವಂತನು ಆಚಾರ್ಯಪರಂಪರೆ ಯನ್ನು ಹೇಳಿ ಹೊಗಳಿರುವ ಯೋಗವು ಇದೇ. ಜ್ಞಾನದಲ್ಲಿಯೇ ಗೀತೆಗೆ ಪರಮತಾತ್ಪರ್ಯವಿದೆ ಎಂಬುದಕ್ಕೆ ಆಧಾರವನ್ನು ನಾನು ಆಗಲೆ ತೋರಿಸಿರುತ್ತೇನಾದ್ದರಿಂದ ಆ ವಿಷಯದಲ್ಲಿ ಹೆಚ್ಚಾಗಿ ತಿಳಿಸಬೇಕಾದದ್ದೇನೂ ಉಳಿದಿರುವದಿಲ್ಲ.

ಆದರೆ ಕೆಲವರು 'ಇದು ಇಕ್ಷ್ವಾಕುವೇ ಮುಂತಾದ ಕ್ಷತ್ರಿಯರಿಗೆ ಹೇಳಿದ ಕರ್ಮಯೋಗಶಾಸ್ತ್ರವೆಂಬ ಭಾಗವತಮತವಾಗಿರುತ್ತದೆ. ಇದರಲ್ಲಿ

ಸಂನ್ಯಾಸವನ್ನು ಈಚೆನವರು ಕೂಡಿಸಿ ಹೇಳುತ್ತಿದಾರೆ' ಎಂದು ವಾದಿಸತೊಡಗಿರುತ್ತಾರೆ. ಈ ವಾದವು ಸರಿಯಲ್ಲ. ಏಕೆಂದರೆ ಗೀತೆಯನ್ನು ರಾಜರಿಗೆಂದು ಮೀಸಲಾಗಿ ಹೇಳಿಲ್ಲ, ಇದನ್ನು ರಾಜರ್ಷಿಗಳಿಗೆ ಹೇಳಿರುತ್ತದೆ. 'ಏವಂ ಪರಂಪರಾಪ್ರಾಪ್ತಮಿಮಂ ರಾಜರ್ಷಯೋವಿದುಃ ।' (4-2) ಎಂದು ಭಗವಂತನೇ ಹೇಳಿರುತ್ತಾನೆ. ರಾಜರ್ಷಿಗಳಿಗೆ ಧರ್ಮದಲ್ಲಿಯೇ ದೃಷ್ಟಿ, ರಾಜ್ಯದಲ್ಲಲ್ಲ. ಧರ್ಮಕ್ಕಾಗಿ, ಧರ್ಮಕ್ಕೆ ಅವಿರುದ್ಧವಾಗಿ, ರಾಜ್ಯವನ್ನು ಆಳುವದು ರಾಜರ ಧರ್ಮ. ಹಿಂದೆ ಒಂದು ಲೋಕದಲ್ಲಿ ಅರಾಜಕವಾಗಿ ಎಲ್ಲೆಲ್ಲಿಯೂ ಗಲಭೆಯಿದ್ದಿರಲು ಪ್ರಜೆಗಳ ಮುಖಂಡರು ಬ್ರಹ್ಮನ ಅಪ್ಪಣೆ ಯಂತೆ ಮನುವಿನ ಬಳಿಗೆ ಬಂದು 'ನೀನು ನಮಗೆಲ್ಲ ಸಂಮತನಾಗಿರುವ ರಾಜನು; ನೀನು ಧರ್ಮಶಾಸ್ತ್ರಕ್ಕೆ ಅನುಗುಣವಾಗಿ ನಡೆದುಕೊಂಡು ನಮ್ಮೆಲ್ಲರನ್ನೂ ಕಾಪಾಡಬೇಕು' ಎಂದು ಕೇಳಿಕೊಂಡರಂತೆ. ಆದರೆ ಮನುವು 'ಮನುಷ್ಯರು ಮಿಥ್ಯಾಚಾರರಾಗಿರುವಲ್ಲಿ ಪಾಪಘಟನೆಯಿಲ್ಲದೆ ರಾಜ್ಯ ವನ್ನು ನಡೆಯಿಸುವದು ಎಂದಿಗೂ ಆಗಲಾರದು; ಆದ್ದರಿಂದ ನನಗೆ ರಾಜ್ಯವೆಂದರೆ ಅಂಜಿಕೆ' ಎಂದನಂತೆ. 'ನಾವು ಧರ್ಮಾನುಸಾರವಾಗಿಯೇ ನಡೆಯುತ್ತಿರುವೆವು; ನಮ್ಮ ಪಾಪಕ್ಕೆ ನೀನು ಹೊಣೆಯಲ್ಲ ; ನಮ್ಮ ಪುಣ್ಯದಲ್ಲಿ ಚತುರ್ಥಾಂಶವನ್ನು ನಿನಗೆ ಧಾರೆಯೆರೆಯುತ್ತೇವೆ' ಎಂದು ಪ್ರಜೆಗಳು ವಾಗ್ದಾನಮಾಡಿದಮೇಲೆ ಮನುವು ರಾಜ್ಯವನ್ನಾಳುವದಕ್ಕೆ ಒಪ್ಪಿಕೊಂಡನಂತೆ. 'ರಾಜರ್ಷಿಗಳಾದವರಿಗೆ ಪರಮಾರ್ಥಯೋಗದ ಬಲವಿದ್ದರೆ ಅವರು ಬ್ರಾಹ್ಮಣ್ಯವನ್ನು ಕಾಪಾಡಬಲ್ಲರು; ಬ್ರಹ್ಮಕ್ಷತ್ರಗಳೆರಡೂ ರಕ್ಷಿತವಾದರೆ ಜಗತ್ತನ್ನೇ ಕಾಪಾಡುವದಕ್ಕೆ ಅವು ಸಮರ್ಥವಾಗುವವು' ಎಂದು ಆಚಾರ್ಯರು ಗೀತಾಭಾಷ್ಯದಲ್ಲಿ ಬರೆದಿರು ತ್ತಾರೆ. ಹೀಗೆ ಜ್ಞಾನದಲ್ಲಿ ಎಲ್ಲರಿಗೂ ಅಧಿಕಾರವಿದ್ದರೂ ಕ್ಷತ್ರಿಯರಿಗೆ ಧರ್ಮ ರಕ್ಷಣೆಯಲ್ಲಿ ಸಾಮರ್ಥ್ಯವನ್ನುಂಟು ಮಾಡುವದಕ್ಕಾಗಿ ಈ ಜ್ಞಾನವನ್ನು ಭಗವಂತನು ಕ್ಷತ್ರಿಯರಿಗೆ ಹೇಳಿದ್ದನು. ಆ ಯೋಗವು ದೀರ್ಘಕಾಲವಾದ ಬಳಿಕ ಅನುಷ್ಠಾತೃಗಳು ಅಜಿತೇಂದ್ರಿಯರಾದ್ದರಿಂದ ನಷ್ಟವಾಯಿತು. ಮತ್ತೆ ಆ ಸಂಪ್ರದಾಯವನ್ನು ಮುಂದುವರಿಸುವದಕ್ಕಾಗಿ ಭಗವಂತನು ಅರ್ಜುನನಿಗೆ ಅದನ್ನು ಹೇಳಿದನು. ರಾಜಕೀಯಶಾಸನದಲ್ಲಿ ಪ್ರಜಾಮಾತ್ರಕ್ಕೆ ಬೇಕಾದ ಹಕ್ಕುಗಳನ್ನೂ ಹೊಣೆಗಾರಿಕೆಯನ್ನೂ ವಿವರಿಸಿರುತ್ತಾರೆ; ಆದರೆ ಅದರಲ್ಲಿರುವ

ದೆಲ್ಲವೂ ಪ್ರತಿಯೊಬ್ಬನಿಗೂ ಅನ್ವಯಿಸುವದೆಂದು ನಾವು ಯಾರೂ ತಿಳಿಯುವದಿಲ್ಲವಷ್ಟೆ? ಇದರಿಂದ ಗೀತೋಕ್ತಧರ್ಮವು ಅರ್ಜುನಿಗೆ ಉಪದಿಷ್ಟವಾದ್ದರಿಂದ ಅದೆಲ್ಲವೂ ಕ್ಷತ್ರಿಯರಿಗೇ ಅನ್ವಯಿಸುತ್ತದೆ ಎಂದು ತಿಳಿಯುವದಕ್ಕೆ ಯಾವ ಕಾರಣವೂ ಇರುವದಿಲ್ಲ. ಗ್ರಂಥವನ್ನುಪೂರ್ಣವಾಗಿ ಓದಿ ಪ್ರಮಾಣಾನುಸಾರವಾಗಿ ಅರ್ಥವನ್ನು ಕಲ್ಪಿಸುವದೇ ಯುಕ್ತವಾಗಿದೆ.

ಪ್ರಸಂಗದಿಂದ ಬಂದ ಈ ವಿಷಯವಂತಿರಲಿ. ಭಗವಂತನು ಹೇಳಿದ ಆಚಾರ್ಯವಂಶಕ್ರಮವನ್ನು ಕೇಳಿ ಅರ್ಜುನನಿಗೆ ಒಂದು ಸಂಶಯವು ಬಂದಿತು. ವಿವಸ್ವಂತನೆಂದರೆ ಆದಿತ್ಯನು; ಅವನು ಸೃಷ್ಟಿಯ ಆದಿಯಲ್ಲಿ ಹುಟ್ಟಿದವನು. ಶ್ರೀಕೃಷ್ಣನು ಈಚೆಗೆ ವಸುದೇವನ ಮನೆಯಲ್ಲಿ ಹುಟ್ಟಿದವನು. ಹೀಗಿರುವಲ್ಲಿ ಹಿಂದೆ ಸೂರ್ಯನಿಗೆ ಇದೇ ಯೋಗವನ್ನು ತಾನು ಹೇಳಿದೆನೆಂದು ಕೃಷ್ಣನು ಹೇಳಿದ್ದು ಹೇಗೆ? ಈ ಸಂಶಯವನ್ನು ಬರಿಯ ಕುಚೋದ್ಯ ಪರಿಹಾರಕ್ಕಾಗಿ ಗೀತೆಯಲ್ಲಿ ಸೇರಿಸಿಲ್ಲ. ಭಗವಂತನ ಪರಮಾರ್ಥಸ್ವರೂಪವನ್ನು ತಿಳಿಸಿಕೊಡುವದಕ್ಕೆ ಈ ಪ್ರಶ್ನೆಯನ್ನು ನೆವಮಾಡಿಕೊಂಡಿರುತ್ತದೆ. ಭಗವಂತನು ನಮ್ಮೆಲ್ಲರಿಗೂ ಆತ್ಮನು; ಆ ಪರಮಾತ್ಮನ ಸ್ವರೂಪವನ್ನು ಅರಿತುಕೊಳ್ಳುವದೇ ನಮ್ಮೆಲ್ಲರಿಗೂ ಪರಮಪುರುಷಾರ್ಥಕ್ಕೆ ಕಾರಣವಾಗಿರುತ್ತದೆ. ಇದನ್ನು ಶ್ರೀಕೃಷ್ಣನು ಅರ್ಜುನನಿಗೆ ತಿಳಿಯಪಡಿಸಿರುವದು ಹೇಗೆಂಬುದನ್ನು ನಾವು ಮನದಂದುಕೊಳ್ಳೋಣ: ''ಅರ್ಜುನನೆ, ನನಗೂ ನಿನಗೂ ಬಹಳ ಜನ್ಮಗಳು ಆಗಿಹೋಗಿವೆ; ಆದರೆ ನಾನು ಅವುಗಳೆಲ್ಲವನ್ನೂ ಅರಿತುಕೊಂಡಿರುವೆನು. ನೀನು ಅರಿಯೆ. 'ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್। ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥' ನಾನು ಜನ್ಮರಹಿತನೂ ಅವ್ಯಯಸ್ವಭಾವನೂ ಭೂತಗಳಿಗೆಲ್ಲ ಈಶ್ವರನೂ ಆಗಿದ್ದರೂ ನನ್ನ ಪ್ರಕೃತಿಯನ್ನು ವಶದಲ್ಲಿಟ್ಟುಕೊಂಡು ನನ್ನ ಮಾಯೆಯಿಂದ ಹುಟ್ಟುತ್ತಿರುವೆನು''– ಎಂದು ಈ ಶ್ಲೋಕದ ಅರ್ಥ. ಭಗವದ್ಗೀತೆಯಲ್ಲಿ 'ಅವತಾರ' ಎಂಬ ಶಬ್ದವೇ ಇಲ್ಲ; ಭಗವಂತನ ಜನ್ಮವನ್ನು ''ದಿವ್ಯಜನ್ಮ'' ವೆಂದು ಮಾತ್ರ ಕರೆದಿದೆ. ಇದರ ಮೇಲಿನ ಅವತಾರ ಶಬ್ದಪ್ರಯೋಗದ ಇತಿಹಾಸವನ್ನು ಪುರಾತತ್ತ್ವ ಶೋಧಕರು ಕಂಡುಹಿಡಿಯಬೇಕಾಗಿದೆ. ಇದು ಪ್ರಕೃತದ ನಮ್ಮ ವಿಚಾರಕ್ಕೆ ಸಂಬಂಧಿಸಿಲ್ಲವಾದ್ದರಿಂದ ಇದನ್ನು ಇಲ್ಲಿಗೇ ಬಿಟ್ಟುಬಿಡುತ್ತೇನೆ. ಭಗವಂತನು

ತನಗೂ ಜನ್ಮಗಳುಂಟೆಂಬುದನ್ನು ಇಲ್ಲಿ ಹೇಳಿರುತ್ತಾನೆ. ಆದರೆ ಆ ಜನ್ಮಗಳು ಮಾಯೆಯಿಂದಾದವುಗಳು; ನಿಜವಲ್ಲ. ಅವನು ನಮ್ಮಂತೆ ಪ್ರಕೃತಿವಶನಾಗಿ ಕರ್ಮದ ಫಲವನ್ನು ಮೆಲ್ಲುವದಕ್ಕೆಂದು ಶರೀರ ಧಾರಣೆಯನ್ನು ಮಾಡುವದಿಲ್ಲ. ಸ್ವತಂತ್ರನಾಗಿ ತನ್ನ ವೈಷ್ಣವೀಪ್ರಕೃತಿಯನ್ನು ವಶದಲ್ಲಿಟ್ಟು ಕೊಂಡೇ ತನ್ನನ್ನು ತಾನೇ ಹುಟ್ಟಿದವನಂತೆ ತೋರಿಸಿಕೊಳ್ಳುತ್ತಾನೆ; ಆದ್ದರಿಂದ ಅವನಿಗೆ ಜನ್ಮತಃದುಃಖವಿಲ್ಲ. ಆತನು ಅಳುತ್ತಾ ಹುಟ್ಟಿ, ಅಳುತ್ತಾ ಸಾಯುವ ಜೀವರಂತೆ ಅಲ್ಲ, ಆತನು. ಹುಟ್ಟಿನಿಂದ ನಮ್ಮ ನಮ್ಮ ಕರ್ಮಕ್ಕೆ ಅನುಗುಣವಾದ ಒಳ್ಳೆಯ ಫಲಗಳೂ ಕೆಟ್ಟ ಫಲಗಳೂ ನಮಗೂ ಇತರರಿಗೂ ಆಗುತ್ತಿರುವವು. ಆದರೆ ಭಗವಂತನ ಅನಂತಜನ್ಮಗಳಿಂದ ಅವನಿಗೆ ಯಾವ ಪುಣ್ಯಪಾಪಫಲಗಳ ಲೇಪವೂ ಇಲ್ಲ. ಭಗವಂತನ ಈ ಬಗೆಯ ಜನ್ಮಕರ್ಮಗಳನ್ನು ಅರಿತು ಕೊಂಡವನಿಗೆ ಈ ಫಲವನ್ನು ಹೇಳಲಾಗಿದೆ:

ಜನ್ಮ ಕರ್ಮ ಚ ಮೇ ದಿವ್ಯಮೇವಂ ಯೋ ವೇತ್ತಿ ತತ್ತ್ವತಃ ।
ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ ॥ (4-9)

ಅರ್ಜುನನೆ, ನನ್ನ ಈ ದಿವ್ಯವಾದ ಜನ್ಮವನ್ನೂ ಕರ್ಮವನ್ನೂ ತತ್ತ್ವ ದೃಷ್ಟಿಯಿಂದ ಯಾವನು ಅರಿತುಕೊಳ್ಳುವನೋ ಅವನಿಗೆ ಇನ್ನುಮುಂದೆ ಪುನರ್ಜನ್ಮವಾಗುವದಿಲ್ಲ. ಅವನು ಭಗವಂತನನ್ನೇ ಸೇರುತ್ತಾನೆ. ಇದು ಶ್ಲೋಕದ ಅರ್ಥ. ಇದು ಹೇಗಾದೀತು? ಭಗವಂತನ ಜನ್ಮವೂ ಕರ್ಮವೂ ಹೀಗೆ ದಿವ್ಯವೆಂದು ಅರಿತು ಕೊಂಡವನಿಗೆ ಪುನರ್ಜನ್ಮವಿಲ್ಲವೆಂಬುದೇಕೆ?– ಎಂದು ಯಾರಿಗಾದರೂ ಶಂಕೆಯಾಗಬಹುದು. ಆದರೆ ಶಂಕರಾಚಾರ್ಯರ ಸಿದ್ಧಾಂತ ದಲ್ಲಿ ಇದಕ್ಕೆ ಅತ್ಯಂತ ಯುಕ್ತಿಸಮರ್ಪಕವಾದ ಉತ್ತರವು ದೊರೆಯುತ್ತದೆ. ಶ್ರೀಕೃಷ್ಣನು ಮೊಟ್ಟಮೊದಲೇ ಅರ್ಜುನನಿಗೆ ಉಪದೇಶಿಸುವದಕ್ಕೆ ಹೊರಟಿರುವ ಮಾತಿದು:

ನ ತ್ವೇವಾಹಂ ಜಾತು ನಾಶಂ ನ ತ್ವಂ ನೇಮೇ ಜನಾಧಿಪಾಃ ।
ನ ಚೈವ ನ ಭವಿಷ್ಯಾಮಃ ಸರ್ವೇ ವಯಮತಃ ಪರಮ್ ॥

ಪರಮಾತ್ಮನೊಬ್ಬನಿಗೇ ಅಲ್ಲ, ಮಿಕ್ಕವರು ಯಾರಿಗೂ ಜನ್ಮಮರಣ ಗಳು ಇಲ್ಲವೇ ಇಲ್ಲ. 'ನ ಜಾಯತೇ ಮ್ರಿಯತೇ ವಾ ಕದಾಚಿತ್' ಎಂದಿಗೂ

ಹುಟ್ಟುವದಿಲ್ಲ, ಸಾಯುವದಿಲ್ಲ- ಎಂಬುದು ಆತ್ಮನ ಸ್ವಾಭಾವಿಕಧರ್ಮವು. ಈ ಆತ್ಮನು ಎಲ್ಲರಿಗೂ ಆತ್ಮನಾಗಿರುವ ಭಗವಂತನೇ ಆಗಿರುತ್ತಾನೆ. ಹೀಗಿರುವದರಿಂದ ನಮ್ಮಗಳ ಆತ್ಮನಿಗೆ ಜನನಮರಣಗಳಿಲ್ಲ- ಎಂದು ಯಾವನು ತಿಳಿದುಕೊಂಡರೂ ಅವನಿಗೆ ಜನನಮರಣಗಳಿಂದ ಮುಕ್ತಿಯಾಗುವದೆಂಬುದು ಸ್ವಾಭಾವಿಕವಾಗಿದೆ. ಈ ಜ್ಞಾನವನ್ನು ಹೊಂದಿ ಜ್ಞಾನನಿಷ್ಠೆಯಲ್ಲಿ ನೆಲೆನಿಲ್ಲುವದೇ ಪರಮಪುರುಷಾರ್ಥವು. ಈ ಪರಮಪುರುಷಾರ್ಥಕ್ಕೆ ಸಾಧನವಾಗಿಯೇ ಕರ್ಮಯೋಗವನ್ನು ಗೀತೆಯಲ್ಲಿ ಉಪದೇಶಿಸಿದೆ ಎಂದು ನಾವು ಆಗಲೆ ಕಂಡುಕೊಂಡದ್ದಾಗಿದೆ.

ಜ್ಞಾನನಿಷ್ಠೆಯನ್ನೇ ಭಗವದ್ಗೀತೆಯಲ್ಲಿ ಮುಖ್ಯಾರ್ಥದಲ್ಲಿ ಯೋಗವೆಂದು ಕರೆದಿದೆ ಎಂಬುದನ್ನು ಉಪಪಾದನೆಮಾಡಿದ್ದಾಯಿತು. ಆ ಯೋಗಕ್ಕೆ ಸಾಧನವಾಗಿರುವದರಿಂದ ಗೌಣಾರ್ಥದಲ್ಲಿ ಕರ್ಮಯೋಗವೂ ಧ್ಯಾನಯೋಗವೂ ಯೋಗವೆನಿಸಿಕೊಳ್ಳುತ್ತವೆ. ಅಷ್ಟೆ. ಈಗ ನಾನು ಕರ್ಮಯೋಗಕ್ಕೂ ಧ್ಯಾನಯೋಗಕ್ಕೂ ಇರುವ ಸಂಬಂಧವನ್ನು ಕುರಿತು ಮಾತನಾಡಲಿರುವೆನು. ಆದರೆ ಇದಕ್ಕೆ ಮುಂಚೆ ಗೀತೆಯಲ್ಲಿ ಉಪದಿಷ್ಟವಾದ ಮತವನ್ನು ಭಾಗವತಮತವೆಂದು ಕರೆಯುವದಕ್ಕೆ ಕಾರಣವನ್ನು ಹೇಳಿ ಮುಂದೆ ಸಾಗುವದು ಒಳಿತೆಂದು ನನಗೆ ಅನ್ನಿಸುತ್ತದೆ. ಗೀತೆಯಲ್ಲಿ ಕರ್ಮಯೋಗವನ್ನು ಹೇಳಿದ್ದರಿಂದಲೇ ಇದಕ್ಕೆ ಭಾಗವತಮತವೆಂಬ ಹೆಸರು ಬಂದಿದೆ ಎಂಬ ವಾದದ ಜೊಳ್ಳುತನವನ್ನು ನಾನು ಆಗಲೆ ಹೊರಗೆಡಹಿದ್ದೇನೆ. ಭಗವಂತನು ಹೇಳಿದ್ದೆಂಬ ಕಾರಣದಿಂದ ಕರ್ಮಯೋಗವು ಭಾಗವತಮತವಾದರೆ ಧ್ಯಾನಯೋಗವೇ ಮುಂತಾದವೂ ಅದೇ ಅರ್ಥದಲ್ಲಿ ಭಾಗವತಮತವೆಂಬ ಶಬ್ದಕ್ಕೆ ಅರ್ಹವಾಗಿರುತ್ತವೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ಭಗವದ್ಗೀತೆಯಲ್ಲಿರುವ ಮತವು 'ಭಾಗವತಮತ'ವೆಂಬ ಹೆಸರಿಗೆ ತಕ್ಕದ್ದಾಗಿರುವದಕ್ಕೆ ಮತ್ತೊಂದು ಕಾರಣವೂ ಉಂಟು. 'ಗೀತಾಶಾಸ್ತ್ರಕ್ಕೆ ವಾಸುದೇವಭಗವಂತನೆಂಬ ಪರಮಾರ್ಥತತ್ತ್ವವೇ ವಿಷಯ' ಎಂದು ಶಂಕರಾಚಾರ್ಯರು ಹೇಳಿರುವರೆಂಬುದನ್ನು ಭಗವದ್ಗೀತಾಪ್ರಸ್ಥಾನವಿಚಾರವನ್ನು ಪ್ರಾರಂಭಿಸುವಾಗಲೇ ತಿಳಿಸಿರುತ್ತೇನೆ. ಈ ಪ್ರಸ್ಥಾನವು ಸಾಧನಪ್ರಧಾನವಾದದ್ದಾದರೂ ಆ ಭಗವಂತನನ್ನು ಕೇಂದ್ರವಾಗಿ ಮಾಡಿಕೊಂಡೇ ಎಲ್ಲಾ ಸಾಧನಗಳ

ಪ್ರತಿಪಾದನೆಯನ್ನೂ ಮಾಡಿರುತ್ತದೆ. ಕರ್ಮಯೋಗವೆಂದರೆ ಕರ್ಮವನ್ನು ಸಂಗಫಲಾಪೇಕ್ಷೆಗಳಿಲ್ಲದೆ ಭಗವಂತನ ಅರ್ಚನೆಯೆಂದು ಮಾಡುವದೇ ಆಗಿರುತ್ತದೆ. ಇದರಂತೆ ಮುಂದೆ ಹೇಳುವ ಧ್ಯಾನಯೋಗವೂ ಆ ಭಗವಂತನನ್ನು ಧ್ಯಾನಮಾಡುವದೇ ಆಗಿರುತ್ತದೆ. ಇಲ್ಲಿರುವ ಜ್ಞಾನವು ಭಗವದ್ವಿಷಯಕಜ್ಞಾನವೇ ಆಗಿದೆ. ಆದ್ದರಿಂದ ಇಲ್ಲಿ ಹೇಳಿರುವ ಮತವು ಈ ಅರ್ಥದಲ್ಲಿಯೂ ಭಾಗವತಮತವಾಗಿರುತ್ತದೆ.

ಕರ್ಮಯೋಗದಲ್ಲಿ ಶರೀರಪ್ರಧಾನವಾಗಿರುವ ಕರ್ಮ, ಮನಃ ಪ್ರಧಾನವಾಗಿರುವ ಕರ್ಮ- ಎಂದು ಎರಡು ಬಗೆಯ ಕರ್ಮಗಳನ್ನು ಭಗವಂತನಿಗೆ ಸಂಬಂಧಿಸಿಕೊಂಡು ಮಾಡುವ ವಿಭಾಗಗಳಿರುತ್ತವೆ. ಈವರೆಗೆ ಹೊರಗಿನ ಶರೀರಪ್ರಧಾನವಾಗಿರುವ ಕರ್ಮಯೋಗವನ್ನು ಹೇಳಿದ್ದಾಯಿತು. ಇನ್ನು ಒಳಗಿನ ಮನಃಪ್ರಧಾನವಾದ ಸಾಧನರೂಪವಾದ ಕರ್ಮವಿಚಾರವನ್ನು ಹೇಳಬೇಕು. ಜ್ಞಾನಕ್ಕೆ ಕರ್ಮಯೋಗವು ಬಹಿರಂಗವಾದರೆ ಧ್ಯಾನಯೋಗವು ಅಂತರಂಗವಾಗಿರುತ್ತದೆ. 'ಇದಾನೀಂ ಧ್ಯಾನಯೋಗಂ ಸಮ್ಯಗ್ದರ್ಶನಸ್ಯ ಅನ್ತರಙ್ಗಂ ವಿಸ್ತರೇಣ ವಕ್ಷ್ಯಾಮೀತಿ ತಸ್ಯ ಸೂತ್ರಸ್ಥಾನೀಯಾನ್ ಶ್ಲೋಕಾನುಪ ದಿಶತಿ ಸ್ಮ ಭಗವಾನ್' ಎಂದು ಆಚಾರ್ಯರು ಹೇಳಿರುತ್ತಾರೆ. ಸರ್ವಾತ್ಮನಾದ ಭಗವಂತನು ನಮ್ಮ ಸರ್ವಾಂತರನಾದ ಆತ್ಮನಾದ್ದರಿಂದ ಈ ಧ್ಯಾನಯೋಗ ವನ್ನು ಮಾಡುವದು ಜ್ಞಾನಕ್ಕೆ ಅತ್ಯವಶ್ಯವಾದ ಸಾಧನವಾಗಿದೆ ಎಂಬುದು ಸ್ಪಷ್ಟವಾಗಿದೆ. ಇದನ್ನು ಮಾಡುವದಕ್ಕಾಗಿಯೇ ಸಾಧಕರು ಸರ್ವಕರ್ಮ ಸಂನ್ಯಾಸವನ್ನು ಮಾಡಿ ಯಮನಿಯಮಾದಿಗಳನ್ನು ಮಾಡುವರೆಂದು ಹಿಂದೆ ತಿಳಿಸಿರುತ್ತೇನೆ. ಧ್ಯಾನಯೋಗವನ್ನು ಹೇಗೆ ಮಾಡಬೇಕು?- ಎಂಬುದನ್ನು ಭಗವಂತನು ಹೀಗೆ ಸಂಗ್ರಹವಾಗಿ ತಿಳಿಸಿರುತ್ತಾನೆ:

ಸ್ಪರ್ಶಾನ್ ಕೃತ್ವಾ ಬಹಿರ್ಬಾಹ್ಯಾಂಶ್ಚಕ್ಷುಶ್ಚೈವಾನ್ತರೇ ಭ್ರುವೋಃ ।
ಪ್ರಾಣಾಪಾನೌ ಸಮೌ ಕೃತ್ವಾ ನಾಸಾಭ್ಯನ್ತರಚಾರಿಣೌ ॥ (5-27)

ಯತೇನ್ದ್ರಿಯಮನೋಬುದ್ಧಿರ್ಮುನಿರ್ಮೋಕ್ಷಪರಾಯಣಃ ।
ವಿಗತೇಚ್ಛಾಭಯಕ್ರೋಧೋ ಯಃ ಸದಾ ಮುಕ್ತ ಏವ ಸಃ ॥ (5-28)

ಶಬ್ದಾದಿಬಾಹ್ಯವಿಷಯಗಳನ್ನು ಹೊರಗೇ ಮಾಡಿಬಿಡಬೇಕು;

ಅವುಗಳನ್ನು ಮನಸ್ಸಿನಲ್ಲಿ ಕೂಡ ಚಿಂತಿಸಬಾರದು. ಕಣ್ಣಿನ ದೃಷ್ಟಿಯನ್ನು ಹೊರಕ್ಕೆ ಚೆಲ್ಲದಂತೆ ತಗ್ಗಿಸಿಟ್ಟುಕೊಳ್ಳಬೇಕು. ಪ್ರಾಣಾಪಾನಗಳನ್ನು ಸಮನಾಗಿ ಮಾಡಿಕೊಳ್ಳಬೇಕು. ಇಲ್ಲಿ ಉಸಿರನ್ನು ಸಮತೆಯಲ್ಲಿಟ್ಟುಕೊಳ್ಳಬೇಕೆಂದು ಹೇಳಿರುವದು ಪ್ರಥಮಸಾಧನ; ಅವುಗಳ ಮೂಲಕವಾಗಿ ಇಂದ್ರಿಯಗಳು, ಮನಸ್ಸು, ಬುದ್ಧಿ- ಇವುಗಳನ್ನು ಬಿಗಿಹಿಡಿದುಕೊಳ್ಳಬೇಕು, ಇಚ್ಛೆ, ಭಯ, ಕ್ರೋಧ - ಮುಂತಾದ ಮನಸ್ಸಿನ ಪ್ರವರ್ತಕಭಾವಗಳನ್ನೆಲ್ಲ ತಲೆ ಎತ್ತದಂತೆ ಮಾಡಿಕೊಳ್ಳಬೇಕು. ಇವೆಲ್ಲ ಧ್ಯಾನಯೋಗಕ್ಕೆ ಸಾಧನಗಳು; ಇಷ್ಟನ್ನು ಸಜ್ಜುಮಾಡಿಕೊಂಡು, ಆತ್ಮಧ್ಯಾನವನ್ನು ಮಾಡಬೇಕು. ಹಾಗೆ ಮಾಡುವವನು ಮುಕ್ತನೇ, ಎಂದರೆ ಅವನಿಗೆ ಮೋಕ್ಷವು ಬಹುಕ್ಷಿಪ್ರವಾಗಿ ಅಳವಡುವದು ಎಂದರ್ಥ.

ಮನುಷ್ಯನು ನಿಷ್ಕಾಮನಾಗಿ ನೈಷ್ಕರ್ಮ್ಯವನ್ನು ಪಡೆಯಬೇಕಾಗಿ ರುತ್ತದೆ. ಸಾಮಾನ್ಯವಾಗಿ ಮನುಷ್ಯನ ಮನಸ್ಸು- ಕಲಗಚ್ಚುಕುಡಿಯುವ ಎಮ್ಮೆಯ ಹಾಗೆ- ಕರ್ಮಕ್ಕೂ ಅದರ ಫಲಕ್ಕೂ ಅಂಟಿಕೊಂಡುಬಿಟ್ಟಿರುತ್ತದೆ. ಸಂಗವನ್ನೂ ಫಲೇಚ್ಛೆಯನ್ನೂ ಬಿಟ್ಟು ಈಶ್ವರಾರ್ಪಣಬುದ್ಧಿಯಿಂದ ಕರ್ಮವನ್ನು ಮಾಡುವದರಿಂದ ಸಾಧಕನು ತಕ್ಕಮಟ್ಟಿಗೆ ಕಾಮದಿಂದ ಪಾರಾಗುತ್ತಾನೆ. ಕರ್ಮಯೋಗವು ಅಳವಟ್ಟರೆ ಧ್ಯಾನಯೋಗಕ್ಕೆ ತಕ್ಕ ಯೋಗ್ಯತೆ ಬರುತ್ತದೆ. ಆದ್ದರಿಂದಲೇ ಭಗವಂತನು

ಆರುರುಕ್ಷೋರ್ಮುನೇರ್ಯೋಗಂ ಕರ್ಮ ಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥ (6-3)

ಎಂದಿರುತ್ತಾನೆ. ಧ್ಯಾನಯೋಗಕ್ಕೆ ಏರುವ ಯೋಗ್ಯತೆ ಬರುವವರೆಗೆ ಕರ್ಮವೇ ಸಾಧನ; ಆ ಯೋಗ್ಯತೆ ಬಂದಮೇಲೆ ಶಮವೇ, ಕರ್ಮಸಂನ್ಯಾಸ ಪೂರ್ವಕವಾದ ಶಾಂತ್ಯಾದಿಗಳೇ ಸಾಧನ. ಧ್ಯಾನಯೋಗಿಯು ಕರ್ಮವನ್ನು ಬಿಟ್ಟನೆಂದರೂ ನಿಜವಾಗಿ ಬಿಟ್ಟಂತಲ್ಲ. ಏಕೆಂದರೆ ಅವನು ಶಾರೀರ ಕರ್ಮಕ್ಕಿಂತಲೂ ಹೆಚ್ಚಿನದಾದ ಅಂತರಂಗವಾದ ಧ್ಯಾನವೆಂಬ ಮಾನಸಿಕ ಕರ್ಮವನ್ನು ಮಾಡುತ್ತಿರುತ್ತಾನೆ. ಕರ್ಮಯೋಗಿಯೂ ಧ್ಯಾನವನ್ನು ಮಾಡುವದಿಲ್ಲವೆ? ಎಂದು ನೀವು ಕೇಳಬಹುದು. ನಿಜ, ಮಾಡುತ್ತಾನೆ; ಆದರೆ ಅದು ಕರ್ಮಾಂಗವಾದ ಧ್ಯಾನವಾಗಿರುತ್ತದೆ. ಆದರೆ ಧ್ಯಾನಯೋಗಿಯು

ಧ್ಯಾನವನ್ನು ಸ್ವಪ್ರಧಾನವಾಗಿ ಮಾಡುತ್ತಿರುತ್ತಾನೆ; ಅವನಿಗೆ ಬಾಹ್ಯಕರ್ಮವು ಸಂಪೂರ್ಣವಾಗಿ ಬಿಟ್ಟುಹೋಗಿರುತ್ತದೆ. ಆದ್ದರಿಂದಲೇ ಅರ್ಜುನನು ಧ್ಯಾನಯೋಗಭ್ರಷ್ಟನಾದವನು ಕರ್ಮದ ಫಲವೂ ತಪ್ಪಿ ಧ್ಯಾನಯೋಗದ ಫಲವೂ ತಪ್ಪಿ ಉಭಯಭ್ರಷ್ಟನಾಗುವನೇನು?– ಎಂದು ಕೇಳಿರುತ್ತಾನೆ. ಭಗವಂತನು 'ಇಲ್ಲ; ಅವನು ಯೋಗದ ಮಹಿಮೆಯಿಂದ ಉತ್ತಮಫಲವನ್ನು ಪರಲೋಕದಲ್ಲಿ ಅನುಭವಿಸಿ ಜನ್ಮಾಂತರದಲ್ಲಿ ಮತ್ತೆ ಯೋಗಾಭ್ಯಾಸವನ್ನು ಮಾಡಿ ಸಿದ್ಧನಾಗಿಯೇ ತೀರುತ್ತಾನೆ' ಎಂದು ಉತ್ತರ ಕೊಟ್ಟಿರುತ್ತಾನೆ.

ಇನ್ನು ಧ್ಯಾನಯೋಗದ ಸ್ವರೂಪಸ್ವಭಾವಗಳನ್ನು ಕುರಿತು ವಿಚಾರಮಾಡಬೇಕಾಗಿದೆ. ಆ ಕೆಲಸದಲ್ಲಿ ನಾಳೆ ತೊಡಗುವೆನು.

*****

## 10. ಧ್ಯಾನಯೋಗದ ಅಸಾಧಾರಣಸ್ವರೂಪ

ಆತ್ಮನು ಸ್ವರೂಪದಲ್ಲಿ ನಿಷ್ಕ್ರಿಯನೇ ಆಗಿದ್ದರೂ ಕರ್ತೃತ್ವಬುದ್ಧಿಯುಳ್ಳ ಮುಮುಕ್ಷುಗಳಿಗೆ ಜ್ಞಾನಕ್ಕೆ ಬಾಹ್ಯಾಂಗವಾಗಿ ಕರ್ಮಯೋಗವನ್ನೂ ಅಂತರಂಗ ವಾಗಿ ಧ್ಯಾನಯೋಗವನ್ನೂ ಹೇಳಿರುತ್ತದೆ ಎಂದು ತಿಳಿಸಿದ್ದಾಯಿತು. ಲೋಕದಲ್ಲಿ ಕೆಲವರು ಸ್ವಭಾವದಿಂದಲೇ ಆಸುರಸಂಪತ್ತಿನವರಾಗಿರುವಂತೆ ಮತ್ತೆ ಕೆಲವರು ಸ್ವಭಾವ ದಿಂದಲೇ ದೈವಸಂಪತ್ತಿನವರಾಗಿರುತ್ತಾರೆ; ಒಬ್ಬನಲ್ಲಿಯೇ ಮೊದಲು ಆಸುರ ಸಂಪತ್ತಿದ್ದು ಪುಣ್ಯಕರ್ಮಗಳ ವಶದಿಂದ ದೈವಸಂಪತ್ತೂ ಬರಬಹು ದಾಗಿರುತ್ತದೆ. ದೈವಸಂಪತ್ತಿನ ಮುಮುಕ್ಷುಗಳೇ ಕರ್ಮಯೋಗಕ್ಕಾಗಲಿ ಧ್ಯಾನಯೋಗಕ್ಕಾಗಲಿ ಅಧಿಕಾರಿಗಳಾಗಿರುತ್ತಾರಾದ್ದರಿಂದ ಅವರು ಶಾಸ್ತ್ರೋಕ್ತ ಕರ್ಮಗಳನ್ನು ಮಾಡಬೇಕೆ, ಬಿಡಬೇಕೆ?– ಎಂಬ ಪ್ರಶ್ನೆ ಏಳುವದಿಲ್ಲ. ಚಿತ್ತಶುದ್ಧಿ ಯಾಗುವವರೆಗೂ ಅಂಥವರು ಕರ್ಮವನ್ನು ಈಶ್ವರಾರ್ಪಣ ಬುದ್ಧಿಯಿಂದ ಮಾಡುತ್ತಿರುವರು. ಅದು ಉಂಟಾದ ಬಳಿಕ ಅವರು ಧ್ಯಾನಯೋಗಕ್ಕೆ ಅರ್ಹರಾಗುವರು.

ಧ್ಯಾನಯೋಗಕ್ಕೆ ಅರ್ಹತೆ ಬಂದಿದೆ ಎಂದು ತಿಳಿದುಕೊಳ್ಳುವದು ಹೇಗೆ? ಇಂದ್ರಿಯಗಳ ತೃಪ್ತಿಗಾಗಿ ಯಾವ ಕರ್ಮವನ್ನಾದರೂ ಮಾಡಬೇಕೆಂಬ

ಕರ್ಮಾಸಕ್ತಿಯು ಯಾವನಿಗೆ ಉಂಟಾಗದೆ ಇರುವದೋ, ಯಾವನು ಸರ್ವಸಂಕಲ್ಪಗಳನ್ನೂ ಬಿಟ್ಟುಬಿಟ್ಟಿರುವನೋ, ಅವನು ಧ್ಯಾನಯೋಗವನ್ನೇರುವದಕ್ಕೆ ಶಕ್ತನಾದನೆಂದು ತಿಳಿಯಬೇಕು. ವಿಷಯಗಳಿಗೂ ಇಂದ್ರಿಯಗಳಿಗೂ ಸಂಬಂಧವಾದಾಗ ಆಗುವ ಭೋಗವು ಅವೆರಡನ್ನೂ ಅವಲಂಬಿಸಿರುತ್ತದೆ; ವಿಷಯಗಳ ಸ್ವರೂಪವು ಮಾರ್ಪಟ್ಟರೂ ಇಂದ್ರಿಯಗಳೇ ಮಾರ್ಪಟ್ಟರೂ, ಕೊನೆಗೆ ಮನಸ್ಸು ಇಂದ್ರಿಯಗಳಿಗೆ ಸಹಾಯ ಮಾಡದೆ ಬಿಟ್ಟರೂ ಆ ಭೋಗಗಳು ತೃಪ್ತಿಕರವಾಗುವದಿಲ್ಲ. ಮನುಷ್ಯನ ಮನುಸ್ಸು ಇಂದ್ರಿಯಗಳು ಹೇಳಿದ್ದನ್ನೇ ಜೀವನಿಗೆ ವರದಿಮಾಡುತ್ತಿರುತ್ತದೆ; ಏಕೆಂದರೆ ಅದು ತಾನೇ ಸ್ವತಂತ್ರವಾಗಿ ಹೊರಕ್ಕೆ ಹೋಗಲಾರದು. ಈ ಮನಸ್ಸಿನಿಂದ ಕೂಡಿರುವವನು– 'ನಾನು' ಎಂದು ಕರೆದುಕೊಳ್ಳುವ ವಸ್ತು – ಗಂಗಾನದಿಯಂತೆ ಒಂದು ವ್ಯಕ್ತಿಯಾಗಿರುತ್ತಾನೆ; ನದಿಯ ನೀರು ಹರಿದುಹೋಗುತ್ತಲೇ ಇದ್ದರೂ ಗಂಗಾನದಿ ಎನಿಸಿಕೊಳ್ಳುವಂತೆ ಇಂದ್ರಿಯಾದಿಗಳು ಎಷ್ಟು ಮಾರ್ಪಟ್ಟರೂ ಅವನು ನಾನು, ನಾನು – ಎಂದುಕೊಳ್ಳುತ್ತಲೇ ಇರುತ್ತಾನೆ. ಆದ್ದರಿಂದ ಅವನಿಗೆ ಈಗ ಸುಖವಾಗಿ ತೋರಿದ್ದು ಆಮೇಲೆ ದುಃಖವೆಂದು ತೋರುತ್ತದೆ. ವಿವೇಕಿಯಾದವನು ಬೇಕುಬೇಡಗಳು ಹೀಗೆ ಮಾರ್ಪಡುತ್ತಲೇ ಇರುವ ಈ ಪ್ರಪಂಚದಲ್ಲಿ ಇಂದ್ರಿಯಾರ್ಥ ಭೋಗಗಳಿಂದ ಸುಖವನ್ನು ನಿರೀಕ್ಷಿಸುವದಿಲ್ಲ; ಈ ಕಾರಣದಿಂದ ಅವುಗಳಲ್ಲಿ ಅರತಿಯುಂಟಾಗಿಬಿಟ್ಟರೆ ಅವನು ತನ್ನೊಳಗೇ ಇರುವ ಆತ್ಮಸುಖವನ್ನು ಪಡೆದುಕೊಳ್ಳುವದಕ್ಕೆ ಪ್ರಯತ್ನಿಸುತ್ತಾನೆ. ಅಂಥವನೇ ಧ್ಯಾನಯೋಗಕ್ಕೆ ಅರ್ಹನಾದವನು.

ನಮ್ಮಲ್ಲಿ ಅನೇಕರು ಧ್ಯಾನಯೋಗವನ್ನು ಮಾಡದಿದ್ದರೂ ನಿತ್ಯವೂ ಅದನ್ನು ಮಾಡುವವರಿಗಿಂತ ಹೆಚ್ಚಾಗಿ ಅದರ ವಿಷಯವಾಗಿ ಮಾತನಾಡುತ್ತಿದ್ದೇವೆ. 'ರಾಷ್ಟ್ರಪತಿಗಳು ಏಕಾಂತದಲ್ಲಿ ಏನೋ ಗುಟ್ಟಿನ ಮಾತನಾಡಿದರಂತೆ' ಎಂದು ಮಾತನಾಡಿಕೊಳ್ಳುವ ಅವಿವೇಕಿಜನರಂತೆ ನಾವುಗಳೂ ಧ್ಯಾನಯೋಗದ ರಹಸ್ಯಗಳ ವಿಷಯದಲ್ಲಿ ಏನೇನೋ ಹೇಳುತ್ತಿರುತ್ತೇವೆ. ಯೋಗಿಗಳು ಅಂತರ್ಮುಖರಾಗಿರುತ್ತಾರೆ ಎಂದರೆ ಮುಖವನ್ನು ಹೇಗೋ ತಿರುಗಿಸಿಕೊಳ್ಳುತ್ತಾರೆ ಎಂದು ವಿವರಿಸುವವರನ್ನೂ ನಾನು ನೋಡಿರುತ್ತೇನೆ. ಹೇಳಿಕೆಯ ಮಾತುಗಳಿಗೆ ಕಿವಿಗೊಡದೆ ಭಗವದ್ಗೀತೆಯಲ್ಲಿಯೇ ಸ್ಫುಟವಾಗಿ ಹೇಳಿರುವದೇನೆಂಬುದನ್ನು ಲಕ್ಷಿಸೋಣ:

ಶನೈಃ ಶನೈರುಪರಮೇದ್ಬುದ್ಧ್ಯಾ ಧೃತಿಗೃಹೀತಯಾ ।
ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿನ್ತಯೇತ್ ।। (6-25)

ಇಂದ್ರಿಯಗಳನ್ನು ಮನಸ್ಸಿನಲ್ಲಿಯೂ ಮನಸ್ಸನ್ನು ಬುದ್ಧಿಯಲ್ಲಿಯೂ ಬುದ್ಧಿಯನ್ನು ಅಹಂಕರಾದಲ್ಲಿಯೂ ಹೀಗೆ ಮೆಲ್ಲಮೆಲ್ಲನೆ ಲಯಮಾಡಿಕೊಂಡು ಹೊರಗಿನ ವ್ಯಾಪಾರವನ್ನೆಲ್ಲ ಬಿಟ್ಟು ಒಳಕ್ಕೆ ನಡೆಯಬೇಕು. ಲಯವೆಂದರೇನು? ಅಮೃತಶಿಲೆಯ ವಿಗ್ರಹದ ಆಕಾರದಲ್ಲಿಯೇ ನೆಟ್ಟ ಮನಸ್ಸುಳ್ಳಾತನು ಅದು ಅಮೃತ ಶಿಲೆಯದೇ ಎಂಬುದರ ಕಡೆಗೆ ಲಕ್ಷ್ಯವನ್ನಿಟ್ಟರೆ ಆ ಶಿಲೆಯಲ್ಲಿ ವಿಗ್ರಹವು ಲಯವಾದಂತೆ ಆಯಿತು. ಹೀಗೆಯೇ ಮನಸ್ಸಿನಲ್ಲಿ ಇಂದ್ರಿಯ ಗಳನ್ನು ಲಯಮಾಡಿ ಕೊಳ್ಳಬೇಕು. ಕನಸಿನಲ್ಲಿ ಮನಸ್ಸೇ ಇಂದ್ರಿಯಾದಿಗಳ ರೂಪದಲ್ಲಿ ಕಾಣಿಸಿಕೊಳ್ಳುವದು ಕಂಡಿದೆ; ಇದರಂತೆ ಈಗಲೂ ನಮ್ಮ ಮನಸ್ಸಿಗಿಂತ ವ್ಯತಿರಿಕ್ತವಾಗಿ ಯಾವ ಇಂದ್ರಿಯಗಳೂ ಇರುವದಿಲ್ಲ ಎಂದು ಅನುಸಂಧಾನಮಾಡುವದು ಲಯಚಿಂತನೆಯಾಗುವದು- ಹೀಗೆ ಒಳಗೊಳಗೆ ಹೆಚ್ಚುಹೆಚ್ಚು ಸೂಕ್ಷ್ಮವಾಗಿರುವ ತತ್ತ್ವದಲ್ಲಿ ಹೊರಗಿನ ಸ್ಥೂಲವಾದ ತತ್ತ್ವವನ್ನು ಲಯಮಾಡಿಕೊಳ್ಳುವದನ್ನು 'ಅಧ್ಯಾತ್ಮಯೋಗ' ಎಂಬ ಹೆಸರಿನಿಂದ ಉಪನಿಷತ್ತಿನಲ್ಲಿ ಕರೆದಿರುತ್ತದೆ. ಕಟ್ಟಕಡೆಗೆ ಇದೆಲ್ಲವೂ ಆತ್ಮನಲ್ಲಿಯೇ ಲಯವಾಗುವದು ಧ್ಯಾನಯೋಗದ ಪರಮಾವಧಿಯು. ಮನಸ್ಸು ಆತ್ಮಸಂಸ್ಥ ವಾಗುವದು ಎಂದರೆ ಶಾಸ್ತ್ರಾಚಾರ್ಯರುಗಳ ಉಪದೇಶದಿಂದ ಇದೆಲ್ಲವೂ ಆತ್ಮನೇ, ಆತ್ಮನಿಗಿಂತ ವ್ಯತಿರಿಕ್ತವಾದ ಮನಸ್ಸಾಗಲಿ ಇಂದ್ರಿಯಗಳಾಗಲಿ ವಿಷಯಗಳಾಗಲಿ ಇಲ್ಲವೇ ಇಲ್ಲ- ಎಂದು ನಿಶ್ಚಯಿಸುವದೇ ಆಗಿದೆ. 'ಇದನ್ನು ಮನಸ್ಸಿನ ಅಮನೀಭಾವವು' ಎಂದು ಗೌಡಪಾದಾಚಾರ್ಯರು ಕರೆದಿರುತ್ತಾರೆ.

ಇಲ್ಲಿ ವರ್ಣಿಸಿರುವ ಧ್ಯಾನಯೋಗಕ್ಕೂ ಪಾತಂಜಲಯೋಗಕ್ಕೂ ಬಹಳ ಅಂತರವಿದೆ. ಇದನ್ನರಿಯದೆ ಅನೇಕರು ಗೀತೆಯ ಆರನೆಯ ಅಧ್ಯಾಯದಲ್ಲಿ ಹೇಳಿರುವದು ಪಾತಂಜಲಯೋಗವೇ ಎಂದು ಭ್ರಾಂತರಾಗಿರುತ್ತಾರೆ. ಪಾತಂಜಲಯೋಗದ ಸಾರವೇನೆಂದರೆ; ಚಿತ್ತವೃತ್ತಿಗಳ ನಿರೋಧವೇ ಯೋಗವು. ಚಿತ್ತದಲ್ಲಿ ಬಗೆಬಗೆಯ ವೃತ್ತಿಗಳು ಏಳುತ್ತಿರುತ್ತವೆ. ಏಕಾಗ್ರವೃತ್ತಿ ಯನ್ನು ಎಬ್ಬಿಸಿ ಅಭ್ಯಾಸ ವೈರಾಗ್ಯಗಳಿಂದಲೂ ಧಾರಣಧ್ಯಾನಸಮಾಧಿ- ಎಂಬೀ ಸಾಧನಗಳಿಂದಲೂ ಆ ವೃತ್ತಿಗಳು ಏಳದಂತೆ ಮಾಡಿಕೊಳ್ಳುವದೇ ಯೋಗದ

ಉದ್ದೇಶ. ಈಗ ನನಗೆ ಚಿತ್ತವೃತ್ತಿಗಳು ಏಳುತ್ತಿಲ್ಲ ಎಂಬ ಅರಿವು ಇದ್ದರೆ ಸಂಪ್ರಜ್ಞಾತಸಮಾಧಿಯೆನಿಸುತ್ತದೆ; ಆ ಅರಿವೂ ಹೋಗಿಬಿಟ್ಟರೆ ಅಸಂಪ್ರಜ್ಞಾತ ಸಮಾಧಿಯೆನಿಸುತ್ತದೆ. ಆಗಲೂ ಚಿತ್ತವು ಸಂಸ್ಕಾರಶೇಷವಾಗಿದ್ದು ಕೊಂಡೇ ಇರುತ್ತದೆ. ಹೀಗೆ ಸಮಾಧಿಯನ್ನು ಪಡೆದುಕೊಂಡವನಿಗೆ ಪ್ರಕೃತಿಪುರುಷರ ವಿವೇಕವು ಅನುಭವಕ್ಕೆ ಬರುತ್ತದೆ. ಇದೇ ಪಾತಂಜಲಯೋಗದ ಹೆಗ್ಗುರಿ. ಯೋಗದರ್ಶನದಲ್ಲಿಯೂ ಸಾಂಖ್ಯದರ್ಶನದಂತೆಯೇ ಪ್ರಧಾನಾದಿತತ್ತ್ವಗಳನ್ನು ಒಪ್ಪಿರುತ್ತದೆ; ಯೋಗಿಗಳ ಮತದಲ್ಲಿ ಚಿತ್ತವು ಸಂಪೂರ್ಣವಾಗಿ ಎಂದಿಗೂ ನಾಶವಾಗುವದಿಲ್ಲ, ಆದ್ದರಿಂದ ಅದೂ ದ್ವೈತದರ್ಶನವೇ. ಪ್ರಕೃತಿಪುರುಷರ ಅವಿವೇಕದಿಂದ ಬಂಧವೂ ವಿವೇಕದಿಂದ ಮುಕ್ತಿಯೂ ಆಗುತ್ತವೆ; ಆ ವಿವೇಕವು ಅನುಭವಕ್ಕೆ ಬರುವದಕ್ಕಾಗಿ ಯೋಗವನ್ನು ಹೇಳುತ್ತೇವೆ- ಎಂದು ಆ ದರ್ಶನದವರು ಹೇಳುತ್ತಾರೆ.

ಆದರೆ ವೇದಾಂತದಲ್ಲಿ ಹೇಳಿರುವ ಅಧ್ಯಾತ್ಮಯೋಗವು ಇದಲ್ಲ. 'ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿನ್ತಯೇತ್' ಇಲ್ಲಿ ಇಂದ್ರಿಯಗಳು ಮನಸ್ಸಿನಲ್ಲಿಯೂ ಮನಸ್ಸು ಆತ್ಮನಲ್ಲಿಯೂ ಲಯವಾಗಬೇಕು. ಬಟ್ಟೆಯನ್ನು ನೂಲಿನಲ್ಲಿಯೂ ನೂಲನ್ನು ಅರಳೆಯಲ್ಲಿಯೂ ಲಯಮಾಡಿ ಕಾರ್ಯವು ಕಾರಣಕ್ಕಿಂತ ಬೇರೆಯಲ್ಲ ಎಂದು ನಿಶ್ಚಯಿಸುವಂತೆ ಮನಸ್ಸೆಂಬುದು ಆತ್ಮನಿಗಿಂತ ವ್ಯತಿರಿಕ್ತವಾಗಿ ಇಲ್ಲವೇ ಇಲ್ಲ ಎಂದು ನಿಶ್ಚಯಿಸುವವರೆಗೂ ಮನಸ್ಸನ್ನು ಸೂಕ್ಷ್ಮಗೊಳಿಸಿಕೊಂಡು ನೋಡಬೇಕು. ರತ್ನಪರೀಕ್ಷಕನು ಸೂಕ್ಷ್ಮದೃಷ್ಟಿಯಿಂದ ನೋಡಿ ರತ್ನವನ್ನು ಪರೀಕ್ಷಿಸುವಂತೆಯೇ ಧ್ಯಾನಯೋಗಿಯು ಸೂಕ್ಷ್ಮದೃಷ್ಟಿಯಿಂದ ನೋಡಿ ಮನಸ್ಸೇ ಮುಂತಾದ ಎಲ್ಲವೂ ಆತ್ಮನೇ ಎಂದು ನಿಶ್ಚಯಿಸುತ್ತಾನೆ. ವಿಶುದ್ಧವಾದ ಇಂದ್ರಿಯಗಳು, ವಿಶುದ್ಧ ವಾದ ಮನಸ್ಸು, ವಿಶುದ್ಧವಾದ ಬುದ್ಧಿ- ಇವುಗಳಿಂದ ನೋಡಿದಾಗಲೇ ಕ್ರಮಕ್ರಮ ವಾಗಿ ಈ ಸೂಕ್ಷ್ಮದೃಷ್ಟಿಯು ದೊರಕುವದು. ಹೊರಗೆ ಎಂಥ ದುಃಖವುಂಟಾದರೂ ಚಲಿಸದಿರುವಷ್ಟು ಮಟ್ಟಿನ ಏಕಾಗ್ರಸ್ಥಿತಿಯು ಬಂದವರಿಗೆ ಮಾತ್ರ ಮನಸ್ಸು ಆತ್ಮನಲ್ಲಿ ಲಯವಾಗಿಬಿಡುತ್ತದೆ. ಇದೇ ಗೌಡಪಾದಾಚಾರ್ಯರು ಹೇಳಿರುವ ಮನೋನಿಗ್ರಹವು. ಈ ಯೋಗದ ಫಲವೆಂದರೆ ಎಲ್ಲೆಲ್ಲಿಯೂ ಬ್ರಹ್ಮವನ್ನೇ ಕಾಣುವದು; ಬ್ರಹ್ಮಕ್ಕೂ ನಮ್ಮ ಆತ್ಮನಿಗೂ ಯಾವ ಹೆಚ್ಚುಕಡಿಮೆಯೂ ಇಲ್ಲ; ಆತ್ಮನೇ ಬ್ರಹ್ಮ

ಈ ಬ್ರಹ್ಮವೇ ಎಲ್ಲರಿಗೂ ಆತ್ಮ- ಎಂಬ ಜ್ಞಾನವು ಬಂದಾಗ (ಗೀ. 6-29, 30) ಧ್ಯಾನಯೋಗದ ಫಲವನ್ನು ಕಂಡುಕೊಂಡಂತೆ ಆಯಿತು.

ಭಗವದ್ಗೀತೆಯ ಎಂಟನೆಯ ಅಧ್ಯಾಯದಲ್ಲಿ ಉಪಾಸನೆಯನ್ನು ಹೇಳಿರುತ್ತದೆ. ಅದನ್ನು 'ಧಾರಣಯೋಗ'ವೆಂದೂ ಆಚಾರ್ಯರು ಕರೆದಿರುತ್ತಾರೆ. ಪ್ರಶ್ನೋಪನಿಷತ್ತು ಮುಂತಾದವುಗಳಲ್ಲಿ ಓಂಕಾರವನ್ನು ಪರಮಾತ್ಮನಿಗೆ ಪ್ರತೀಕವೆಂದೂ ವಾಚಕವೆಂದೂ ಭಾವಿಸಿ ಮಾಡುವ ಉಪಾಸನೆಯಿಂದ ಆಗುವ ಗತಿಯ ವರ್ಣನೆಯು ಅಲ್ಲಿರುತ್ತದೆ. ಉಪಾಸನೆಗೂ ಈ ಧ್ಯಾನಯೋಗಕ್ಕೂ ಇರುವ ಒಂದು ಮುಖ್ಯ ತಾರತಮ್ಯವೇನೆಂದರೆ ಉಪಾಸನೆ ಎಂದರೆ ಭಾವನೆ, ಮನಸ್ಸಿನಿಂದ ಶಾಸ್ತ್ರದಲ್ಲಿ ಹೇಳಿರುವಂತೆ ಕಲ್ಪಿಸಿಕೊಳ್ಳುವದು; ಧ್ಯಾನಯೋಗವೆಂಬುದು ಸೂಕ್ಷ್ಮದೃಷ್ಟಿಯಿಂದ ನೋಡಿ ಇದ್ದದ್ದನ್ನು ಇದ್ದಂತೆ ಅರಿತುಕೊಳ್ಳುವದು. ಉದಾಹರಣೆಗೆ 'ಮಾತೃದೇವೋ ಭವ' ಎಂದು ಶ್ರುತಿಯಲ್ಲಿದೆ. ತಾಯಿಯನ್ನು ತಾಯಿ ಎಂದು ತಿಳಿದುಕೊಳುವದು ವಸ್ತುಸ್ಥಿತಿ; ಆದರೆ ಆಕೆಯನ್ನು ದೇವರು ಎಂದು ಭಾವಿಸುವದು ಶಾಸ್ತ್ರದ ಅಪ್ಪಣೆಯಿಂದ. ಇಲ್ಲಿ ಕಲ್ಪನೆಯು ಬೇಕು. ಎಂಟನೆಯ ಅಧ್ಯಾಯದಲ್ಲಿ ಹೇಳಿರುವ ಉಪಾಸನಾರೂಪವಾದ ಧಾರಣಯೋಗಕ್ಕೆ ಬೇಕಾದ ಸಲಕರಣೆಗಳು ಹೀಗಿವೆ:

ಸರ್ವದ್ವಾರಾಣಿ ಸಂಯಮ್ಯ ಮನೋ ಹೃದಿ ನಿರುಧ್ಯ ಚ ।
ಮೂರ್ಧ್ನ್ಯಾಧ್ಯಾಯಾತ್ಮನಃ ಪ್ರಾಣಮಾಸ್ಥಿತೋ ಯೋಗಧಾರಣಾಮ್ ॥

ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್ ।
ಯಃ ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂ ಗತಿಮ್ ॥ 8-12,13

ಇಂದ್ರಿಯಗಳ ದ್ವಾರಗಳೆಲ್ಲವನ್ನೂ ಬಿಗಿಹಿಡಿದುಕೊಂಡು ಮನಸ್ಸನ್ನು ಯಾವ ವೃತ್ತಿಗಳೂ ಏಳದಂತೆ ಹೃದಯದಲ್ಲಿ ಬಿಗಿಹಿಡಿದಿಟ್ಟುಕೊಳ್ಳಬೇಕು. ಹೀಗೆ ಮನಸ್ಸನ್ನು ವಶಪಡಿಸಿಕೊಂಡು ತನ್ನ ಪ್ರಾಣಶಕ್ತಿಯನ್ನೆಲ್ಲ ಸುಷುಮ್ನಾದ್ವಾರದಿಂದ ನಡುನೆತ್ತಿಯ ಮೇಲಿಟ್ಟು ಧಾರಣೆಮಾಡಬೇಕು. ಪಾತಂಜಲಯೋಗದಲ್ಲಿ ಹೇಳಿರುವಂತೆ ಗೊತ್ತಾದ ಪ್ರದೇಶದಲ್ಲಿ ಮನಸ್ಸನ್ನು ನಿಲ್ಲಿಸಿಕೊಂಡು ಚಿಂತಿಸುವದೇ ಇಲ್ಲಿ ಧಾರಣೆಯೆನಿಸು ವದು. ಓಂಕಾರವೆಂಬ ಪರಮಾತ್ಮನ

ನಾಮವನ್ನು ಉಚ್ಚರಿಸುತ್ತಾ ಅದರ ಅರ್ಥವಾಗಿರುವ ಪರಮೇಶ್ವರನನ್ನೇ ಸ್ಮರಣಮಾಡುತ್ತಿರಬೇಕು. ಹೀಗೆ ಅಭ್ಯಾಸಮಾಡಿದ ಉಪಾಸನೆಯಿಂದ ಈಶ್ವರನನ್ನು ಸಾಕ್ಷಾತ್ಕಾರಮಾಡಿಕೊಂಡು, ದೇಹತ್ಯಾಗವನ್ನು ಮಾಡಿದವನು 'ಅಗ್ನಿರ್ಜ್ಯೋತಿರಹಃ ಶುಕ್ಲಃ' (8-24) ಎಂದು ಹೇಳಿರುವ ಅರ್ಚಿರಾದಿ ಮಾರ್ಗದಿಂದ ಹೋಗಿ ಪರಮಾತ್ಮನನ್ನೂ ಕ್ರಮಮುಕ್ತಿಯನ್ನೂ ಪಡೆಯುತ್ತಾನೆ. ಇದಿಷ್ಟೂ ಉಪಾಸನಾಮಾರ್ಗದ ವರ್ಣನೆಯಾಯಿತು.

ಇನ್ನು ಆರನೆಯ ಅಧ್ಯಾಯದಲ್ಲಿ ಹೇಳಿರುವ ಧ್ಯಾನಯೋಗವು ಇಲ್ಲಿಯೇ ಆಗುವ ಸದ್ಯೋಮುಕ್ತಿಗೆ ಕಾರಣವಾಗಿರುತ್ತದೆ. ಅದು ಹೊರಗಡೆಯ ಇಂದ್ರಿಯ ವ್ಯಾಪಾರಗಳನ್ನೆಲ್ಲ ಮನಸ್ಸಿನಲ್ಲಿ ಲಯಮಾಡಿಕೊಂಡು ಆ ಮನಸ್ಸನ್ನೂ ಆತ್ಮನಲ್ಲಿಯೇ ಲಯಮಾಡಿಕೊಳ್ಳುವ ಸೂಕ್ಷ್ಮದೃಷ್ಟಿಯ ಒಳನೋಟವೇ ಹೊರತು ಭಾವನೆಯಲ್ಲ. ಸಾಮಾನ್ಯವಸ್ತುಗಳು ಕೂಡ ಮೇಲೆ ಮೇಲೆ ನೋಡುವವರಿಗೆ ಒಂದು ರೂಪದಲ್ಲಿ ಕಾಣುತ್ತವೆ; ಆದರೆ ಎವೆಯಿಕ್ಕದೆ ನೋಡುವವರಿಗೂ ದುರ್ಬಿನ್ನು ಮುಂತಾದ ಯಂತ್ರಗಳನ್ನು ಉಪಯೋಗಿಸಿಕೊಂಡು ನೋಡುವವರಿಗೂ ಭೌತಿಕಶಾಸ್ತ್ರದಂತೆ ಪ್ರಯೋಗವನ್ನು ನಡೆಯಿಸಿ ನಿರೀಕ್ಷಣೆಮಾಡುವವರಿಗೂ ಅದೇ ವಸ್ತುಗಳು ಎಷ್ಟೋ ಹೊಸಧರ್ಮಗಳನ್ನು ಪ್ರಕಟಿಸುತ್ತವೆ. ಭೌತಿಕಶಾಸ್ತ್ರಜ್ಞರು ಕಂಡುಹಿಡಿದಿರುವ ಹೊಸ ಪದಾರ್ಥಗಳೆಲ್ಲವೂ ಹೀಗೆ ಸೂಕ್ಷ್ಮದೃಷ್ಟಿಯಿಂದ ನೋಡಿದ ಫಲವೇ ಆಗಿರುತ್ತದೆ. ಭೌತಿಕಶಾಸ್ತ್ರಜ್ಞರು ಬಾಹ್ಯವಸ್ತುಗಳನ್ನು ಹೇಗೆ ಸೂಕ್ಷ್ಮದೃಷ್ಟಿಯಿಂದ ನೋಡುತ್ತಾರೋ ಹಾಗೆಯೇ ಅಧ್ಯಾತ್ಮಯೋಗಿಗಳು ತಮ್ಮ ಒಳಗಿರುವ ಆತ್ಮತತ್ತ್ವವನ್ನು ಸುಸೂಕ್ಷ್ಮವಾದ ಸಂಸ್ಕೃತವಾದ ಮನಸ್ಸಿನಿಂದ ನೋಡುತ್ತಾರೆ. ಆ ದೃಷ್ಟಿಯಿಂದ ನೋಡಿದಾಗ ಸರ್ವಭೂತಗಳಲ್ಲಿಯೂ ಒಬ್ಬನೇ ಪರಮಾತ್ಮನಿರುತ್ತಾನೆಂದೂ ಈ ಆತ್ಮನನ್ನು ಬಿಟ್ಟು ಯಾವ ಭೂತಗಳ ಕಾರ್ಯಕರಣ ಸಂಘಾತವೂ ಬೇರೆಯಾಗಿ ಸ್ವತಂತ್ರವಾಗಿಲ್ಲವೆಂದೂ ಅನುಭವದಿಂದ ಕಂಡುಕೊಳ್ಳುತ್ತಾರೆ. ಈ ಬ್ರಹ್ಮಾತ್ಮೈಕತ್ವಜ್ಞಾನವು ಯೋಗಿಗೆ ಈ ಜನ್ಮದಲ್ಲಿಯೇ ಆಗುವದರಿಂದ ಅವನಿಗೆ ಕಾಲಾಂತರದಲ್ಲಿ ಮುಕ್ತಿಯಾಗಬೇಕಾದ್ದಿಲ್ಲ. ಇಲ್ಲಿಯೇ ಸದ್ಯೋಮುಕ್ತಿಯಾಗಿಬಿಡುತ್ತದೆ.

* * * * *

# 11. ಭಕ್ತಿಯೋಗ

ಭಗವದ್ಗೀತೆಯಲ್ಲಿ ವೇದಾಂತಗಳಲ್ಲಿ ಎಂದರೆ ಉಪನಿಷತ್ತುಗಳಲ್ಲಿ ಹೇಳಿರುವ ಸಿದ್ಧಾಂತವನ್ನೇ ಕೇಂದ್ರವಾಗಿಟ್ಟು ಮುಖ್ಯವಾಗಿ ಸಾಧನವನ್ನು ವಿವರಿಸಿ ತಿಳಿಸಿರುತ್ತದೆ ಎಂದು ಮೊದಲೇ ಹೇಳಿದ್ದೇನಷ್ಟೆ. ಆದರೆ ವೈದಿಕಕರ್ಮದ ಒಳ ಆಶಯವನ್ನು ಪ್ರಧಾನವಾಗಿಟ್ಟುಕೊಂಡು ಅದನ್ನು ಎಲ್ಲರಿಗೂ ಅನ್ವಯಿಸಿರುವದೊಂದು ಈ ಪ್ರಸ್ಥಾನದ ಹೆಚ್ಚುಗಾರಿಕೆ ಯಾಗಿರುತ್ತದೆ.

ಗೀತೆಯಲ್ಲಿ ಹೇಳಿರುವದು ಶಾಸ್ತ್ರೀಯಕರ್ಮವೇ ನಿಜ. ಆದರೆ ಗೀತೆಗೆ ಭಗವಂತನೇ ಮುಖ್ಯವಾದ್ದರಿಂದ ಶಾಸ್ತ್ರೋಕ್ತಕರ್ಮವನ್ನು ಮಾಡಿ ಓಂತತ್ಸತ್ ಎಂದು ಭಗವನ್ನಾಮವನ್ನು ಸ್ಮರಣೆಮಾಡಿದರೆ ಆ ಕರ್ಮಕ್ಕೆ ಸಾದ್ಗುಣ್ಯವು ಬರುತ್ತದೆ ಎಂದು ಹೇಳಿರುವದರಲ್ಲಿ, ಲೌಕಿಕಕರ್ಮಗಳನ್ನು ಕೂಡ ಭಗವಂತನ ಅರ್ಚನೆಗೆಂದು ಮಾಡಿದರೆ, ಭಗವಂತನ ನಾಮಸ್ಮರಣೆಯನ್ನು ಮಾಡಿದರೆ ಕರ್ಮಯೋಗದ ಫಲವು ಬರುತ್ತದೆ – ಎಂದು ಸೂಚನೆ ಸಿಕ್ಕುತ್ತದೆ. 'ಯತ್ಕರೋಷಿ ಯದಶ್ನಾಸಿ' ಎಂಬಿದರ ಅರ್ಥವನ್ನು ಹೀಗೆ ಹಿಗ್ಗಿಸಿಕೊಂಡು ನಮ್ಮ ಕರ್ಮವನ್ನು ಭಗವದರ್ಪಣೆಮಾಡಬಹುದಾಗಿರುತ್ತದೆ. ಮನಃಪೂರ್ವಕವಾಗಿ ಕರ್ಮವನ್ನು ಮಾಡಬೇಕು; ಕಾಯಕ್ಲೇಶದಿಂದ ಕರ್ಮವನ್ನು ಬಿಡಬಾರದು, ಸಾತ್ತ್ವಿಕಕರ್ಮವನ್ನೇ ಮಾಡಬೇಕು; ಸ್ವಕರ್ಮವು ದೋಷಯುಕ್ತವಾದರೂ ಬಿಡಬಾರದು. ಇಂಥ ಸೂಕ್ತಿಗಳನ್ನು ಗೀತೆಯಿಂದ ಆರಿಸಿ ಕೊಂಡು ವಿವೇಕಿಯಾದವನು ಸದ್ಯಃಸ್ಥಿತಿಗೂ ತಕ್ಕಂತೆ ಹೊಂದಿಸಿಕೊಳ್ಳುವದಕ್ಕೆ ಬರುತ್ತದೆ. ಮುಖ್ಯವಾಗಿ ವ್ಯವಹಾರವು ಸದ್ವ್ಯವಹಾರವಾಗಿ ಅದರಿಂದ ಈಶ್ವರನ ಅರ್ಚನೆಯಾಗಬೇಕು. ಇದೇ ಕರ್ಮಯೋಗದ ತಿರುಳು.

ಕರ್ಮಯೋಗವು ಬಾಹ್ಯ, ಶರೀರಕ್ಕೆ ಸಂಬಂಧಪಟ್ಟದ್ದು. ಧ್ಯಾನ ಯೋಗವು ಅಂತರ, ಮನಸ್ಸಿಗೆ ಸಂಬಂಧಪಟ್ಟದ್ದು. ಕರ್ಮವನ್ನು ಮಾಡುವದಕ್ಕೆ ಅಂಜುವವರು ಮಾನಸಿಕವಾದ ಭಾವನೆಯೇ ಮುಖ್ಯವೆಂದು ನುಣುಚಿ ಕೊಂಡು ವ್ಯವಹರಿಸುವದುಂಟು. 'ಮಾನಸಿಕಸ್ನಾನವನ್ನು ಮಾಡಿದ್ದೇನೆ, ಬಾಹ್ಯಸ್ನಾನವಿಲ್ಲದಿದ್ದರೆ ಏನಾಯಿತು?' ಎನ್ನುವ ಸೋಮಾರಿಗಳಿಗೆ ಮಾನಸಿಕ

ಸಾಧನೆಗೆ ತಕ್ಕಯೋಗ್ಯತೆ ಇನ್ನೂ ಬಂದಿಲ್ಲವೆಂದೇ ತಿಳಿಯಬೇಕು. 'ಮಾನಸಿಕ ಸ್ನಾನವನ್ನು ಮಾಡಿದವರಿಗೆ ಮಾನಸಿಕ ಭೋಜನವೇ ಆಗಲಿ!' ಎಂದರೆ ಅವರ ಮುಖವು ಹೇಗಾಗುವದೋ ನೋಡಿರಿ. ನಿಜವಾಗಿ ಮಾನಸಯೋಗದಲ್ಲಿ ಮುಳುಗಿರುವ ಮಹಾತ್ಮರಿಗೆ ಹೊರಗೆ ಇಂದ್ರಿಯಾರ್ಥಕರ್ಮಗಳಲ್ಲಿ ಆಸಕ್ತಿಯೂ ಇರುವದಿಲ್ಲ; ಹೊರಗಿನ ಅರಿವೂ ಇರುವದಿಲ್ಲ. ಸದಾಶಿವ ಬ್ರಹ್ಮೇಂದ್ರರೆಂಬ ರಾಜಯೋಗಿಗಳ ಇತಿಹಾಸವನ್ನು ನಿಮ್ಮಲ್ಲಿ ಕೆಲವರಾದರೂ ಕೇಳಿರಬಹುದು. ಅವರಿಗೆ ನೆಲವೇ ಹಾಸಿಗೆ ಆಕಾಶವೇ ಹೊದಿಕೆ ಯಾಗಿತ್ತು: ಮನಸ್ಸು ಮಾತ್ರ ಪರಮಾತ್ಮಚಿಂತನೆಯಲ್ಲಿ ಮುಳುಗಿತ್ತು. ಅಂಥವರು ಕೂಡ ಲೋಕದ ಜನರು ಯಾವದಾದರೂ ಯುಕ್ತಿಯುಕ್ತವಾದ ಮಾತನ್ನು ಹೇಳಿದರೆ ಗ್ರಹಿಸುತ್ತಿದ್ದರೆಂಬುದಕ್ಕೆ ಒಂದು ಕಥೆಯನ್ನು ಹೇಳುವದುಂಟು. "ಒಮ್ಮೆ ಸದಾಶಿವಬ್ರಹ್ಮೇಂದ್ರರು ಕೌಪೀನಮಾತ್ರಧಾರಿಗಳಾಗಿ ಒಂದು ಹೊಲದ ಬದುವಿನ ಮೇಲೆ ತಲೆಯನ್ನಿಟ್ಟುಕೊಂಡು ಮಲಗಿದ್ದರಂತೆ. ದಾರಿಹೋಕರಲ್ಲಿ ಕೆಲವರು 'ಆಹ! ಏನು ವಿಚಿತ್ರ! ಎಲ್ಲವನ್ನೂ ತ್ಯಜಿಸಿದ ಈ ವೈರಾಗ್ಯಶಿಖಾಮಣಿ ಗಳಿಗೂ ತಲೆದಿಂಬು ಬೇಕಾಯಿತಲ್ಲ!' ಎಂದುಕೊಂಡು ಹೋದರಂತೆ. ಅವರು ಮತ್ತೆ ಆ ಮಾರ್ಗವಾಗಿ ಬಂದಾಗ ಆ ಮಹಾತ್ಮರು ತಲೆಯನ್ನು ಇತ್ತ ಸರಿಸಿಕೊಂಡಿದ್ದರು. ಆದರೂ ಆ ಕುಹಕಿಗಳು 'ಇದೇನು? ನಾವೇನೊ ಹಾಸ್ಯಕ್ಕೆ ಹಾಗೆಂದೆವು. ಬಾಹ್ಯದೃಷ್ಟಿಯನ್ನು ಬಿಟ್ಟ ಇವರಿಗೆ ನಮ್ಮ ಮಾತಿನಲ್ಲೇಕೆ ಬೆಲೆ?' ಎಂದರಂತೆ! ಆದರೆ ಈ ಸಲ ಸದಾಶಿವರು ತಾವು ತಿದ್ದಿಕೊಳ್ಳಬೇಕಾದದ್ದೇನೂ ಅವರ ಮಾತಿನಲ್ಲಿಲ್ಲವಲ್ಲ ಎಂದು ಸುಮ್ಮನಾಗಿಬಿಟ್ಟರಂತೆ".

ಉತ್ಕಟವಾದ ವೈರಾಗ್ಯವೂ ವಿವೇಕಾಭ್ಯಾಸವೂ ಯಾವನಿಗೆ ಇರುತ್ತದೆಯೋ ಅವನಿಗೇ ಅಂತರಂಗವಾದ ಧ್ಯಾನವು ದಕ್ಕುತ್ತದೆ; ಅವನಿಗೇ ಗೀತೋಕ್ತವಾದ ವಾಸುದೇವತತ್ತ್ವದ ಅರಿವು ಲಭಿಸುತ್ತದೆ. ಆತ್ಮದರ್ಶನವು ನಮಗೆ ಹೇಗೆ ಆದೀತು? – ಎಂದು ಕೇಳುವವರಿಗೆ 'ನಿಮ್ಮ ನಿಮ್ಮ ಮನಸ್ಸಿನ ಅಂತಸ್ತಿನಿಂದ ನೀವು ಮಾಡುವ ಸಾಧನವನ್ನು ಕೈಕೊಳ್ಳಿರಿ'– ಎಂದು ಗೀತೆಯು ಉತ್ತರವನ್ನು ಕೊಟ್ಟಿರುತ್ತದೆ.

ಧ್ಯಾನೇನಾತ್ಮನಿ ಪಶ್ಯನ್ತಿ ಕೇಚಿದಾತ್ಮಾನಮಾತ್ಮನಾ।
ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ ॥

ಅನ್ಯೇ ತ್ವೇವಮಜಾನನ್ತಃ ಶ್ರುತ್ವಾಧಿನ್ಯೇಭ್ಯ ಉಪಾಸತೇ ।
ತೇಧಿಪಿ ಚಾತಿತರನ್ತ್ಯೇವ ಮೃತ್ಯುಂ ಶ್ರುತಿಪರಾಯಣಾಃ ॥ (ಗೀ. 13-24, 25).

ಧ್ಯಾನ, ಸಾಂಖ್ಯ, ಕರ್ಮಯೋಗ- ಇವುಗಳಲ್ಲಿ ನಿಮಗೆ ಯಾವದು ಅಳವಡುವದೋ ಅದನ್ನು ಅನುಷ್ಠಾನಮಾಡಿರಿ; ಕೊನೆಗೆ ನಿಮಗೆ ತತ್ತ್ವಜ್ಞಾನವು ಅವಶ್ಯವಾಗಿ ಆಗುತ್ತದೆ. ಈ ಮಾರ್ಗಗಳಲ್ಲಿ ಯಾವದೊಂದೂ ತಮಗೆ ತಕ್ಕದ್ದೆಂದು ತಿಳಿಯಲಾರದೆ ಇರುವವರು ಶ್ರದ್ಧೆಯಿಂದ ಮತ್ತೊಬ್ಬರ ಉಪದೇಶದಂತೆ ಅನುಷ್ಠಾನಮಾಡಬೇಕು. ಹಾಗೆ ಶ್ರದ್ಧಾಭಕ್ತಿಗಳಿಂದ ಅನುಷ್ಠಾನ ಮಾಡುವವರೂ ಅವಶ್ಯವಾಗಿ ಸಂಸಾರಮೃತ್ಯುವನ್ನು ಮೀರುವರು.

ಯಾವ ಸಾಧನವನ್ನೇ ಅನುಸರಿಸಲಿ, ನಿಷ್ಕಾಮನಾಗಿ ಮಾಡುವದು ಅತ್ಯವಶ್ಯವಷ್ಟೆ. ಸಾಮಾನ್ಯರಿಗೆ ಇದು ಸಾಧ್ಯವಿಲ್ಲಷ್ಟೆ. ಅವರು ಮಾಡುವ ಯಜ್ಞದಾನ ತಪಸ್ಸುಗಳು ಯಾವಾಗಲೂ ಸಕಾಮವೇ ಆಗಿರುತ್ತವೆ. ತನಗೆ ಕೊಡುವ ವರದ ಎರಡರಷ್ಟನ್ನು ಕೊಡುವಂತೆ ಮತ್ತೊಬ್ಬ ತಪಸ್ವಿಯು ಕೇಳಿಕೊಂಡಿರುವನೆಂಬುದನ್ನು ತಿಳಿದು ಸಿಡಿಮಿಡಿಗಗೊಂಡ ಒಬ್ಬ ಅವಿವೇಕಿಯು 'ಹಾಗಾದರೆ ನನ್ನ ಒಂದು ಕಣ್ಣು ಹೋಗಲಿ!' ಎಂದು ಕೇಳಿಕೊಂಡನಂತೆ! ಹೀಗಿರುತ್ತದೆ, ಪ್ರಾಕೃತಿಕರ ದೃಷ್ಟಿಷ್ಟೆ! ಅಂಥವರಿಗೆ 'ಸರ್ವತ್ರ ಸಮದರ್ಶನಃ!' ಎಂಬ ಮಾತು ಎಂದಿಗೂ ಅರ್ಥವಾಗುವದಿಲ್ಲಷ್ಟೆ.

ತ್ರಿಭಿರ್ಗುಣಮಯೈರ್ಭಾವೈರೇಭಿಃ ಸರ್ವಮಿದಂ ಜಗತ್ ।
ಮೋಹಿತಂ ನಾಭಿಜಾನಾತಿ ಮಾಮೇಭ್ಯಃ ಪರಮವ್ಯಯಮ್ ॥ (7-13)

ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ ।
ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರನ್ತಿ ತೇ ॥ ( 7-14)

ಸತ್ತ್ವರಜಸ್ತಮೋಗುಣಗಳಿಂದಾಗಿರುವ ರಾಗದ್ವೇಷಮೋಹಾದಿರೂಪವಾದ ಭಾವಗಳಿಂದೊಡಗೂಡಿದ ಜ್ಞಾನವುಳ್ಳವರಿಗೆ ಗುಣಾತೀತನಾದ ವಾಸುದೇವಭಗವಂತನ ತತ್ತ್ವವು ತಿಳಿಯಲಾರದು. 'ಈ ನನ್ನ ಗುಣಮಯವಾದ ಮಾಯೆಯು ದುಸ್ತರವಾದದ್ದು' ಎಂದು ಭಗವಂತನೇ ಹೇಳಿರುತ್ತಾನೆ. ಆದರೆ ಸರ್ವಧರ್ಮಗಳನ್ನೂ ಬಿಟ್ಟು ಮಾಯಾವಿಯಾದ ಆ ಭಗವಂತನೇ ತಮ್ಮ ಆತ್ಮನೆಂದು ಯಾರು ಆತನಿಗೇ ಶರಣುಹೋಗುವರೋ ಅವರು ಈ

ಮಾಯೆಯನ್ನು ಮೀರುತ್ತಾರೆ ಎಂದು ಮುಂದಿನ ವಾಕ್ಯದಲ್ಲಿಯೇ ಆತನು ಭರವಸೆಕೊಟ್ಟಿರುತ್ತಾನೆ. ಆದ್ದರಿಂದ ಭಗವಂತನನ್ನು ಶರಣುಹೋಗುವ ಪ್ರಯತ್ನವನ್ನು ಮಾಡುವದೇ ಸಾಧನದ ಮರ್ಮವೆಂದಾಯಿತು.

ಭಗವಂತನನ್ನೇ ಭಜಿಸುವ ಮಾರ್ಗಕ್ಕೆ ಭಕ್ತಿಮಾರ್ಗವೆಂದು ಹೆಸರು. ಪಾಪವಾಸನೆಯುಳ್ಳ ಪ್ರಾಕೃತಜನರಿಗೆ ಈ ಭಕ್ತಿಮಾರ್ಗವು ರುಚಿಸುವದಿಲ್ಲ. ಏಕೆಂದರೆ ಅವರ ವಿವೇಕವನ್ನು ಮೇಲೆ ಹೇಳಿದ ಮಾಯೆಯು ಅಪಹರಿಸಿ ಬಿಟ್ಟಿರುತ್ತದೆ. ಅವರಿಗೆ ನಾನು, ನನ್ನದು – ಎಂಬ ಆಸುರಭಾವವೇ ಪ್ರಧಾನ ವಾಗಿರುತ್ತದೆ. ಆದರೆ ಸಾತ್ತ್ವಿಕರಾಗಿ ಪುಣ್ಯವನ್ನೆಸಗಿದವರು ಮಾತ್ರ ಈ ಭಕ್ತಿಮಾರ್ಗವನ್ನು ಅವಲಂಬಿಸುವದಕ್ಕೆ ತಕ್ಕವರಾಗಿರುತ್ತಾರೆ. ಅಂಥವ ರಲ್ಲಿಯೂ ಭಕ್ತಿಯ ನಿಮಿತ್ತವು ಬೇರೆಬೇರೆಯಾಗಿರುತ್ತದೆ. ಆದ್ದರಿಂದ ಭಕ್ತರನ್ನು ಭಗವಂತನು ನಾಲ್ಕು ತರಗತಿಗಳವರಾಗಿ ವಿಂಗಡಿಸಿರುತ್ತಾನೆ. ಆರ್ತ, ಅರ್ಥಾರ್ಥಿ, ಜಿಜ್ಞಾಸು, ಜ್ಞಾನಿ – ಎಂದು ಭಕ್ತರಲ್ಲಿ ನಾಲ್ಕು ಪಂಗಡ. ಆರ್ತನು ಎಂದರೆ ಕಳ್ಳಕಾಕರ ಭಯ, ಹುಲಿಯ ಭಯ, ಯಾವದಾದರೊಂದು ಅಪಾಯ, ರೋಗ, ಮುಂತಾದ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ತಾಪ ಗಳಿಂದ ಸಂಕಟಪಡುತ್ತಿರುವವನು. ಸಂಸಾರದಲ್ಲಿ ತಾಪತ್ರಯವಿಲ್ಲದವರು ಯಾರಿದ್ದಾರೆ? ಸಾಮಾನ್ಯವಾಗಿ ಜನರು ಈ ತಮ್ಮ ತೊಂದರೆಯನ್ನು ಲೌಕಿಕ ವಾದ ಉಪಾಯಗಳಿಂದಲೇ ಬಗೆಹರಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿರುತ್ತಾರೆ; ಆದರೆ ಭಗವಂತನೇ ಸರ್ವಾರ್ತಿಗಳನ್ನೂ ಪರಿಹರಿಸಬಲ್ಲವನು ಎಂದು ನೆರೆನಂಬಿ ಆತನನ್ನು ಭಜಿಸುವವರು ಆರ್ತಭಕ್ತರು. ಲೌಕಿಕವಾದ ಉಪಾಯ ಗಳಿಗೆ ಕೂಡ ವೀರ್ಯವು ಬಂದು ಸಫಲವಾಗುವದಕ್ಕೆ ಭಗವದ್ಭಕ್ತಿಯು ಬೇಕು– ಎಂದು ನಂಬುವ ಆರ್ತಭಕ್ತಿಯೂ ಸುಕೃತದ ಫಲವೇ ಸರಿ. ಇನ್ನು ಅರ್ಥಾರ್ಥಿ ಎಂದರೆ ಧನಕಾಮನು, ಮನೆಮಠ, ಹಣ, ಅಧಿಕಾರ, ವಿದ್ಯೆ, ಕೀರ್ತಿ– ಮುಂತಾದ ಆರ್ಥಿಕ ಸಂಪತ್ತು ತಮಗೆ ಆಗಬೇಕೆನ್ನುವವರು ಲೌಕಿಕೋಪಾಯಗಳನ್ನು ಅನುಸರಿಸುವದು ಸ್ವಾಭಾವಿಕವಾಗಿದೆ; ಹಾಗೆ ಅನುಸರಿಸುವದರಲ್ಲಿ ತಮ್ಮ ಉದ್ದೇಶವು ನೆರವೇರುವದಕ್ಕೆ ಪಾಪಾಚರಣೆ ಯನ್ನು ಮಾಡುವದಕ್ಕೆ ಕೂಡ ಅವರು ಹೇಸುವದಿಲ್ಲ. ಆದರೆ ಅಷ್ಟೈಶ್ವರ್ಯ ಗಳಿಗೂ ಒಡೆಯನು ಭಗವಂತನೇ; ಸಮಗ್ರೈಶ್ವರ್ಯಯುಕ್ತನಾದ ಆತನ

ಅನುಗ್ರಹದಿಂದಲೇ ನನಗೆ ಧರ್ಮಾರ್ಜಿತವಾದ ಧನವು ಬರಲಿ!– ಎಂದು ಹಾರೈಸಿ ಭಗವಂತನನ್ನು ಭಜಿಸುವದು ಪುಣ್ಯದಿಂದಲೇ ಲಭಿಸಬೇಕು. ಇನ್ನು ಜಿಜ್ಞಾಸು ಎಂದರೆ ಭಗವತ್ತತ್ತ್ವವನ್ನು ಅರಿತುಕೊಳ್ಳಬೇಕೆಂದು ಹವಣಿಸುವ ವನು. ನನಗೆ ಕಷ್ಟಗಳು ಪರಿಹಾರವಾಗಲಿ ಆಗದಿರಲಿ, ಆರ್ಥಿಕಸಂಪತ್ತು ಉಂಟಾಗಲಿ ಆಗದಿರಲಿ, ಭಗವಂತನ ಸ್ವರೂಪವನ್ನು ಅರಿತುಕೊಳ್ಳುವದೇ ಜೀವನದ ಧ್ಯೇಯವಾಗಿರಲಿ! 'ಭಗವಂತನೆ, ನನಗೆ ಮತ್ತೇನನ್ನಾದರೂ ನನ್ನ ಕರ್ಮಾನುಗುಣವಾಗಿ ಕೊಡುವದೂ ಬಿಡುವದೂ ನಿನಗೆ ಸೇರಿದ್ದು; ಆದರೆ ನಾನು ಯಾವ ಸ್ಥಿತಿಯಲ್ಲಿರಲಿ, ನಿನ್ನ ಸ್ಮರಣೆಯು ನನಗೆ ತಪ್ಪದೆ ಇರಲಿ. ನಿನ್ನ ತತ್ತ್ವವನ್ನು ನನಗೆ ಅರುಹಿ ಅನುಗ್ರಹಿಸು!' ಎಂದು ಸತತವೂ ಬೇಡುತ್ತಿರುವ ಭಕ್ತನು ಆರ್ತಭಕ್ತನಿಗಿಂತಲೂ ಅರ್ಥಾರ್ಥಿ ಭಕ್ತನಿಗಿಂತಲೂ ಹೆಚ್ಚಿನ ಸ್ಥಿತಿಯಲ್ಲಿರು ತ್ತಾನೆ. ಅವನಿಗೆ ವೈರಾಗ್ಯವೂ ಸ್ಥಿರಪ್ರಯತ್ನವೂ ಇರುತ್ತಿರುವದರಿಂದ ಭಗವಂತನ ದರ್ಶನವು ಮಿಕ್ಕವರಿಗಿಂತ ಬೇಗನೆ ಆಗುವ ಸಂಭವವಿರುತ್ತದೆ.

ಭಗವಂತನನ್ನು ಭಜಿಸುವದಕ್ಕೆ ಮಾಯೆಯು ಅಡ್ಡಬರುತ್ತದೆ ಎಂದು ಹೇಳಿದ್ದಾಗಿದೆಯಷ್ಟೆ; ಆದರೆ ಭಕ್ತರಿಗೆ ಈ ಮಾಯೆಯು ಅಡ್ಡಿಯಾಗುವದಿಲ್ಲ, ಏಕೆಂದರೆ ಅವರು ಭಗವಂತನನ್ನೇ ಭಜಿಸುವದಕ್ಕೆ ಹೊರಟಿರುತ್ತಾರೆ. ಇದಲ್ಲದೆ ಅವರಿಗೆ 'ವಾಸುದೇವಃ ಸರ್ವಮಿತಿ' ವಾಸುದೇವನೇ ಎಲ್ಲವೂ ಎಂಬ ಅಮೋಘವಾದ ಉಪದೇಶವು ಕಿವಿಗೆ ಬಿದ್ದಿರುತ್ತದೆ. ಆದ್ದರಿಂದ ಅವರನ್ನು ಗುಣಮಯವಾದ ಭಾವಗಳು ಮಾಯೆಯ ರೂಪದಿಂದ ದುಃಖಸಂಕಟಕ್ಕೆ ಈಡುಮಾಡುವ ಸಂಭವವು ಬಹಳ ಕಡಿಮೆ. ಅಂಥವರಿಗೆ ಗೀತೆಯಲ್ಲಿ ಹತ್ತನೆಯ ಅಧ್ಯಾಯದಲ್ಲಿ ಹೇಳಿರುವ ವಿಭೂತಿಯೋಗವು ಸಹಾಯಕ ವಾಗುತ್ತದೆ. ಭಗವಂತನ ವಿಭೂತಿಗಳು ಈ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಕಾಣುತ್ತಿರುತ್ತವೆ. ಗೀತೆಯಲ್ಲಿ ಹೇಳಿರುವಂತೆ ಆದಿತ್ಯರಲ್ಲಿ ಭಗವಂತನು ವಿಷ್ಣು ಜ್ಯೋತಿಗಳಲ್ಲಿ ಸೂರ್ಯನು, ನಕ್ಷತ್ರಗಳಲ್ಲಿ ಚಂದ್ರನು, ವೃಕ್ಷಗಳಲ್ಲಿ ಅಶ್ವತ್ಥವು, ಅಕ್ಷರಗಳಲ್ಲಿ ಅಕಾರವು, ಜಯವೂ ವ್ಯವಸಾಯವೂ ಆತನ ವಿಭೂತಿಗಳೇ– ಎಂದು ಅಲ್ಲಲ್ಲಿ ಭಗವಂತನ ಮಹಿಮೆಯನ್ನು ಕಾಣುವ ಪುಣ್ಯಫಲವು ಅವರಿಗೆ ಸಿಕ್ಕಿರುತ್ತದೆ. ಇಡಿಯ ಜಗತ್ತೇ ಭಗವಂತನ ಮಹಾವಿಭೂತಿಯು ಎಂದು ಹೇಳುವ ಭಕ್ತಮಹಾಶಯರ ದರ್ಶನ, ಸ್ಪರ್ಶನ, ಸಂಭಾಷಣೆಗಳಿಂದಲೂ

ಅವರು ಮೆಲ್ಲಮೆಲ್ಲಗೆ ಭಗವಂತನಲ್ಲಿ ಅನನ್ಯಭಕ್ತಿಯನ್ನು ಮಾಡುವ ಮಾರ್ಗಕ್ಕೆ ತಿರುಗುತ್ತಾರೆ.

ಯಾರು ಭಗವಂತನ ವಿಭೂತಿಗಳನ್ನು ಹೀಗೆ ಚಿಂತಿಸುತ್ತಿರುವರೋ ಅವರಿಗೆ ನಿದಿಧ್ಯಾಸನದ ಮೂಲಕವಾಗಿ ಭಗವತ್ತತ್ತ್ವವನ್ನು ತಿಳಿಯುವದು ಬಹಳ ಸುಲಭವಾಗುವದು. ಹಾಗೆ ತಿಳಿದಮೇಲೆ ಭಗವಂತನಲ್ಲಿ ಪರಭಕ್ತಿಯುಂಟಾಗುವದು.

* * * * *

## 12. ಉಪಸಂಹಾರ

ಈಗ ಭಗವದ್ಗೀತಾಪ್ರಸ್ಥಾನದ ವಿಚಾರವನ್ನು ಉಪಸಂಹಾರಮಾಡಬೇಕಾಗಿದೆ. "ಭಗವಂತನು ಅರ್ಜುನನಿಗೆ ಗಾನದಂತೆ ಇಂಪಾಗಿ ಹೇಳಿದ ಹಿತೋಕ್ತಿಯಾದ್ದರಿಂದ ಇದಕ್ಕೆ ಭಗವದ್ಗೀತೆ" ಎಂಬ ಹೆಸರು ಬಂದಿರುತ್ತದೆ. ಆದರೆ ಭಗವಂತನೇ ಇದಕ್ಕೆ ಅಭಿಧೇಯವಾಗಿರುವದರಿಂದ ಇದನ್ನು ಭಗವದ್ಗೀತೆ ಎಂದು ಕರೆಯುವದು ಇನ್ನೂ ಹೆಚ್ಚು ಯುಕ್ತವಾಗಿರುತ್ತದೆ ಎಂದು ಆಗಲೆ ಹೇಳಿರುವದನ್ನು ನೆನಪಿನಲ್ಲಿಡುವದು ಲಾಭದಾಯಕವಾಗಿರುತ್ತದೆ.

ಭಗವದ್ಗೀತೆಯಲ್ಲಿ ಪ್ರವೃತ್ತಿಧರ್ಮ; ನಿವೃತ್ತಿಧರ್ಮ– ಎಂದು ಎರಡು ಧರ್ಮಗಳನ್ನು ಮುಖ್ಯವಾಗಿ ಹೇಳಿರುತ್ತದೆ. ಪ್ರವೃತ್ತಿಧರ್ಮವನ್ನು ಕರ್ಮಯೋಗವಾಗಿ – ಭಗವಂತನ ಪ್ರೀತ್ಯರ್ಥವಾಗಿ ಕರ್ಮವನ್ನು ನಿಷ್ಕಾಮನಾಗಿ ಮಾಡುವ ಯೋಗವಾಗಿ – ಮಾರ್ಪಡಿಸಿಕೊಂಡು ಅನುಷ್ಠಾನಮಾಡಿರುವ ಮುಮುಕ್ಷುಗಳಿಗೆ ಧ್ಯಾನಯೋಗವನ್ನು ಹೇಳಿರುತ್ತದೆ.

ಧ್ಯಾನಯೋಗಕ್ಕೆ ಪಾತಂಜಲಯೋಗವನ್ನು ಗಂಟುಹಾಕಿ, ಯೋಗದ ಬೇರೆ ಬೇರೆಯ ಭೂಮಿಕೆಗಳನ್ನು ವರ್ಣಿಸುವವರೂ ಇದು ಭಗವದ್ಭಕ್ತಿಗೆ ಅರ್ಹತೆಯನ್ನು ಕೊಡುವದರಿಂದ ಯೋಗವೆನಿಸುವದೆಂದು ಹೇಳುವವರೂ ಅನೇಕರು ಇದಾರೆ. ಆದರೆ ಇದು ಸರಿಯಲ್ಲ. ವೇದಾಂತದಲ್ಲಿ ಹೇಳಿರುವ ಆತ್ಮಜ್ಞಾನವನ್ನು ಶ್ರವಣಮನನನಿದಿಧ್ಯಾಸನಗಳಿಂದ ಪಡೆದುಕೊಳ್ಳಬೇಕಾಗಿದೆಯಷ್ಟೆ. ಈ ಸಾಧನಗಳನ್ನು ಅನುಷ್ಠಾನಮಾಡುವದಕ್ಕೆ ಕಾಮವೇ ನಮಗೆ

ಮುಖ್ಯವಾದ ಅಡ್ಡಿಯಾಗಿರುತ್ತದೆ. ಶ್ರವಣವೆಂದರೇನು? ಈಗ ಇಲ್ಲಿ ಲೌಡ್ ಸ್ಪೀಕರಿನಿಂದ ಹೊರಡುತ್ತಿರುವ ಧ್ವನಿಯು ಹಾದಿಯಲ್ಲಿ ಹೋಗುತ್ತಿರುವವರ ಕಿವಿಗೆ ಬೇಡವೆಂದರೂ ಬೀಳುತ್ತಿರುವಂತೆ ವೇದಾಂತದ ಉಪದೇಶದ ಮಾತು ತಾನೇ ಕಿವಿಗೆ ಬೀಳುವದು ಶ್ರವಣವಲ್ಲ. ಅಧಿಕಾರಿಯಾದವನು ಮನಸ್ಸುಕೊಟ್ಟು ಕೇಳಿ ಉಪದೇಶವನ್ನು ಗ್ರಹಿಸುವದೇ ಶ್ರವಣವು. ಆದರೆ ಯಾವನಿಗೆ ಅಹಂ ಮಮ ಎಂಬ ಬುದ್ಧಿಯು ಇರುವದೋ ಅಂಥವನಿಗೆ ಕಾಮದಿಂದ ಮನಸ್ಸು ವಿಕ್ಷೇಪವಾಗುವದು ನಿಶ್ಚಯ. ಭಗವಂತನ ಕಡೆಗೆ ತಿರುಗಿ ಭಗವಂತನ ವಿಚಾರ ದಲ್ಲಿಯೇ ಮನಸ್ಸು ಒಲಿದುನಿಂತಿರುವವರು ಭಾಗವತರು; ಅವರಿಗೆ 'ನ ಮಮ' ಎಂಬ ಬುದ್ಧಿಯು ಚೆನ್ನಾಗಿ ನೆಟ್ಟಿರುತ್ತದೆ. 'ನ ಮಮ' ಎಂದು ದಾನವನ್ನು ಮಾಡುವವರು, ಅದರಲ್ಲಿಯೂ ಈಶ್ವರಾರ್ಪಣ ಬುದ್ಧಿಯಿಂದ ದಾನಮಾಡುವವರು, ಈ ಯೋಗ್ಯತೆಯನ್ನು ಕ್ರಮಕ್ರಮವಾಗಿ ಪಡೆದುಕೊಳ್ಳು ತ್ತಾರೆ. ಯಜ್ಞ ದಾನ ತಪಸ್ಸು- ಇವುಗಳು ಭಗವದರ್ಪಿತವಾದಾಗಲೇ ಕರ್ಮಯೋಗವೆನಿಸುತ್ತವೆ; ಆ ಯೋಗವನ್ನು ಮಾಡಿ ಅದರಲ್ಲಿ ನಿಷ್ಣಾತನಾದ ವನಿಗೆ ಧ್ಯಾನಯೋಗಕ್ಕೆ ಅರ್ಹತೆ ಬರುತ್ತದೆ. 'ಆರುರುಕ್ಷೋರ್ಮುನೇ ರ್ಯೋಗಂ ಕರ್ಮ ಕಾರಣ ಮುಚ್ಯತೇ' ಎಂಬ ಉಕ್ತಿಯ ಅರ್ಥವೇ ಇದು.

ಭಗವದ್ಭಾವನೆಯಿಲ್ಲದವನಿಗೆ ಈ ಧ್ಯಾನಯೋಗವು ದಕ್ಕಲಾರದು.

ಯೋಗಿನಾಮಪಿ ಸರ್ವೇಷಾಂ ಮದ್ಗತೇನಾನ್ತರಾತ್ಮನಾ ।
ಶ್ರದ್ಧಾವಾನ್ ಭಜತೇ ಯೋ ಮಾಂ ಸ ಮೇ ಯುಕ್ತತಮೋ ಮತಃ ॥

ಭಗವದ್ಭಾವನೆಗೆ ವಿಭೂತ್ಯುಪಾಸನೆಯು ಸಾಧಕವಾಗಿರುತ್ತದೆ. ಭಗವಂತನು ಮೊದಮೊದಲು ಸಾತ್ತ್ವಿಕವಾದ ವಸ್ತುಗಳನ್ನು ಮಾತ್ರ ವಿಭೂತಿ ಯೆಂದು ಹೇಳುತ್ತಾ ಕೊನೆಕೊನೆಗೆ ಗುಣತ್ರಯಾತ್ಮಕವಾದ ವಸ್ತುಗಳೆಲ್ಲವೂ ತನ್ನ ವಿಭೂತಿಯೆಂದೇ ಹೇಳಿರುವದನ್ನೂ ತೀರ ಕೊನೆಯಲ್ಲಿ ಇಡಿಯ ಜಗತ್ತೇ ತನ್ನ ಒಂದಂಶಮಾತ್ರವಾಗಿರುವ ವಿಭೂತಿಯೆಂದು ತಿಳಿಸಿರುವದನ್ನೂ ಮನದಂದರೆ ನಮ್ಮ ಮೇಲೆ, ಕೆಳಗೆ, ಒಳಗೆ, ಹೊರಗೆ, ಎಲ್ಲೆಲ್ಲಿಯೂ ಭಗವಂತನೇ ಇರುವನೆಂಬ ಭಾವನೆಗೆ ಅಂಗವಾಗಿಯೇ ಈ ವಿಭೂತ್ಯುಪದೇಶವನ್ನು ಮಾಡಿರುತ್ತದೆ ಎಂಬುದು ಸ್ಪಷ್ಟವಾಗುವದು.

ಭಗವಂತನು ವಿಭೂತಿಗಳನ್ನು ಉಪದೇಶಿಸಿ ಇಡಿಯ ಜಗತ್ತೇ ತನ್ನ ವಿಭೂತಿಯೆಂದು ಹೇಳಿದ ಬಳಿಕ ಅರ್ಜುನನ ಪ್ರಾರ್ಥನೆಯಂತೆ ಈ ಉಪದೇಶವನ್ನು ಮನಗಾಣಿಸುವದಕ್ಕೆ ವಿಶ್ವರೂಪವನ್ನು ತೋರಿಸಿದನು. ಬಳಿಕ ಆತನು ಹೇಳಿರುವದೇನು?

ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಙ್ಗವರ್ಜಿತಃ ।
ನಿರ್ವೈರಃ ಸರ್ವ ಭೂತೇಷು ಯಃ ಸ ಮಾಮೇತಿಪಾಣ್ಡವ ॥ (11-55)

ಭಗವಂತನಿಗಾಗಿಯೇ ಕರ್ಮಮಾಡುವದು, ಭಗವಂತನೇ ನನಗೆ ಪರಮಗತಿ ಎಂದು ಭಾವಿಸಿರುವದು, ಭಗವಂತನನ್ನೇ ಸರ್ವೋತ್ಸಾಹ ದಿಂದಲೂ ಸರ್ವಪ್ರಕಾರಗಳಿಂದಲೂ ಭಜಿಸುತ್ತಿರುವದು, ಧನ ಪುತ್ರ ಮಿತ್ರಕಲತ್ರಬಂಧುವರ್ಗಗಳಲ್ಲಿ ಸಂಗವರ್ಜಿತನಾಗಿರುವದು, ಯಾವ ಪ್ರಾಣಿ ಗಳಲ್ಲಿಯೂ, ಅಪಕಾರಿಗಳಲ್ಲಿ ಕೂಡ, ವೈರವಿಲ್ಲದಿರುವದು- ಈ ಗುಣಗಳಿಂದ ಕೂಡಿರುವವನೇ ನನ್ನನ್ನು ಹೊಂದುವನು ಎಂದು ಉಪದೇಶಿಸಿರುತ್ತಾನೆ. ಶ್ರೀಶಂಕರಾಚಾರ್ಯರ ಅಭಿಪ್ರಾಯದಲ್ಲಿ ಭಗವಂತನು ಅರ್ಜುನನಿಗೆ ಹೇಳಿರು ವದರಲ್ಲಿ ಗೌಣವು ಯಾವದು, ಮುಖ್ಯವು ಯಾವದು?- ಎಂಬುದನ್ನು ತಿಳಿಯ ಲಿಚ್ಛಿಸುವವರು ಆ ಆಚಾರ್ಯರು ಈ ಶ್ಲೋಕಕ್ಕೆ ಕೊಟ್ಟಿರುವ ಅವತರಣಿಕೆ ಯನ್ನು ಮನದಟ್ಟು ಮಾಡಿಕೊಳ್ಳಬೇಕು. 'ಅಧುನಾ ಸರ್ವಸ್ಯ ಗೀತಾಶಾಸ್ತ್ರಸ್ಯ ಸಾರಭೂತೋಽರ್ಥೋ ನಿಃಶ್ರೇಯಸಾರ್ಥೋಽನುಷ್ಠೇಯತ್ವೇನ ಸಮುಚ್ಚಿ ತ್ಯೋಚ್ಯತೇ' ಈಗ ಗೀತಾಶಾಸ್ತ್ರದಲ್ಲೆಲ್ಲ ಸಾರಭೂತವಾಗಿ ಮೋಕ್ಷಕಾರಣವೆಂದು ಅನುಷ್ಠಾನಮಾಡ ತಕ್ಕದ್ದನ್ನು ಒಟ್ಟುಗೂಡಿಸಿ ಇಲ್ಲಿ ಹೇಳಿರುತ್ತದೆ- ಎಂಬುದು ಈ ವಾಕ್ಯದ ಅರ್ಥ. ಇದು ಸರ್ವಗುಹ್ಯತಮವೆಂದೂ ಹಿತತಮವಾದ ಉಪದೇಶ ವೆಂದೂ ಭಗವಂತನು ಗೀತೋಪದೇಶದ ಕೊನೆಯಲ್ಲಿ ಮತ್ತೊಮ್ಮೆ ಪ್ರತಿಜ್ಞಾ ಪೂರ್ವಕವಾಗಿ ಹೇಳಿರುತ್ತಾನೆ. ಆಚಾರ್ಯರು ಅದ್ವೈತವೇ ಗೀತೋಕ್ತವಾದ ಸಿದ್ಧಾಂತವೆಂದು ತೋರಿಸಿಕೊಡುವದಕ್ಕೇ ಕಟಿಬದ್ಧರಾಗಿದ್ದರೂ ದ್ವೈತವನ್ನವ ಲಂಬಿಸಿರುವ ಈ ಉಪಾಸನೆಯನ್ನೇ ಗೀತೋಕ್ತವಾದ ಅನುಷ್ಠಾನದ ಸಾರಸಮುಚ್ಚಯವೆಂದು ಹೇಳಿರುವದೇಕೆಂಬುದನ್ನು ನಾವು ತಿಳಿದಿರುವದು ಒಳ್ಳೆಯದು. ಅದನ್ನು ಆಚಾರ್ಯರೇ ವಿವರಿಸಿ ಹೀಗೆ ತಿಳಿಸಿರುತ್ತಾರೆ: ''ಯಸ್ಮಾಚ್ಚಾರ್ಜುನಸ್ಯ ಅತ್ಯನ್ತಮೇವ ಹಿತೈಷೀ ಭಗವಾನ್, ತಸ್ಯ ಸಮ್ಯಗ್ದರ್ಶ

ನಾನಾಗನ್ವಿತಂ ಕರ್ಮಯೋಗಂ ಭೇದದೃಷ್ಟಿಮನ್ತಮೇವೋಪದಿಶತಿ'' ಅರ್ಜುನನಿಗೆ ಅತ್ಯಂತವಾಗಿ ಹಿತೈಷಿಯಾಗಿರುವದರಿಂದ ಭಗವಂತನು ಅವನಿಗೆ ಸಮ್ಯಗ್ದರ್ಶನದ ಸಂಬಂಧವಿಲ್ಲದ ಭೇಧದೃಷ್ಟಿಯುಳ್ಳ ಕರ್ಮಯೋಗವನ್ನೇ ಉಪದೇಶಿಸಿರುತ್ತಾನೆ.

ಸರ್ವತ್ರ ಸಮದರ್ಶನರೂಪವಾದ ಪರಮಾತ್ಮಜ್ಞಾನವು ಎಲ್ಲರಿಗೂ ದಕ್ಕುವ ದಿಲ್ಲ; ಅದು ಯಾರಿಗೆ ಆಗುವದೋ ಅವರಿಗೆ ಈಗಲೇ ಇಲ್ಲಿಯೇ ಕೃತಾರ್ಥತೆಯಾಗಿಬಿಡುತ್ತದೆ. ಆ ಯೋಗ್ಯತೆಯಿಲ್ಲದವರಿಗೆ ಭಗವಚ್ಚರಣತೆ ಯೇ ಗತಿ– ಎಂಬುದು ಆಚಾರ್ಯರ ಅಭಿಪ್ರಾಯ. 'ಸರ್ವಧರ್ಮಾನ್ ಪರಿತ್ಯಜ್ಯ' ಎಂಬ ಶ್ಲೋಕಕ್ಕೆ ಅವತರಣಿಕೆಯಾಗಿ ಅವರು ಹೇಳಿರುವ ವಾಕ್ಯವನ್ನು ನೋಡಿರಿ: ''ಕರ್ಮಯೋಗನಿಷ್ಠಾಯಾಃ ಪರಮರಹಸ್ಯಮೀಶ್ವರಶರಣತಾ ಮುಪಸಂಹೃತ್ಯ, ಅಥೇದಾನೀಂ ಕರ್ಮಯೋಗನಿಷ್ಠಾಫಲಂ ಸಮ್ಯಗ್ದರ್ಶನಂ ಸರ್ವವೇದಾನ್ತವಿಹಿತಸಾರಂ ವಕ್ತವ್ಯಮಿತ್ಯಾಹ''– ಕರ್ಮಯೋಗನಿಷ್ಠೆಯಲ್ಲಿ ಪರಮರಹಸ್ಯವಾದದ್ದು ಈಶ್ವರನನ್ನು ಶರಣು ಹೋಗುವದು. ಅದನ್ನು 'ಮನ್ಮನಾ ಭವ ಮದ್ಭಕ್ತಃ' ಎಂದು ಹೇಳಿ ಉಪಸಂಹಾರಮಾಡಿ ಇನ್ನು ಈಗ ಕರ್ಮಯೋಗನಿಷ್ಠೆಯ ಫಲವಿದೆಯಲ್ಲ, ಸರ್ವವೇದಾಂತಗಳಲ್ಲಿಯೂ ವಿಹಿತವಾಗಿರುವ ಆ ಸಮ್ಯಗ್ದರ್ಶನವೆಂಬುದರ ಸಾರವನ್ನು ಹೇಳಬೇಕೆಂದು 'ಸರ್ವ ಧರ್ಮಾನ್ ಪರಿತ್ಯಜ್ಯ' ಎಂದು ಹೇಳಿರುತ್ತಾನೆ ಎಂಬುದು ವಾಕ್ಯದ ಅರ್ಥ.

ಕರ್ಮಯೋಗದಿಂದ ಚಿತ್ತಶುದ್ಧಿಯನ್ನು ಪಡೆದಿರುವ ಉತ್ತಮಾಽ ಕಾರಿಗಳಿಗೆ ಆತ್ಮಜ್ಞಾನನಿಷ್ಠೆಯು ಇಲ್ಲಿಯೇ ಮತ್ತೇನನ್ನೂ ಬಯಸದೆ ಆಗಿಬಿಡುತ್ತದೆ. ಆ ಜ್ಞಾನನಿಷ್ಠೆಯಾದವರೇ ಪರಭಕ್ತರು. ನಾಲ್ಕು ವಿಧದ ಭಕ್ತರು ಭಗವಂತನನ್ನು ಭಜಿಸುತ್ತಾರೆ; ಅವರಲ್ಲಿ ಜ್ಞಾನಿಯು ಉತ್ತಮಭಕ್ತನು.

ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।
ಪ್ರಿಯೋ ಹಿ ಜ್ಞಾನಿನೋಧಿತ್ಯರ್ಥಮಹಂ ಸ ಚ ಮಮ ಪ್ರಿಯಃ ॥
ಉದಾರಾಃ ಸರ್ವ ಏವೈತೇ ಜ್ಞಾನೀತ್ವಾತ್ಮೈವ ಮೇ ಮತಮ್ ॥ (7-16, 17)

'ಈ ನಾಲ್ವರಲ್ಲಿ ಜ್ಞಾನಿಯೇ ಮುಖ್ಯಭಕ್ತನು; ಏಕೆಂದರೆ ಅವನು

ಮಿಕ್ಕೆಲ್ಲವನ್ನೂ ಬಿಟ್ಟು ನನ್ನಲ್ಲಿಯೇ ಯಾವಾಗಲೂ ತನ್ನ ಚಿತ್ತವನ್ನು ಇಟ್ಟುಕೊಂಡಿರು ತ್ತಾನೆ. ಮಿಕ್ಕವರೂ ಉತ್ಕೃಷ್ಟರೇ ಸರಿ; ಆದರೆ ಜ್ಞಾನಿಯು ನನ್ನ ಆತ್ಮನೇ ಆಗಿರುತ್ತಾನೆ' ಎಂದು ಭಗವಂತನು ಆಡಿರುವ ವಚನವನ್ನು ಮನದಂದು ಕೊಂಡವರಿಗೆ ಗೀತೆಯು ಧ್ಯಾನದಲ್ಲಿ ಪರ್ಯವಸಾನವಾಗಿರುವದೋ ಜ್ಞಾನದಲ್ಲಿ ಪರ್ಯವಸಾನವಾಗಿರುತ್ತದೆಯೋ ಎಂಬ ಬಗ್ಗೆ ಸಂಶಯವು ಉಳಿಯುವದಿಲ್ಲ.

ಇದಲ್ಲದೆ ಜ್ಞಾನನಿಷ್ಠೆಯನ್ನು ಪಡೆಯುವದೆಂದರೆ ಜ್ಞಾನದ ಪರ್ಯವಸಾನವೆಂದರ್ಥವಷ್ಟೆ. ನಿಜವಾಗಿ ನೋಡಿದರೆ ಆತ್ಮಜ್ಞಾನವನ್ನು ಹೊಸದಾಗಿ ಮಾಡಿಕೊಳ್ಳ ಬೇಕಾದದ್ದೇ ಇಲ್ಲ. ಏಕೆಂದರೆ ಭಗವಂತನು ನಮ್ಮೆಲ್ಲರ ಆತ್ಮನಾಗಿರುತ್ತಾನೆಂಬುದು ''ಅಹಮಾತ್ಮಾ ಗುಡಾಕೇಶ'' ''ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ''– ಮುಂತಾದ ವಚನಗಳಿಂದ ಸಿದ್ಧವಾಗಿರುತ್ತದೆ. ಹೀಗಿರುವಲ್ಲಿ ಆತ್ಮನನ್ನು ಧ್ಯಾನದಿಂದ ತಿಳಿಯುವದು ಎಂದರೇನು? ಆತ್ಮನು ವಿಷಯನಲ್ಲ, ಜ್ಞಾನವು ತನ್ನ ವಿಷಯದ ಆಕಾರವನ್ನು ಪಡೆಯದೆ ಯಾವ ವಸ್ತುವನ್ನೂ ತಿಳಿಸಿಕೊಡುವಂತಿಲ್ಲ. ಆದ್ದರಿಂದ ಆತ್ಮಜ್ಞಾನನಿಷ್ಠೆ ಎಂಬುದು ದುರ್ಲಭವಾಯಿತಲ್ಲ!– ಎಂದು ಶಂಕಿಸಿ ಆಚಾರ್ಯರು ಹೀಗೆಂದಿರುತ್ತಾರೆ. 'ಅತ್ಯನ್ತನಿರ್ಮಲತ್ವಾತಿಸ್ವಚ್ಛತ್ವಾತಿಸೂಕ್ಷ್ಮತ್ವೋಪಪತ್ತೇರಾತ್ಮನಃ । ಬುದ್ಧೇಶ್ಚಾ ತ್ಮಸಮನೈರ್ಮಲ್ಯಾದ್ಯುಪಪತ್ತೇರಾತ್ಮಚೈತನ್ಯಾಕಾರಾಭಾಸತ್ವೋಪಪತ್ತಿಃ'' ಆತ್ಮನು ಅತ್ಯಂತನಿರ್ಮಲನೂ ಸ್ವಚ್ಛನೂ ಅತಿಸೂಕ್ಷ್ಮನೂ ಆಗಿರುವದರಿಂದ ಬುದ್ಧಿಯನ್ನೂ ಅತ್ಯಂತನೈರ್ಮಲ್ಯವೇ ಮುಂತಾದ ಸ್ವಭಾವದ್ದನ್ನಾಗಿ ಮಾಡಿಕೊಂಡರೆ ಅದರಲ್ಲಿ ಆತ್ಮಚೈತನ್ಯದ ಆಭಾಸವುಂಟಾಗಬಹುದಾಗಿದೆ. ಇದನ್ನೇ ಆತ್ಮಜ್ಞಾನವೆಂದು ಉಪಚಾರಕ್ಕೆ ಕರೆಯುತ್ತಾರೆ. ಆತ್ಮಚೈತನ್ಯದ ಆಭಾಸ ದಿಂದಲೇ ಬುದ್ಧ್ಯಾದಿಗಳಲ್ಲಿ ಚೈತನ್ಯಾಭಾಸವುಂಟಾಗುವದರಿಂದ ಅವನ್ನೇ ಆತ್ಮನೆಂದು ಅವಿವೇಕಿಗಳು ತಿಳಿದುಕೊಂಡಿರುತ್ತಾರೆ. 'ತಸ್ಮಾದವಿದ್ಯಾಧ್ಯಾ ರೋಪಣನಿರಾಕರಣ ಮಾತ್ರಂ ಬ್ರಹ್ಮಣಿ ಕರ್ತವ್ಯಮ್ ನ ತು ಬ್ರಹ್ಮವಿಜ್ಞಾನೇ ಯತ್ನಃ । ಅತ್ಯನ್ತಪ್ರಸಿದ್ಧತ್ವಾತ್ । ಅವಿದ್ಯಾಕಲ್ಪಿತ ನಾಮರೂಪವಿಶೇಷಾಕಾರಾ ಪಹೃತಬುದ್ಧೀನಾಮ್ ಅತ್ಯನ್ತಪ್ರಸಿದ್ಧಂ ಸುವಿಜ್ಞೇಯಮ್ ಆಸನ್ನತರಮ್ ಆತ್ಮಸ್ವರೂಪಮಪಿ ಅಪ್ರಸಿದ್ಧಂ ದುರ್ವಿಜ್ಞೇಯಮ್ ಅತಿ ದೂರಮ್ ಅನ್ಯದಿವ ಚ

ಪ್ರತಿಭಾತಿ ಅವಿವೇಕಿನಾಮ್ । ಬಾಹ್ಯಾಕಾರನಿವೃತ್ತಬುದ್ಧೀನಾಂ ತು ಲಬ್ಧಗುರ್ವಾತ್ಮಪ್ರಸಾದಾನಾಂ ನಾತಃಪರಂ ಸುಖಂ ಸುಪ್ರಸಿದ್ಧಂ ಸುವಿಜ್ಞೇಯಂ ಸ್ವಾಸನ್ನತರಮಸ್ತಿ । ತಥಾ ಚೋಕ್ತಂ 'ಪ್ರತ್ಯಕ್ಷಾವಗಮಂ ಧರ್ಮ್ಯಮ್' ಇತ್ಯಾದಿ ॥ (ಗೀ.ಭಾ. 18-50) ಆದ್ದರಿಂದ ಅವಿದ್ಯೆಯಿಂದ ಆರೋಪಿತವಾಗಿರುವದನ್ನು ಅಲ್ಲಗಳೆಯುವದೊಂದನ್ನೇ ಬ್ರಹ್ಮದ ವಿಷಯದಲ್ಲಿ ಮಾಡಿಕೊಳ್ಳ ಬೇಕಾಗಿದೆಯೇ ಹೊರತು ಬ್ರಹ್ಮದ ವಿಜ್ಞಾನಕ್ಕಾಗಿ ಪ್ರಯತ್ನವನ್ನೇನೂ ಮಾಡಬೇಕಾದದ್ದಿರುವದಿಲ್ಲ. ಏಕೆಂದರೆ ಬ್ರಹ್ಮವು ಅತ್ಯಂತಪ್ರಸಿದ್ಧವಾಗಿರುತ್ತದೆ. ಅವಿದ್ಯೆಯಿಂದ ಕಲ್ಪಿತವಾಗಿರುವ ನಾಮರೂಪಗಳ ಆಯಾ ಆಕಾರಗಳು ಅಪಹರಿಸುವ ಬುದ್ಧಿಯುಳ್ಳವರಿಗೆ ಅತ್ಯಂತ ಪ್ರಸಿದ್ಧವೂ ಸುಲಭವಾಗಿ ತಿಳಿಯತಕ್ಕದ್ದೂ ಅತಿಸಮೀಪದಲ್ಲಿರುವ ತಮ್ಮ ಆತ್ಮನೇ ಆಗಿರುವದೂ ಆಗಿದ್ದರೂ ಆ ಬ್ರಹ್ಮವು ಅಪ್ರಸಿದ್ಧವಾಗಿಯೂ ತಿಳಿಯುವದಕ್ಕೆ ಕಷ್ಟವಾದದ್ದಾಗಿಯೂ ಅತಿದೂರದಲ್ಲಿರುವದಾಗಿಯೂ ತಮಗಿಂತ ಬೇರೆಯಾದದ್ದೂ ಆಗಿರುವಂತೆ ತೋರುತ್ತಿರುತ್ತದೆ. ಆದರೆ ಹೊರಗಿನ ವಿಷಯಗಳ ಆಕಾರವನ್ನು ಬಿಟ್ಟು ಹಿಂತಿರುಗಿದ ಬುದ್ಧಿಯವರೂ ಗುರುವಿನ ಮತ್ತು ಪರಮಾತ್ಮನ ಪ್ರಸಾದವನ್ನು ಪಡೆದುಕೊಂಡವರೂ ಆಗಿರುವವರಿಗೆ ಇದಕ್ಕಿಂತ ಸುಲಭವೂ ಸುಪ್ರಸಿದ್ಧವೂ ಸುವಿಜ್ಞೇಯವೂ ತೀರ ಹತ್ತಿರವಿರುವದೂ ಮತ್ತೊಂದಿರುವದಿಲ್ಲ- ಎಂಬುದು ಭಾಷ್ಯ ವಾಕ್ಯದ ಅರ್ಥವು. ನಮ್ಮ ಆತ್ಮನಾದ ಪರಮಾತ್ಮನು ಇದಾನೊ, ಇಲ್ಲವೊ ಎಂಬುದಕ್ಕಿಂತ ದಡ್ಡತನ ವಿನ್ನಾವದು?'ಸದ್ದುಮಾಡದಿರಿ ಸರ್ವೇಂದ್ರಿಯಗಳಿರ, ಮುದ್ದುರಾಮನ ಪೂಜಿಪೆ'- ಎಂದು ಒಬ್ಬ ಭಕ್ತನು ಕೇಳಿಕೊಂಡಿರುವಂತೆ 'ಪ್ರಮಾಣಗಳಿರ, ನಿಮ್ಮ ಸಹಾಯವೇನೂ ಬೇಕಿಲ್ಲ, ನನ್ನ ಆತ್ಮನೇ ಆಗಿರುವ ಪರಮಾತ್ಮನಲ್ಲಿ ನಿಷ್ಠೆಯನ್ನು ನಾನೇ ಪಡೆಯುತ್ತೇನೆ, ನೀವು ಮಾತ್ರ ಸುಮ್ಮನಿರಿ'- ಎಂದೇ ಜ್ಞಾನಿಭಕ್ತನು ಹೇಳಿ ಕೊಳ್ಳುತ್ತಿರುತ್ತಾನೆ. ಪರಮಾತ್ಮನು ಎಷ್ಟು ಮಹಿಮೆಯುಳ್ಳವನು, ಯಾವ ಸ್ವರೂಪವುಳ್ಳವನು- ಎಂಬುದನ್ನು ಜ್ಞಾನಿಭಕ್ತನೇ ಈ ನಿಷ್ಠಾರೂಪವಾದ ಪರಭಕ್ತಿಯಿಂದಲೇ ಅರಿತುಕೊಂಡು ಜ್ಞಾನಸಮಕಾಲದಲ್ಲಿಯೇ ಆ ಪರಮಾತ್ಮನಲ್ಲಿ ಪ್ರವಿಷ್ಟನಾಗುತ್ತಾನೆ. (ಗೀ. 18-55)

'ಭಗವಂತನು ಅರ್ಜುನನಿಗೆ ಉಪದೇಶಿಸುವದಕ್ಕೆ ಮೊದಲು ಮಾಡಿದ್ದು

ಜ್ಞಾನನಿಷ್ಠೆ, ಕರ್ಮನಿಷ್ಠೆ – ಎಂಬ ಎರಡೇ ಎಂದು ಆತನೇ ಹೇಳಿರುತ್ತಾನೆ. ಧ್ಯಾನಯೋಗ, ಭಕ್ತಿಯೋಗ– ಇವೆಲ್ಲ ನಡುವೆ ಎಲ್ಲಿಂದ ಏಕೆ ಬಂದವು?' ಎಂದು ಕೆಲವರು ಶಂಕಿಸುತ್ತಾರೆ. ಇವೆಲ್ಲ ಕರ್ಮಯೋಗದ ಒಳಭೇದಗಳೇ ಎಂದು ಆಗಲೆ ಈ ಶಂಕೆಗೆ ಪರಿಹಾರವನ್ನು ಹೇಳಿರುತ್ತೇನೆ. ಬಾಹ್ಯವಾದ ಕರ್ಮಯೋಗವನ್ನು– ಈಶ್ವರಾರ್ಪಣಬುದ್ಧಿಯಿಂದ ಸರ್ವ ಕರ್ಮಾನುಷ್ಠಾನವನ್ನು ಮಾಡಿ ಚಿತ್ತಶುದ್ಧಿಯನ್ನು ಹೊಂದಿದವನು ಸರ್ವ ಕರ್ಮಸಂನ್ಯಾಸವನ್ನು ಮಾಡಿ ಶ್ರವಣಮನನನಿದಿ ಧ್ಯಾಸನಗಳಿಂದ ಆತ್ಮಜ್ಞಾನವನ್ನು ಸಂಪಾದಿಸಿ ಆತ್ಮಜ್ಞಾನನಿಷ್ಠೆಯಲ್ಲಿ ನಿಂತು ಕೃತಕೃತ್ಯನಾಗಬೇಕು ಎಂಬುದೇ ವೇದಾಂತಸಂಮತವಾದ ಗೀತಾರ್ಥವು.

ಭಗವದ್ಗೀತೆಯ ಸಾರಸಂಗ್ರಹವೇನೆಂದರೆ ವೈರಾಗ್ಯಭಾವನೆಯಿಂದ ಬಾಹ್ಯ ಭಾವನೆಯನ್ನು ತೊರೆದು ಭಗವದ್ಭಕ್ತನಾಗಬೇಕು –

ತೇಷಾಂ ಸತತಯುಕ್ತಾನಾಂ ಭಜತಾ ಪ್ರೀತಿಪೂರ್ವಕಮ್ ।
ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾನ್ತಿ ತೇ ॥ (10-10)

ತೇಷಾಮೇವಾನುಕಮ್ಪಾರ್ಥಮಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥ (10-11)

– ಎಂದು ಭಗವಂತನೇ ಹೇಳಿರುತ್ತಾನೆ. ಮಿಕ್ಕೆಲ್ಲವನ್ನೂ ಬಿಟ್ಟು ಭಗವಂತನನ್ನೇ ಭಜಿಸುವವರೇ ಆತನನ್ನು ಪಡೆದುಕೊಳ್ಳುವರು. ಅವರಲ್ಲಿ ಕನಿಕರದಿಂದ ಭಗವಂತನೇ ಅವರ ಹೃದಯದಲ್ಲಿದ್ದುಕೊಂಡು ಧಗಧಗನೆ ಉರಿಯುವ ಜ್ಞಾನದೀಪದಿಂದ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸುತ್ತಾನೆ. ಆಚಾರ್ಯರು ತಮ್ಮ ಭಾಷ್ಯದಲ್ಲಿ ಬರೆದಿರುವ ಈ ಜ್ಞಾನದೀಪದ ವರ್ಣನೆಯನ್ನು ತಿಳಿಸಿ ಈ ವಿಷಯಗಳನ್ನು ಇಲ್ಲಿಗೇ ಉಪಸಂಹಾರ ಮಾಡುವೆನು:

''ವಿವೇಕಪ್ರತ್ಯಯ ರೂಪೇಣ ಭಕ್ತಿಪ್ರಸಾದಸ್ನೇಹಾಭಿಷಿಕ್ತೇನ ಮದ್ಭಾವನಾಭಿನಿವೇಶವಾತೇರಿತೇನ ಬ್ರಹ್ಮಚರ್ಯಾದಿ ಸಾಧನಸಂಸ್ಕಾರವತ್ಪ್ರಜ್ಞಾ ವರ್ತಿನಾ ವಿರಕ್ತಾನ್ತಃಕರುಣಾಧಾರೇಣ ವಿಷಯವ್ಯಾವೃತ್ತಚಿತ್ತ ರಾಗದ್ವೇಷಾ ಕಲುಷಿತ ನಿವಾತಾಪವರಕಸ್ಥೇನ ನಿತ್ಯಪ್ರವೃತ್ತೈಕಾಗ್ರ್ಯಧ್ಯಾನಜನಿತಸಮ್ಯಗ್ದರ್ಶನಭಾಸ್ವತಾ

ಜ್ಞಾನದೀಪೇನೇತ್ಯರ್ಥಃ ॥''

ವಿವೇಕ ಪ್ರತ್ಯಯರೂಪವಾದದ್ದು ಈ ಜ್ಞಾನದೀಪವು, ಭಕ್ತಿಯಿಂದಾದ ಪ್ರಸನ್ನತೆಯೆಂಬ ಎಣ್ಣೆಯನ್ನು ಹಾಕಿ ಭಗವಂತನ ಭಾವನೆಯಲ್ಲಿಯೇ ಇಟ್ಟಿರುವ ಹೆಚ್ಚಿನ ಅಭಿಮಾನವೆಂಬ ವಾಯುವಿನಿಂದ ಅದು ಉರಿಯುತ್ತಿರುವದು. ಬ್ರಹ್ಮಚರ್ಯವೇ ಮುಂತಾದ ಸಾಧನಗಳ ಸಂಸ್ಕಾರವೆಂಬ ದೀಪದ ಕಂಬದಲ್ಲಿರುವದು; ಚಿತ್ತವು ವಿಷಯಗಳಿಂದ ಹಿಮ್ಮೆಟ್ಟಿ ರಾಗದ್ವೇಷಗಳಿಂದ ಕದಡದೆ ಇರುವದೆಂಬ ಗಾಳಿಯಿಲ್ಲದ ಹೃದಯವೆಂಬ ಕೋಣೆಯಲ್ಲಿ ಉರಿಯುತ್ತಿರುವದು. ಯಾವಾಗಲೂ ಮಾಡುತ್ತಿರುವ ಏಕಾಗ್ರತೆಯ ಧ್ಯಾನದಿಂದ ಸಮ್ಯಗ್ದರ್ಶನದಿಂದ ಬೆಳಗುತ್ತಿರುವದು. ಇಂಥಾದ್ದು ಈ ಜ್ಞಾನ ದೀಪವು. ನಮ್ಮೆಲ್ಲರಿಗೂ ಆ ಭಗವಂತನ ಭಕ್ತಿಯು ಉದಯಿಸಲಿ! ಆತನ ಅನುಕಂಪೆಯು ನಮ್ಮ ಮೇಲೆ ಆಗಲಿ! ಆತನ ಅನುಗ್ರಹದಿಂದ ಧ್ಯಾನಾದಿಸಾಧನಗಳು ನಮಗೆ ಅಳವಟ್ಟು ನಮ್ಮ ಹೃದಯದಲ್ಲಿ ಈ ಜ್ಞಾನದೀಪವು ಎಂದೆಂದಿಗೂ ಉರಿಯುತ್ತಿರುವಂತೆ ಆಗಲಿ!

* * * * *

# ಅಧ್ಯಾತ್ಮಪ್ರಕಾಶ ಕಾರ್ಯಾಲಯದಿಂದ ಪ್ರಕಟವಾದ ಭಗವದ್ಗೀತಾ ಗ್ರಂಥಗಳು

1. ಗೀತಾಸಾರ್ಥ (ಮೂಲ, ಭಾವಾರ್ಥ, ಟಿಪ್ಪಣಿ)
2. ಗೀತಾಮನನ (ಗೀತೆಯ ಸಾರಭೂತವಾದ 109 ಶ್ಲೋಕಗಳು)
3. ಭಗವದ್ಗೀತೆಯ ಸಾರ ಮತ್ತು ಪ್ರಧಾನೋಪದೇಶಗಳು (ಅಧ್ಯಾಯಗಳ ಸಾರ)
4. ಭಗವದ್ಗೀತೆಯ ಉಪನ್ಯಾಸಗಳು (ಶ್ರೀ ಶ್ರೀಗಳವರು ಸಮಗ್ರ ಗೀತೆಗೆ ನೀಡಿದ ಮನನಪೂರ್ವಕ ಉಪನ್ಯಾಸಗಳು)
5. ಶ್ರೀಭಗವದ್ಗೀತಾರ್ಥಸರ್ವಸ್ವ (ಗೀತೆಯನ್ನು ಪ್ರಸ್ಥಾನತ್ರಯಗಳೊಡನೆ ಹಾಗೂ ಮಹಾಭಾರತದ ಇತರ ಭಾಗಗಳೊಡನೆ ಹೋಲಿಸಿ ಬರೆದಿರುವ ವಿಮರ್ಶಾತ್ಮಕ ಗ್ರಂಥ.
6. ಭಗವದ್ಗೀತಾ ಸಾರವಿಚಾರ (ಕುರ್ತಕೋಟಿ ಮಹಾಭಾಗವತರು ನೀಡಿದ ಗೀತೋಪನ್ಯಾಸಗಳ ಸಂಗ್ರಹ)
7. ಗೀತಾರ್ಥ ಚಂದ್ರಿಕೆ (ಸಂಸ್ಕೃತಬಾರದವರಿಗೂ ಗೀತೆಯ ಹೆಚ್ಚುಗಾರಿಕೆ ಮನದಟ್ಟಾಗುವಂತೆ ಹೊಸಕೆರೆ ಚಿದಂಬರಯ್ಯನವರು ರಚಿಸಿರುವ ಗ್ರಂಥ. ಮೂಲ, ಭಾವಾರ್ಥ, ವಿವರಣೆ)
8. ಗೀತಾಶಾರ್ಥವಿವೇಕ (ಭಗವದ್ಗೀತೆಯಲ್ಲಿ ಉಪಯೋಗಿಸಿರುವ ಸಾಂಖ್ಯ, ಯೋಗ ಮೊದಲಾದ ಶಬ್ದಗಳ ಜಿಜ್ಞಾಸೆ, ಸಂಸ್ಕೃತ ಮತ್ತು ಕನ್ನಡ)
9. ಭಗವದ್ಗೀತಾಭಾಷ್ಯ (ಶ್ರೀಶಂಕರಭಗವತ್ಪಾದರು ರಚಿಸಿರುವ ಭಾಷ್ಯ, ಅನುವಾದ, ಪೀಠಿಕೆ, ಟಿಪ್ಪಣಿ, ಅಧ್ಯಾಯಸಾರಗಳಿಂದ ಕೂಡಿದೆ)
10. ವೇದಾಂತೋಪದಿಷ್ಟತತ್ತ್ವಜ್ಞಾನ (ಉಪನಿಷತ್ತಿನ ಸಾರವೂ ಗೀತೋಪದೇಶವೂ)
11. ಗೀತಾಶಾಸ್ತ್ರೋಪದೇಶಸೋಪಾನ (ಗೀತಾತತ್ತ್ವಗಳನ್ನು ಮನಗಾಣಲು ಏರಬೇಕಾದ ಹಂತಗಳ ಮಾರ್ಗದರ್ಶಿ)
12. ಗೀತಾಶಾಸ್ತ್ರೋಪದೇಶಸೋಪಾನಪಂಕ್ತಿಃ (ಸಂಸ್ಕೃತ)

ಭಗವದ್ಗೀತೆಯು ಅವತರಿಸಿದ ಕಾಲದಿಂದ ಈವರೆಗೂ ಆಚಾರ್ಯಮಹಾ ಪುರುಷರುಗಳು, ಸಾಧುಸಂತರು, ದೇಶಭಕ್ತರು, ವಿದ್ವಾಂಸರು, ರಾಜಕಾರಣಿಗಳು, ವೈದ್ಯರು, ನ್ಯಾಯವಾದಿಗಳು ಮುಂತಾಗಿ ಎಲ್ಲಾ ವರ್ಗದ ಜನರೂ ತಮ್ಮತಮ್ಮ ದೃಷ್ಟಿಕೋನ, ಅನುಭವಗಳ ಆಧಾರದಿಂದ ಗೀತಾರ್ಥವನ್ನು ವಿವರಿಸಿ ವ್ಯಾಖ್ಯಾನ ಮಾಡುತ್ತಲೇ ಇರುತ್ತಾರೆ. ಈ ಪ್ರಯತ್ನವು ಹೀಗೆಯೇ ಮುಂದುವರೆಯುತ್ತದೆಯೆಂದೂ ಹೇಳಬಹುದಾಗಿದೆ. ಆದರೆ ಕನ್ನಡಭಾಷೆಯಲ್ಲಿ ಅಧ್ಯಾತ್ಮವಿದ್ಯೆಯ ಸಾಧನಸಿದ್ಧಾಂತಗಳ ಸಮನ್ವಯ ದಿಂದಲೂ ವ್ಯವಹಾರಪ್ರಪಂಚಕ್ಕೆ ಗೀತೆಯ ಪ್ರಯೋಜನವನ್ನು ಸಮನ್ವಯಗೊಳಿಸಿ ಸರ್ವಸಮ್ಮತವಾದ ವೇದಿಕೆಯ ತಳಹದಿಯಿಂದಲೂ ಗೀತೆಯನ್ನು ವಿವರಣೆಮಾಡಿರುವಂಥ ಮಹಾತ್ಮರಲ್ಲಿ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು ಅಗ್ರಗಣ್ಯರಾಗಿರುತ್ತಾರೆ. ಶ್ರೀಶ್ರೀಗಳವರ ದೃಷ್ಟಿಕೋನದಿಂದ ಗೀತಾರ್ಥವನ್ನು ಮನನ ಮಾಡಬೇಕೆನ್ನುವವರಿಗೆ ಈ ಗ್ರಂಥವು ಅತ್ಯುಪಯುಕ್ತವಾಗಿದೆ.

2025 ₹ 50/-